ಸಂಕಲನ

ವರ್ಷ ೭

ಮೇ + ಜೂನ್

೨೦೦೭ ಕ್ರಿ.ಶ.

ಸಂಪಾದಕರು

ಸಿದ್ಧಲಿಂಗ ಪಟ್ಟಣಶೆಟ್ಟಿ

ಹೇಮಾ ಪಟ್ಟಣಶೆಟ್ಟಿ

ಸಂಕಲನದ ಲೇಖಕರಿಗೆ + ಓದುಗರಿಗೆ ಕೆಲವು ಸೂಚನೆಗಳು

೧. ಲೇಖನಗಳ ಕೈಬರೆಹದ / ಟೈಪ್ ಮಾಡಿದ / ಡಿಟಿಪಿ ಮಾಡಿದ ಮೂಲ ಪ್ರತಿಗಳನ್ನೇ ಕಳಿಸಬೇಕು. ಝೆರಾಕ್ಸ್ ಪ್ರತಿ ಪರಿಶೀಲಿಸಲಾಗುವುದಿಲ್ಲ.

೨. ಲೇಖನಗಳು ಪ್ರಕಟಣೆಗೆ ಸ್ವೀಕೃತವಾದರೆ ಅವು ತಲುಪಿದ ೨ ತಿಂಗಳೊಳಗೆ ತಿಳಿಸಲಾಗುವುದು.

೩. ಸಂಕಲನದ ೧ ಸಂಚಿಕೆ ಪ್ರಕಟವಾಗುವಾಗ ಅದರ ಮುಂದಿನ ೩ ಸಂಚಿಕೆಗಳಿಗಾಗಿ ಆಯ್ದ ಲೇಖನಗಳು ಡಿಟಿಪಿ ಆಗಿ ಸಿದ್ಧವಾಗಿರುವುದರಿಂದ ಯಾವುದೇ ಹೊಸ ಲೇಖನ ಕನಿಷ್ಠ ನಾಲ್ಕಾರು ತಿಂಗಳ ನಂತರ ಪ್ರಕಟವಾಗುತ್ತದೆ. ಆದ್ದರಿಂದ ಲೇಖಕರು ಅನಗತ್ಯ ಕುತೂಹಲ ಅಥವಾ ಅವಸರ ತಳೆಯದಿರಲು ಕೋರಿಕೆ.

೪. ಉತ್ತರವನ್ನು ನಿರೀಕ್ಷಿಸಿ ಯಾರೂ ಸ್ವವಿಳಾಸದ ಲಕೋಟೆ ಅಥವಾ ಅಂಚೆಚೀಟಿ ಕಳಿಸುವುದು ಬೇಡ. ಕವಿತೆಗಳನ್ನು ಹೊರತುಪಡಿಸಿ ಅಸ್ವೀಕೃತ ಲೇಖನಗಳನ್ನು ಸಂಕಲನದ ವೆಚ್ಚದಲ್ಲಿಯೇ ಆಯಾ ಲೇಖಕರಿಗೆ ಮರಳಿಸಲಾಗುವುದು.

೫. **ಪರಿಶೀಲನೆಗೆ ಪುಸ್ತಕದ ೨ ಪ್ರತಿ ಕಳಿಸಿದರೆ ಮಾತ್ರ ಪರಿಗಣಿಸಲಾಗುವುದು.** ಎರಡು ಪ್ರತಿ ಸ್ವೀಕರಿಸಿದ ಮಾತ್ರಕ್ಕೆ ಅದರ ಪರಿಶೀಲನೆ ಮಾಡಿಸಲೇಬೇಕೆಂಬುದು ಸಂಕಲನಕ್ಕೆ ಬಂಧನಕಾರಿಯಲ್ಲ. ಒಮ್ಮೊಮ್ಮೆ ಪರಿಶೀಲಿತ ವಿಮರ್ಶಾಲೇಖನ ಪ್ರಕಟಣೆಗೆ ಸಿಗುವುದು ಅತಿ ವಿಳಂಬದ್ದೂ ಕಷ್ಟದ್ದೂ ಆಗಬಹುದಾಗಿದೆ.

೬. ಜನೆವರಿ, ಮಾರ್ಚ್, ಮೇ, ಜುಲಾಯಿ, ಸಪ್ಟಂಬರ್, ನವಂಬರ್ ತಿಂಗಳಲ್ಲಿ ಪ್ರಕಟವಾಗುವ ಸಂಚಿಕೆಗಳು ಸಕಾಲದಲ್ಲಿ ಚಂದಾಹಣ ಕೊಟ್ಟ ಎಲ್ಲರಿಗೂ ಸಾಮಾನ್ಯವಾಗಿ ಆಯಾ ತಿಂಗಳ ೧೦-೧೨ ನೇ ದಿನಾಂಕದೊಳಗಾಗಿ ತಲುಪುತ್ತವೆ.

೭. ಲೇಖಕರು ತಮ್ಮ ಒಳ್ಳೆಯ ಬರೆಹಗಳನ್ನು ಕಳಿಸುವುದರೊಂದಿಗೆ ತಮ್ಮ ಗಮನಕ್ಕೆ ಬರುವ ಹೊಸ ಲೇಖಕರ ಒಳ್ಳೆಯ ಲೇಖನಗಳನ್ನೂ ಸಂಕಲನಕ್ಕೆ ಕಳಿಸಲು ಪ್ರೇರೇಪಿಸಿರಿ.

೮. ಪ್ರಕಟವಾಗುವ ಪ್ರತಿಯೊಂದು ಲೇಖನಕ್ಕೆ ಸಾಂಕೇತಿಕ ಗೌರವಧನ ರೂ. ೧೦೦/- ಲೇಖನ ಪ್ರಕಟವಾದ ಎರಡು ವಾರದೊಳಗಾಗಿ ಕಳಿಸಲಾಗುವುದು.

ಸಂಕಲನ

ಮೇ + ಜೂನ್ ೨೦೦೭

ಸಂಪಾದಕರು

ಸಿದ್ಧಲಿಂಗ ಪಟ್ಟಣಶೆಟ್ಟಿ

ಹೇಮಾ ಪಟ್ಟಣಶೆಟ್ಟಿ

ಸಂಕಲನ ಪ್ರಕಾಶನ

ಹೂಮನೆ, ಶ್ರೀದೇವಿನಗರ, ವಿದ್ಯಾಗಿರಿ

ಧಾರವಾಡ - ೫೮೦ ೦೦೪

R N I No. KARKAN 14160 / 10 / 1 / 2002 - TC

SANKALANA :

A Kannada Literary Magazine

Volume 6, Issue 3 : May + June 2007

Edited by Dr. Siddhaling Pattanshetti

Hoomane, Shridevinagar, Vidyagiri, Dharwad - 580 004

Printed by Saraswati Offset Printers, Shivaji Road, Dharwad - 580 001

•

•

•

ಸಂಕಲನ - ೩೩

ಸಂಪುಟ ೬, ಸಂಚಿಕೆ ೩ : ಮೇ + ಜೂನ್ ೨೦೦೭

ಸಂಪಾದಕರು : ಡಾ. ಸಿದ್ಧಲಿಂಗ ಪಟ್ಟಣಶೆಟ್ಟಿ ಮತ್ತು ಡಾ. ಹೇಮಾ ಪಟ್ಟಣಶೆಟ್ಟಿ

ಹೂಮನೆ, ಶ್ರೀದೇವಿನಗರ, ವಿದ್ಯಾಗಿರಿ, ಧಾರವಾಡ - ೫೮೦ ೦೦೪

✆ : ೦೮೩೬-೨೪೬ ೨೭೧೮

ಸಿ. ಪ. : ೯೪೪೮೬ ೩೦೬೩೭, ಹೇಮಾ : ೯೪೪೮೮ ೬೧೬೦೪

•

ಸಂಕಲನದಲ್ಲಿ ಪ್ರಕಟವಾದ ಲೇಖನಗಳಲ್ಲಿ ವ್ಯಕ್ತವಾದ
ಅಭಿಪ್ರಾಯಗಳ ಹೊಣೆ, ಹಕ್ಕು ಆಯಾ ಲೇಖಕರವು.

•

ವಾರ್ಷಿಕ ಚಂದಾ ರೂ. ೨೦೦/- (ಚೆಕ್ ೨೨೦/-)

೨೦೦೫, ೨೦೦೬, ೨೦೦೭ ಈ ೩ ವರ್ಷಗಳ ಚಂದಾ ರೂ. ೫೦೦/- (ಚೆಕ್ ೫೫೦/-)

•

ಡಿಟಿಪಿ : ಬಿಜಿಗ್ರಾಫಿಕ್ಸ್, ೧ನೇ ಕ್ರಾಸ್, ಜೋಶಿ ಫಾರ್ಮ್, ಧಾರವಾಡ - ೫೮೦ ೦೦೮
ಮೊಬೈಲ್ : ೯೯೮೦೩ ೮೧೮೬೯

ಸಂಕಲನ -೩೩ : ಪರಿವಿಡಿ

೧. ಒನ್ನೇಪುಟ : ಸಿದ್ಧಲಿಂಗ ಪಟ್ಟಣಶೆಟ್ಟಿ ೫

೨. ತೇಜಸ್ವಿ : ಹಕ್ಕಿ : ಶ್ರದ್ಧೆ — ಪ್ರಸನ್ನ ೬-೮

೩. ಅಸಾವರೀ — ಬಿ. ಎಸ್. ನಾಗರತ್ನಕುಮಾರಿ ೯-೧೪

೪. ಪಾ. ವೆಂ. ಆಚಾರ್ಯರ 'ಹೌಸಿಂಗ್ ಕಾಲನಿ' — ಬಸವರಾಜ ವಕ್ಕುಂದ ೧೫-೨೦

೫. ಪ್ರಭಾವಿಭಾವ ಕವಿತೆ — ಎಸ್. ವಿ. ಪ್ರಭಾವತಿ ೨೦-೨೨

೬. ಕಂನಾಡಿಗಾ ನಾರಾಯಣ ಅವರ 'ಕಾಂಡ' — ರವಿ ಉಪಾಧ್ಯ ೨೨-೩೨

೭. ಕರ್ನಾಟಕದ ಸಾಂಸ್ಕೃತಿಕ ಸಂಪತ್ತು — ಜೆ. ಡಿ. ಜೋಶಿ ೩೩-೩೭

೮. ಅಯ್ದು ಗಜಲ್‌ಗಳು — ವೈ. ಬಿ. ಹಾಲಬಾವಿ ೩೮-೩೯

೯. ಭೈರಪ್ಪನವರ ಅವಿದ್ಯೆಯ 'ಆವರಣ' — ಆರ್. ತಾರಿಣಿ ಶುಭದಾಯಿನಿ ೪೦-೪೫

೧೦. ಸಲಿಲದೊಂದಿಗೆ ಸಲ್ಲ ಸಲುಗೆ — ಚನ್ನಪ್ಪ ಅಂಗಡಿ ಬಮ್ಮನಹಳ್ಳಿ ೪೬-೪೭

೧೧. ಎರಡು ಕವಿತೆಗಳು — ಹೊರೆಯಾಲ ದೊರೆಸ್ವಾಮಿ ೪೭-೪೮

೧೨. ಕಲೆ : ಆಧುನಿಕ ಸಂದರ್ಭ — ಚಂದ್ರಕಾಂತ ಕುಸನೂರ ೪೯-೫೪

೧೩. ಕುರುಡುಗಣ್ಣು — ದಮಯಂತಿ ನರೇಗಲ್ಲ ೫೫-೬೪

೧೪. ನನ್ನ ಶಾಲಾ ಗುರುಗಳು : ಗೌರವ -೧೫ — ವಿಜಯಕಾಂತ ಪಾಟೀಲ ೬೫-೬೮

೧೫. ಸುಖಾಸುಮ್ಮನೆ ಮರುಗಬೇಡ — ಶ್ರೀಧರ ಪಿಸ್ಸೆ ೬೯-೭೦

೧೬. ಪುಸ್ತಕ ಪರಿಶೀಲನೆ : ೭೦-೭೬

೧. ಕೊಳ್ಳಿ : ಜಿ. ಎಸ್. ಭಟ್ಟ — ಸರ್ವಜಿತ

೨. ಹೃದಯ ಸಮುದ್ರ : ಗುರುಮೂರ್ತಿ ಪೆಂಡಕೂರು — ದೇಶಪಾಂಡೆ ಸುಬ್ಬರಾಯ

೩. 'ರಿಡಿಂಗ್' ಇಂಗ್ಲಂಡ್ ಪ್ರವಾಸಕಥನ : ಬಿ.ಆರ್.ನಾಡಗೌಡ — ವಸಂತ ಕುಲಕರ್ಣಿ

೪. ದರ'ಬಾರಿ'ನಲ್ಲೊಂದು ಸಂಜೆ : ಪ್ರಾಣೇಶ ಜಮಖಂಡಿ — ಬಿ. ಜಿ. ಚನ್ನೇಶ್

೫. ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಯುದ್ಧಕಲೆ : ಶ್ರೀಧರ ಎಚ್. ಜಿ.
— ನಾ. ದಾಮೋದರ ಶೆಟ್ಟಿ

೬. ಕುಮಾರವ್ಯಾಸ : ಪುನರ್ ಪರಿಶೀಲನೆ :ಚನ್ನಬಸವಪ್ಪ ಬೆಟ್ಟದೂರು
— ಶ್ಯಾಮಸುಂದರ ಬಿದರಕುಂದಿ

೭. ಮೃತ್ಯುಂಜಯನ ಮೃತ್ಯುಪತ್ರ : ವೆಂಕಟೇಶ ಕುಲಕರಣಿ
— ಹೆಚ್. ಎ. ಪಾರ್ಶ್ವನಾಥ್

೧೭. ಸಂಕಲನ : ಅನಿಸಿಕೆ ೭೬-೭೭

೧೮. ಕಡೇಪುಟ : ಸಿದ್ಧಲಿಂಗ ಪಟ್ಟಣಶೆಟ್ಟಿ ೭೮-೮೦

ಸಂಪಾದಕರ ಮಾತು

ಸಂಕಲನ-೩೧ ರಲ್ಲಿ 'ನನ್ನ ಶಾಲಾ ಗುರುಗಳು'
ಮಾಲಿಕೆಯ ೧೪ ನೇ ಲೇಖನ,
ಸಂಕಲನ-೩೨ ರಲ್ಲಿ 'ನನ್ನ ಅವ್ವ ನನ್ನ ಅಪ್ಪ'
ಮಾಲಿಕೆಯ ೩೧ ನೇ ಲೇಖನ ಪ್ರಕಟಿಸಿದ್ದೆವು.
ಈ ಸಂಚಿಕೆಯಲ್ಲಿ 'ನನ್ನ ಶಾಲಾ ಗುರುಗಳು'
ಮಾಲಿಕೆಯ ೧೫ ನೇ ಲೇಖನ ಪ್ರಕಟಿಸಿದ್ದೇವೆ.
ಇನ್ನು ಮುಂದೆ ಇದೇ ರೀತಿ ಕ್ರಮವಾಗಿ ಒಂದೊಂದು
ಸಂಚಿಕೆಯಲ್ಲಿ ಒಂದೊಂದು ಮಾಲಿಕೆಯ ಲೇಖನವನ್ನು
ಪ್ರಕಟಿಸಲಾಗುವುದು.

ಪ್ರೊಫೆಸರ್ ಎಸ್. ಶೆಟ್ಟರ್ ಅವರ
'ಕವಿರಾಜಮಾರ್ಗಮಂಥನ'
ವಿಶೇಷ ಲೇಖನಮಾಲೆ-೧೩ ನೆಯ, ಮತ್ತು
ದ್ರಾವಿಡ ಸಂಬಂಧ ಕುರಿತ ೬ನೆಯ ಲೇಖನ
ಈ ಸಂಚಿಕೆಯಲ್ಲಿ ಪ್ರಕಟಗೊಳ್ಳಬೇಕಿತ್ತು.
ಇದು ದ್ರಾವಿಡ ಸಂಬಂಧ ವಿಷಯದ ಕೊನೆಯ ಲೇಖನ.
ಪ್ರೊ. ಶೆಟ್ಟರ್ ಅವರು ಬಾಂಗ್ಲಾದೇಶದಲ್ಲಿ
ದೀರ್ಘ ಕಾಲ ಪ್ರವಾಸದಲ್ಲಿ ಇದ್ದುದರಿಂದ
ಪ್ರಸ್ತುತ ಲೇಖನ
ನಮಗೆ ಬಹಳ ತಡವಾಗಿ ಸಿಕ್ಕಿತು.
ಹೀಗಾಗಿ ಅದನ್ನು ಮುಂದಿನ ಸಂಚಿಕೆ
ಸಂಕಲನ-೩೪ರಲ್ಲಿ ಪ್ರಕಟಿಸಲಾಗುವುದು.

ಅದರ ನಂತರ
ಕವಿರಾಜಮಾರ್ಗ ಮತ್ತು ಕನ್ನಡ ಕರ್ನಾಟಕ ಸಂಬಂಧ ಕುರಿತ
ಅವರ ಉಳಿದ ಲೇಖನಗಳನ್ನು ಈ ಮಾಲೆಯಲ್ಲಿ
ಸಂಕಲನ-೩೫ ರಿಂದ ಕ್ರಮಶಃ ಪ್ರಕಟಿಸುತ್ತೇವೆ.

೧ ಮೇ ೨೦೦೭ — ಸಿದ್ಧಲಿಂಗ ಪಟ್ಟಣಶೆಟ್ಟಿ
ಹೂಮನೆ, ಧಾರವಾಡ-೪ — ಹೇಮಾ ಪಟ್ಟಣಶೆಟ್ಟಿ

ನನಗ ಇವತ್ತ ಭಾಳ ಖುಶಿ ಆಗೇತಿ. ಬರೊಬ್ಬರ ೪೩ ವರ್ಷದ ಹಿಂದ ಧಾರವಾಡದ ಒಬ್ಬ ದೊಡ್ಡ ಸಾಹಿತಿಗಳ ಮನಿಮುಂದ ನಿಂತಿದ್ದು, ಭಯ-ಭಕ್ತಿಯಿಂದ ಬಾಗಲಾ ತಟ್ಟಿದ್ದು, ಬಾಗಲಾ ತಗದಾಗ ಸ್ವರ್ಗನ್ಅ ಸ್ವತಃ ಎದುರಿಗೆ ನಿಂತಂಗ ಅನಿಸಿದ್ದು, 'ಅತ್ಯಂತ ಆದರಪೂರ್ವಕ' ಅಂತ ಅವರ ಹೆಸರು ಬರೆದು ನನ್ನ ಮೊಟ್ಟಮೊದಲ ಕವನಸಂಗ್ರಹದ ೧ ಪ್ರತಿ ಅವರಿಗೆ ಕೊಟ್ಟಿದ್ದು, ಅದನ್ನ ತಿರುವಿ ಹಾಕ್ಕೊಂತ ಅವರು ನನ್ನ ಬೆನ್ನು ತಟ್ಟಿದ್ದು, 'ಇವತ್ತು ಚಾ ಬ್ಯಾಡ, ನಿನಗ ಬೋರ್ನ್‌ವಿಟಾ ಕುಡಸ್ತೀನಿ' ಅಂತ ಅವರು ಚಹಾದ ಕಪ್ ತುಂಬ ಬೋರ್ನ್‌ವಿಟಾ ತಂದುಕೊಟ್ಟಿದ್ದು ಎಲ್ಲಾ ನಿಚ್ಚಳ ನೆನಪಾಗೇತಿ.

ಆಗಿನ ಧಾರವಾಡದ ಓಣಿ ಸಂದಿ ಪ್ಯಾಟಿ ಸಂತಿ ಅಂಗಡಿ ಮಂದಿ ಎಲ್ಲಾ ಕಣ್ಮುಂದ ಬರಾಕ್ಹತ್ತ್ಯಾವು. ಈಗ ಸುಭಾಸ ರೋಡಿನ ಬಸ್‌ಸ್ಟ್ಯಾಂಡ್ ಇರುವ ಜಾಗಾದಿಂದ ಹೆಣ್ಣುಮಕ್ಕಳ ಟ್ರೇನಿಂಗ್ ಕಾಲೇಜ್ ಗೇಟಿನ ತನಕ ಇದ್ದ ದೊಡ್ಡ ಗಟಾರದ ದಂಡೀ ಗುಂಟ ಅರ್ಭಾಟ ಮೋಡಕಾಬಜಾರ್ ಇತ್ತು. ಊರಿನ ಎಲ್ಲಾ ಮಂದಿಗೆ, ಮನಿಗಳಿಗೆ ಏನ್ ಬೇಕೋ ಅದೆಲ್ಲಾ ಅಲ್ಲಿ ಸಿಗತಿತ್ತು. ಮಂಗಳವಾರ ಸಂತಿ ವಾರಕ್ಕೊಮ್ಮೆ ನಡೀತಿತ್ತು, ಮೋಡಕಾದ ಸಂತಿ ಮಾತ್ರ ದಿನಾ ನಡೀತಿತ್ತು. ಅಲ್ಲಿ ಕಬ್ಬಿಣ, ಕಟಗಿ, ಕಪಾಟು, ಭಾಂಡೆ, ಬಾಟಲಿ, ಪುಸ್ತಕಾ ಎಲ್ಲಾ ಸಿಗತಿದ್ದು. ನಮ್ಮ ಊರಿನ ಅನೇಕರ ಸಾಮಾನು ಅವರ ಪಾಲಿಗೆ ಹಳೇವಾದ ಕೂಡಲೇ ಮೋಡಕಾಬಜಾರದ ಮೂಲಕ ಮತ್ತ ಬ್ಯಾರೆಬ್ಯಾರೆ ಮನಿ ಸೇರಿ ಹೊಸಾವಾಗಿ ಬಿಡತಿದ್ದು.

ಆಯಿತಾರಪ್ಯಾಟಿಯಿಂದ ಹೊಂಟರ ಹಾಲಗೇರಿ ಕೆರೀ ದಂಡೀ ಮ್ಯಾಲೆ ಬಗರಿ ಮಾಡಾವರನ್ನ, ಬೆಣ್ಣಿ ಮೆಣಸಿನಕಾಯಿ ಅಕ್ಕಡಿಕಾಳು ಮಾರಾವರನ್ನ, ಮಂಗ್ಯಾನ್ನ ಆಡಸಾವರನ್ನ, ಬಂಬೈ ದೇಖೋ ತೋರಸವರನ್ನ ನೋಡಕೊಂತ, ಈಗಿನ ವಿವೇಕಾನಂದ ಪಾರ್ಕ್ ಇದ್ದಲ್ಲೇ ಆಗ ಇದ್ದ ಧಾರವಾಡದ ಮುಖ್ಯ ಮೋಟರ ಅಡ್ಡೆ ನೋಡಕೊಂತ ಈ ಮೋಡಕಾಬಜಾರಕ್ಕ ಬರೂದಂದರ ದೊಡ್ಡ ಸಡಗರ ಅನಸತಿತ್ತು.

ನಾನು ಎಂ.ಎ. ಕಲತು ನೌಕರಿ ಮಾಡಾಕ ಸುರು ಮಾಡೂಹೊತ್ತಿಗೆ ಈ ಮೋಡಕಾಬಜಾರ್ ದನದ ಪ್ಯಾಟೀ ಕಡೆ ಹೋತು. ಮೋಡಕಾದ ಜಾಗಾದ ಮ್ಯಾಲ ಗಚ್ಚಿನ ಗಟಾರ ಕಟ್ಟಿಸಿ ಮುನಸಿಪಾಲ್ಟಿಯವರು ಸಾಲಕ ಅಂಗಡಿ ಕಟ್ಟಿಸಿದರು. ಅಚೀ ಕಡೆ ತುದಿಗೆ ಒಂದು ಚಾದಂಗಡಿನೂ ಬಂತು. ನಮ್ಮಪ್ಪನ ಕಾಲಕ್ಕ ಇದ್ದ ಎಡ್ವರ್ಡ್ ಪಾರ್ಕು ನಮ್ಮ ಕಾಲಕ್ಕ ಆರ್ಝಾದ್ 'ಪಾರ್ಕ' ಆಗಿ ಈಗ 'ಉಪವನ' ಆಗೇತಿ.

ಮೋಡಕಾಬಜಾರದಾಗ ಒಂದ ಕಡೆ ರದ್ದಿಯೊಳಗ ಬಂದ ಪುಸ್ತಕಾ ಹರವಿರತಿದ್ದರು. ನಮಗ ಬೇಕಾದ ಕತಿ ಕಾದಂಬರಿ ಚೌಕಾಸಿ ಮಾಡಿ ಕೊಳ್ಳತಿದ್ವಿ. ಯಾರ್‍ಯಾರೋ ಲೇಖಕರು ತಮಗ ಬೇಕಾದವರಿಗೆ ಹೆಸರು ಬರದು 'ಆದರಪೂರ್ವಕ' ಕೊಟ್ಟಿದ್ದ ಎಷ್ಟೋ ಪುಸ್ತಕ ನಮಗ ರದ್ದಿಯೊಳಗ ಸಿಕ್ಕಾಗ ಮಜಾ ಅನಸ್ತಿತ್ತು, ಬ್ಯಾಸರ ಆಕ್ಕಿತ್ತು, ಅಭಿಮಾನ ಅನಸ್ತಿತ್ತು. ನಾವು ಅಂಥವನ್ನ ಕೊಂಡು 'ಇಂಥಿಂಥವರು ಇಂಥಿಂಥವರಿಗೆ ಕೊಟ್ಟಿದ್ದುವು' ಅಂತ ಜತನ ಮಾಡಿ ಇಟಗೋತಿದ್ವಿ. 'ಇಸಗೊಂಡವರು' ಕೆಲವರು ಹೆಸರಿದ್ದ ಹಾಳಿ ಹರದು ರದ್ದಿಗೆ ಹಾಕಿರತಿದ್ದರು, ಕೆಲವರು ಹೆಂಗಿದ್ದುವೋ ಹಂಗ್ಅ ಮಾರಿರತಿದ್ದರು. ಆಗ ಇಸಗೊಂಡವರ ಮರ್‍ಯಾದೀನೂ ಮೋಡಕಾಕ ಬಂದಿರತಿತ್ತು.

ಇವತ್ತು ಒಂದು ಅದ್ಭುತ ಘಟಿಸ್ತು. ೪೩ ವರ್ಷದ ಹಿಂದ ಕಲ್ಯಾಣನಗರದ ಆ ಸಾಹಿತಿಗೆ 'ಆದರಪೂರ್ವಕ' ಬರೆದುಕೊಟ್ಟಿದ್ದ ನನ್ನ ಪುಸ್ತಕ ಈಗಿನ ಹೊಸಾ ಸೆಕೆಂಡ್‌ಹ್ಯಾಂಡ್ ರದ್ದೀ ಅಂಗಡ್ಯಾಗ ಅಚಾನಕ್ ಸಿಕ್ಕಿತು. ಅವತ್ತಿನ ದೀಡ ರುಪಾಯಿದ ಪುಸ್ತಕಾ ದೀಡ ರುಪಾಯಿಗೇ ಕೊಂಡೆ. ಅವತ್ತಿನ ನನ್ನ ಅಕ್ಷರ ಮಸಿ ಈಗಲೂ ಹಂಗ್ಅ ಅದಾವು. ಕಪ್ ತುಂಬ ಬೋರ್ನ್‌ವಿಟಾ ಈಗಲೂ ಕುಡ್ಯಾಕ್ಹತ್ತೇನಿ ಅನಿಸೇತಿ.

ಇವತ್ತ ನನಗ ಭಾಳ ಭಾಳ ಖುಶಿ ಆಗೇತಿ....

ತೇಜಸ್ವಿ : ಹಕ್ಕಿ : ಶ್ರದ್ಧೆ

ಪ್ರಸನ್ನ

ತೇಜಸ್ವಿಯವರ ಸಾವಿನ ಸುದ್ದಿ, ನೆನ್ನೆ (೦೫.೦೪.೨೦೦೭) ಕೇಳಿದಾಗ ಅದು ಎಷ್ಟು ಅನಿರೀಕ್ಷಿತವಾಗಿತ್ತೆಂದರೆ, ಅರ್ಧ ದಿನ ಏನೂ ಮಾಡದೆ, ಹೇಗೆ ಪ್ರತಿಕ್ರಿಯಿಸುವುದೆಂದು ತಿಳಿಯದೆ ಕಾಲ ಕಳೆದೆ. ಆಗ ನನ್ನ ಹಳೆಯ ಕಡತಗಳ ಮಧ್ಯೆ ಕೆದಕುತ್ತ ಕುಳಿತಿದ್ದೆ. ಈ ಟಿಪ್ಪಣಿ ಸಿಕ್ಕಿತು. ಅವರ ಹಕ್ಕಿ ಚಿತ್ರಗಳ ಪ್ರದರ್ಶನವನ್ನು ಮೈಸೂರಿನ ರಂಗಾಯಣದಲ್ಲಿ, ಲಂಕೇಶ್ ಗ್ಯಾಲರಿಯಲ್ಲಿ (೩೦.೦೮.೦೩–೦೭.೦೯.೦೩) ಏರ್ಪಡಿಸಿದ್ದೆವು. ಆಗ (೨೯.೦೮.೦೩) ಬರೆದ ಟಿಪ್ಪಣಿಯಿದು. ನಾಲ್ಕು ಜನ ಓದಲಿ ಅನ್ನಿಸಿತು.

ಬದಲಿ ಮಾರ್ಗವನ್ನು ಸೂಚಿಸುತ್ತಿರುವ ಮೂಡಿಗೆರೆ ಹಕ್ಕಿಗಳು

ಪೂರ್ಣಚಂದ್ರ ತೇಜಸ್ವಿಯವರದ್ದು ಕನ್ನಡ ಸಾಹಿತ್ಯದಲ್ಲಿ ಬಹು ದೊಡ್ಡ ಹೆಸರು. ಸಮಕಾಲೀನ ಗದ್ಯ ಸಾಹಿತ್ಯದಲ್ಲಂತೂ ಮೊದಲಿಗೆ ನಿಲ್ಲುವ ಹೆಸರು. ಆದರೆ ತೇಜಸ್ವಿ ಅಷ್ಟೇ ಅಲ್ಲ, ಬರವಣಿಗೆಯೆಂಬ ಖಡ್ಗಕ್ಕೆ ಮಾತ್ರವೇ ಕೈಹಚ್ಚಿ ಕೂರಲಿಲ್ಲ ಅವರ ವ್ಯಕ್ತಿತ್ವ.

ತೇಜಸ್ವಿಯವರು ನವೋದಯದ ನಂತರದ ತಲೆಮಾರಿನವರಾದರೂ ನವೋದಯದ ಹಲವು ಒಳ್ಳೆಯ ಗುಣಗಳನ್ನು ಉಳಿಸಿಕೊಂಡರು, ನವ್ಯರ ನಡುವೆ ನಿಂದರೂ ನವ್ಯದ ಹಲವು ದುರ್ಗುಣಗಳಿಂದ ದೂರ ಉಳಿದರು. ನಾನು ಪಟ್ಟಿ ಮಾಡುವ, ಅವರ ಒಳ್ಳೆಯ ಗುಣಗಳಲ್ಲಿ ನಗರೀಕರಣದ ಬಗೆಗಿನ ಅವರ ಅನುಮಾನ, ಬುದ್ಧಿಪ್ರಣೀತ ಜಗತ್ತಿನ ಬಗೆಗಿನ ಅಸಹನೆ ಮುಖ್ಯವಾದವುಗಳು. ಆದರೆ ಅನುಮಾನ, ಅಸಹನೆಗಳು ಪ್ರತಿರೋಧದ ಮಾತಾಯಿತು, ಮೂಡಿಗೆರೆಯ ಈ ಹಕ್ಕಿಗಳು ಯಾವ ಪ್ರತಿರೋಧವೂ ಇಲ್ಲದೆ– ತಮ್ಮ ಕೊಕ್ಕು ಹಾಗೂ ಕಣ್ಣುಗಳಿಂದ, ಕನ್ನಡ ಸಂಸ್ಕೃತಿಗೆ ಬದಲಿ ಮಾರ್ಗವೊಂದನ್ನು ಸೂಚಿಸುತ್ತಿವೆ ಎಂಬುದು ನನ್ನ ಅನ್ನಿಸಿಕೆ.

ತೇಜಸ್ವಿ, ತಮ್ಮನ್ನು ಮಹಾ ಸೋಮಾರಿ, ಉಡಾಫೆ ಮನುಷ್ಯ.... ತನ್ನದು ದೊಗಲೆಚೀಲದಂತಹ ವ್ಯಕ್ತಿತ್ವ ಎಂದು ತೋರಿಸಿಕೊಳ್ಳುತ್ತಾರೆ. ವಿಪರೀತ ವಿರೋಧಾಭಾಸಗಳ ವ್ಯಕ್ತಿ ತಾನು ಎಂಬಂತೆ ತನ್ನನ್ನೇ ಚಿತ್ರಿಸಿಕೊಳ್ಳುತ್ತಾರೆ.

ಆದರೆ ದಿನಕ್ಕೆ ಸರಾಸರಿ ಹದಿನಾರು ಗಂಟೆಗಳ ಕಾಲ ಕಾಯಕ ನಡೆಸುತ್ತ ಬಂದಿರುವ ಸಂಗತಿಯನ್ನು ಬೇಕೆಂದೇ ಬಚ್ಚಿಡುತ್ತಾರೆ. ಮೂಡಿಗೆರೆಯ ಈ ಹಕ್ಕಿಗಳು ನಾಲ್ಕು ವರ್ಷಗಳ ಅವಿರತ ತಪಸ್ಸಿನ ಫಲ.



ತೇಜಸ್ವಿ ನಗರದಲ್ಲಿದ್ದಷ್ಟು ದಿನ ಕಾಡಿನ ಬಗ್ಗೆ ಬರೆದರು, ಕಾಡು ಸೇರಿದ ದಿನ ಕಂಪ್ಯೂಟರು ಹಾಗೂ ಕ್ಯಾಮರಾ ಹಿಡಿದು ವಿಜ್ಞಾನದ ಹಿಂದೆ ತಿರುಗಿದರು, ರಾಜಕೀಯದಲ್ಲಿ ಆಸಕ್ತರಾಗಿಯೂ ರಾಜಕೀಯದಿಂದ ದೂರ ಉಳಿದರು. ಸಾಹಿತಿಯಾಗಿದ್ದುಕೊಂಡೇ ಪುಸ್ತಕ ಪ್ರಕಾಶನದ ವ್ಯವಹಾರ ಮಾಡಿದರು, ಬೇಸಾಯಗಾರನಾಗಿದ್ದುಕೊಂಡೇ ಶಿಕಾರಿ ಮಾಡಿದರು... ಇವೆಲ್ಲವೂ ಅನಿವಾರ್ಯ ತೇಜಸ್ವಿಯೇ ಹೌದು.



ಕುವೆಂಪು ಮಗನಾಗಿ ಹಾಗೂ ಅವರಷ್ಟೇ ಮಹತ್ವಾಕಾಂಕ್ಷೆಯ ಸಾಹಿತಿಯಾಗಿ ತೇಜಸ್ವಿಯವರಿಗೆ ಎರಡೆರಡು ಪಾತ್ರ ನಿರ್ವಹಿಸುವುದು ಅನಿವಾರ್ಯವಾಗಿರಬೇಕು. ಕುವೆಂಪು ಅಚ್ಚುಕಟ್ಟು, ಕುವೆಂಪು ವಿಶ್ವಮಾನವ, ಕುವೆಂಪು ಘನತೆವೆತ್ತವರು, ಕುವೆಂಪು ಪ್ರತಿಭಾವಂತರು, ಇವೆಲ್ಲಕ್ಕಿಂತ ಭಿನ್ನವಾಗಿ ತೇಜಸ್ವಿ ತನ್ನ ಬಾಹ್ಯ ರೂಪವನ್ನು ಒಂದು ಪಾತ್ರವನ್ನಾಗಿಸಿಕೊಂಡು, ಒಳಗಿನ ವ್ಯಕ್ತಿತ್ವವನ್ನು ಬಚ್ಚಿಟುಕೊಂಡರು. ತೇಜಸ್ವಿಯವರ ಬಗ್ಗೆ ಯೋಚಿಸುವಾಗ ನನಗೆ ಪ್ರಖ್ಯಾತ ಸ್ವೀಡಿಶ್ ಸಾಹಿತಿ ಯಾನ್ ಮಿರ್ಡಲ್ ನೆನಪಿಗೆ ಬರುತ್ತಾರೆ. ಯಾನ್ ಮಿರ್ಡಲ್ ಅಪ್ಪ ಗುನ್ನಾರ್ ಮಿರ್ಡಲ್. ಆತ ವಿಶ್ವವಿಖ್ಯಾತ ಅರ್ಥಶಾಸ್ತ್ರಜ್ಞ, ಮಹಾನ್ ದಾರ್ಶನಿಕ, ನೊಬೆಲ್ ಪ್ರಶಸ್ತಿ ಪಡೆದವರು.

ಆತನ ತಾಯಿ ಕೂಡ ಅಷ್ಟೇ ಖ್ಯಾತನಾಮಳು. ಇಬ್ಬಿಬ್ಬರು ಖ್ಯಾತನಾಮರ ಮಗ ಯಾನ್ ಮಿರ್ಡಲ್ ತನ್ನನ್ನು, ವಿಗ್ರಹಭಂಜಕನನ್ನಾಗಿ ಚಿತ್ರಿಸಿಕೊಂಡಿದ್ದಾರೆ.

ಇಡೀ ಸ್ವೀಡನ್ ದೇಶ ಮೃದುಸಮಾಜವಾದಿ ಭೋಳೆತನದಲ್ಲಿ ಮುಳುಗಿದ್ದಾಗ ಈತ ಉಗ್ರಗಾಮಿ ಮಾವೋವಾದಿಯಂತೆ ಆಡುತ್ತ ಚೀನದ ಸಾಂಸ್ಕೃತಿಕ ಕ್ರಾಂತಿಯನ್ನು ಹೆಗಲ ಮೇಲೆ ಹೊತ್ತು ತಿರುಗಿದರು. ಭಾರತ, ಆಫ್ಘಾನಿಸ್ತಾನಗಳ ಕೊಳೆಗೇರಿಗಳಲ್ಲಿ ಬದುಕಿ ಪುಸ್ತಕ ಬರೆದರು. 'The Confessions of a Disloyal European' ಎಂಬುದು ಅವರ ಪ್ರಖ್ಯಾತ ಕೃತಿಗಳಲ್ಲೊಂದು.

ಕನ್ನಡದ ಹೆಚ್ಚಿನ ಸಾಹಿತಿಗಳಿಗೆ ಕ್ಯಾಮರಾ ಗೊತ್ತಿಲ್ಲ. ಕುಂಚ ಗೊತ್ತಿಲ್ಲ, ಕಂಪ್ಯೂಟರ್ ಕೀಬೋರ್ಡ್ ತಿಳಿದಿಲ್ಲ. ತೇಜಸ್ವಿಗೂ ತಿಳಿದಿರಲಿಲ್ಲ. ತೇಜಸ್ವಿಯವರ ಈ ಚಿತ್ರಗಳನ್ನೇ ನೋಡಿ! ಚಿತ್ರಗ್ರಹಣದ ತಂತ್ರವನ್ನು ಹಠ ಹಿಡಿದು ಕಲಿತಿದ್ದಾರೆ ತೇಜಸ್ವಿ. ಗಂಟೆಗಟ್ಟಲೆ, ದಿನಗಟ್ಟಲೆ, ತಿಂಗಳುಗಟ್ಟಲೆ, ಪ್ರತಿದಿನ ಅದೇ ಸಮಯಕ್ಕೆ ಅದೇ ಜಾಗಕ್ಕೆ ಮತ್ತೆ ಮತ್ತೆ ಹಿಂದಿರುಗಿ ಶ್ರದ್ಧೆಯಿಂದ ಕಾದು ಕೂತು ಚಿತ್ರ ಸೆರೆಹಿಡಿದಿದ್ದಾರೆ. ನನಗೆ ಈ ಚಿತ್ರಗಳು ಇಷ್ಟವಾಗುವುದು ಅವುಗಳ ತಾಂತ್ರಿಕತೆಗಾಗಿ ಮಾತ್ರವಲ್ಲ, ಅಥವಾ ದೃಶ್ಯ ಸಂಯೋಜನೆಯ ಜಾಣತನಕ್ಕೂ ಅಲ್ಲ. ಇವುಗಳ ಸರಳತೆಯೇ ಇವುಗಳ ಶಕ್ತಿಯಾಗಿದೆ. ಈ ಚಿತ್ರಗಳು ಡಿಸ್ಕವರಿ ಚಾನಲ್‌ಗೆ ಮಾದರಿಯಾಗ ಬಯಸುತ್ತಿಲ್ಲ, ಬದಲಿಗೆ ಕನ್ನಡದ ಹುಡುಗರಿಗೆ ಭವಿಷ್ಯದ ಹಾದಿ ಸೂಚಿಸುತ್ತಿವೆ ಅಷ್ಟೆ.



ಗುಟುಕು ಕೊಡುತ್ತಿರುವ ತಾಯಿಹಕ್ಕಿ, ಬಿಸಿಲು ಕಾಯಿಸುತ್ತಿರುವ ನೀಲಿ ಹಕ್ಕಿ, ಪುಕ್ಕ ಮೇಲೆತ್ತಿ ಗಿರಕಿ ಹೊಡೆಯುತ್ತಿರುವ ಗುಬ್ಬಿ, ಕಡ್ಡಿ, ಕಸ, ಕೊನರುಗಳು ಇಲ್ಲಿ ಚಿತ್ರಿತವಾಗಿವೆ. ಮಿಕ್ಕದ್ದು–ಹಸಿರು ಪ್ರಪಂಚ, ಕಂದು ಗುಡ್ಡ, ನೀಲಿ ಆಕಾಶ ಎಲ್ಲವೂ ಮಸುಕಾಗಿವೆ. ಈ ಚಿತ್ರಗಳನ್ನು ಸೆರೆಹಿಡಿಯುವಲ್ಲಿ ತೇಜಸ್ವಿಯವರು ಜೀವಕ್ಕಷ್ಟೆ ಅಂಟಿಕೊಳ್ಳುತ್ತಾರೆ, ಮಿಕ್ಕದ್ದನ್ನು ಗೌಣವಾಗಿಸುತ್ತಾರೆ.

✤ ಪ್ರಸನ್ನ : ಕವಿ ಕಾವ್ಯ ಟ್ರಸ್ಟ್, ಹೊನ್ನೇಸರ, ಹೆಗ್ಗೋಡು-೫೭೭ ೪೧೭ ತಾ. ಸಾಗರ ✤

ಅಸಾವರೀ

— ಬಿ. ಎಸ್. ನಾಗರತ್ನಕುಮಾರಿ

'ಕ್ಯಾಂಪಸ್ ಮ್ಹೇ ಉಪಸ್ಥಿತ್ ಸಭೀ ಪ್ರತಿಭಾಗಿಯೋಂ ಸೇ ಮೇರಾ ನಮ್ರ ನಿವೇದನ್ ಹೈ, ದೋಪಹರ್ ಕೇ ಭೋಜನ್ ಕೇ ಲಿಯೇ ಭೋಜನ್ ಕಕ್ಷ ಪರ್ ಆನೇ ಕಾ ಕಷ್ಟ್ ಲ್ಹೇ...'

ಫೀಲ್ಡ್ ಡೈರೆಕ್ಟರ್ ವಿಜಯ್ ಮೆಹ್‌ತಾ ಅವರ ಕರೆ ಧ್ವನಿವರ್ಧಕದಲ್ಲಿ ಮೊಳಗಿತ್ತು. ಈ ಕರೆ ಪ್ರತಿ ದಿನ ನಾಲ್ಕು ಸಲ, ಬೆಳಗಿನ ತಿಂಡಿ, ಸಂಜೆಯ ಚಹಾ ಮತ್ತು ಊಟದ ಎರಡು ವೇಳೆಯೂ ಕೇಳಿಬರುವುದು ತಪ್ಪುತ್ತಿರಲಿಲ್ಲ. ಶಿಬಿರಾರ್ಥಿಗಳೆಲ್ಲರಿಗೂ ಈ ಧ್ವನಿ ಅತ್ಯಂತ ಆಪ್ಯಾಯಮಾನವಾಗಿತ್ತು. ಅಕಸ್ಮಾತ್ ಒಂದು ಹೊತ್ತು ಈ ಕರೆ ಕೇಳಿಬರದಿದ್ದರೂ ಎಲ್ಲರಿಗೂ ಪಿಚ್ಚೆನಿಸುತ್ತಿತ್ತು. ಅಷ್ಟರ ಮಟ್ಟಿಗೆ ಮೆಹ್‌ತಾಜಿ ತಮ್ಮ ಧ್ವನಿಯಿಂದ ಎಲ್ಲರನ್ನೂ ಸೆಳೆದಿದ್ದರು. ಬರೀ ಧ್ವನಿಯಷ್ಟೇ ಅಲ್ಲ, ಚಾರಣಕ್ಕೆಂದು ಪ್ರಕೃತಿ ಅಧ್ಯಯನ ಶಿಬಿರಕ್ಕೆ ಬರುವ ಮಕ್ಕಳ ಪ್ರತಿಯೊಂದು ಗುಂಪಿಗೂ 'ಓರಿಯೆಂಟೇಶನ್ ಕ್ಲಾಸ್' ತೆಗೆದುಕೊಳ್ಳುವ ಕಲೆಯಲ್ಲೂ ಅವರ ನಿಪುಣತೆ ಕಂಡುಬರುತ್ತಿತ್ತು, ತಮ್ಮದೆ ಆದ ಧಾಟಿಯಲ್ಲಿ ಮಕ್ಕಳನ್ನು ಪರಿಚಯಿಸಿಕೊಂಡು, ಚಾರಣ ಹೋಗುವಾಗ ಹೇಗಿರಬೇಕು? ಬೆಟ್ಟ-ಗುಡ್ಡ-ನದಿ-ಪರ್ವತಗಳ ದಾರಿಯಲ್ಲಿ ಸಾಗಬೇಕಾದಾಗ ನಿಧಾನವಾಗಿ ಅಲ್ಲಲ್ಲಿ ನಿಂತು ಕೂತು ಪ್ರಕೃತಿ ಸೌಂದರ್ಯವನ್ನು ಸವಿಯಬೇಕಾದ ಬಗೆ, ಅಲ್ಲಲ್ಲಿ ಸಿಗುವ ಹಳ್ಳಿಗಳು- ಹಳ್ಳಿಗರ ಬಗ್ಗೆ ಇರಬೇಕಾದ ಪ್ರೀತಿ, ಹಿಮದಲ್ಲಿ ನಡೆಯಬೇಕಾದಾಗ ವಹಿಸಬೇಕಾದ ಎಚ್ಚರ– ಇವೆಲ್ಲ ಸಂಗತಿಗಳನ್ನೂ ನಿಧಾನವಾಗಿ ಉದಾಹರಣೆಗಳ ಸಮೇತ ಮೆಹ್‌ತಾಜಿ ಹೇಳುವ ರೀತಿ ಮಕ್ಕಳಿಗೆ ಅತ್ಯಂತ ಖುಷಿಯಾಗುತ್ತಿತ್ತು. ಒಂದು ಗಂಟೆಯ ಓರಿಯೆಂಟೇಶನ್ ಕ್ಲಾಸ್ ಹೇಗೆ ಮುಗಿಯಿತು ಎಂಬುದೇ ಗೊತ್ತಾಗುತ್ತಿರಲಿಲ್ಲ.

ಮಕ್ಕಳೆಲ್ಲರಿಗೂ ಪ್ರೀತಿಯ 'ಮೆಹ್‌ತಾ ಸಾಬ್'ಆಗಿದ್ದರು ಮೆಹ್‌ತಾ. ತಮ್ಮ ಸಣ್ಣ ಪುಟ್ಟ ಬೇಕು-ಬೇಡಗಳಿಗೂ ಮಕ್ಕಳು ಅವರ ಬಳಿ ಓಡೋಡಿ ಬರುತ್ತಿದ್ದರು. ಉಳಿದ ಕ್ಯಾಂಪ್ ಲೀಡರುಗಳು ಇದರಿಂದ ಇರಿಸು ಮುರಿಸಾಗುತ್ತಿದ್ದರು. ವಿಜಯ್ ಮೆಹ್‌ತಾ ಇಡೀ ಪ್ರಕೃತಿ ಅಧ್ಯಯನ ಶಿಬಿರಕ್ಕೇ ಕ್ಷೇತ್ರ ನಿರ್ದೇಶಕರು. ಬೇಸ್ ಕ್ಯಾಂಪೇ ಅಲ್ಲದೆ, ಹೈಯರ್ ಕ್ಯಾಂಪಿನ ಎಲ್ಲ ಶಿಬಿರಗಳನ್ನೂ ನೋಡಿಕೊಳ್ಳುವ, ನಿರ್ದೇಶಿಸುವ ಜವಾಬ್ದಾರಿ ಅವರದ್ದು. ಶಿಬಿರಾರ್ಥಿಗಳ ಯೋಗಕ್ಷೇಮವನ್ನು ಕ್ಯಾಂಪ್ ಲೀಡರುಗಳು ನೋಡಿಕೊಳ್ಳುತ್ತಿದ್ದರು. ಪ್ರಕೃತಿ ಅಧ್ಯಯನ ಶಿಬಿರಕ್ಕೆ ಬರುವ ಮಕ್ಕಳು ಕ್ಯಾಂಪ್ ಲೀಡರುಗಳನ್ನು ಅಲಕ್ಷಿಸಿ ಫೀಲ್ಡ್ ಡೈರೆಕ್ಟರ್ ಬಳಿಗೆ ಓಡೋಡಿ ಬರುವುದು ಅವರ ಅಸಮಾಧಾನಕ್ಕೆ ಕಾರಣವಾಗಿತ್ತು. ಇಂಥ ಒಂದು ಸಂದರ್ಭದಲ್ಲೇ ಬಂಗಾಳದ ಅರುಣ್ ಘೋಷ್ ನನ್ನ ಬಳಿ ಬಂದು, 'ಮೇಡಂ, ನಮ್ಮ ಫೀಲ್ಡ್ ಡೈರೆಕ್ಟರ್ ಅವರಿಗೆ ಅವಾರ್ಡ್ ಮೇಲೆ ಕಣ್ಣು ಬಿದ್ದಿದೆ ಅನಿಸುತ್ತೆ. ತುಂಬ ಅತಿಯಾಗಿ ಆಡ್ತಾರೆ' ಅಂದ. ಅವನ ಮಾತನ್ನು ಕೇಳಿಯೂ ಕೇಳದವಳಂತೆ ಸುಮ್ಮನಿದ್ದೆ. 'ಏನಾದ್ರೂ ಹೇಳಿ ಮೇಡಂ' ಎಂದ ಮತ್ತೆ. 'ಏನ್ ಹೇಳ್ಬೇಕು?' 'ನಮ್ಮ F.D. ತುಂಬ ಪ್ರಚಾರ ಬಯಸ್ತಿದಾರೆ. ಮಕ್ಕಳನ್ನೆಲ್ಲ ತಂ ಕಡೆ ತಿರುಗಿಸ್ಕೊಂಡು ಬೆಸ್ಟ್ F.D. ಅಂತ ಸರ್ಟಿಫಿಕೇಟ್ ತೊಗೊಬೇಕೂಂತಿದಾರೆ, ನಿಮ್ಗೆ ಇದು ತಿಳೀತಿಲ್ವಾ?' ಎಂದು ಮತ್ತೆ ಅದನ್ನೇ ಹೇಳಿದ. 'ಇಲ್ಲಪ್ಪ. ನಂಗೆ ಖಂಡಿತ

ಹಾಗನಿಸ್ತಿಲ್ಲ. ಮಕ್ಕಳು ಅವ್ರನ್ನ ತುಂಬ ಇಷ್ಟ ಪಡ್ತಾರೆ. ಇಷ್ಟಕ್ಕೂ ಅವರಿಗೆ ಬೆಸ್ಟ್ ಅವಾರ್ಡ್ ಸಿಕ್ಕರೂ ಅದು ನ್ಯಾಯವೇ. ಅದ್ರಲ್ಲೇನೂ ಮೋಸವಿಲ್ಲ ಬಿಡಿ' ಎಂದೆ ನಾನು. ಅವನ ಮಾತಿಗೆ ಸೊಪ್ಪು ಹಾಕಲಿಲ್ಲ ಎಂದೋ ಏನೋ, ಫೋಷ್ ಮತ್ತೇನೂ ಹೇಳದೆ ಅಲ್ಲಿಂದ ಜಾಗ ಖಾಲಿ ಮಾಡಿದ. ಮೆಹ್‌ತಾಜೀ ಕೂಡ ಮಕ್ಕಳನ್ನು ಅತ್ಯಂತ ಪ್ರೀತಿಯಿಂದ ಕಾಣುತ್ತಿದ್ದರು. ಅವರಿಗೆ ಪ್ರಶಸ್ತಿ ಬಂದರೆ ಇವರಿಗೇನು? ತಮ್ಮ ಕೆಲಸ ತಾವು ನೋಡಿಕೊಂಡು ಹೋಗಬಾರದೇ. ಇಲ್ಲದ ಉಸಾಬರಿ ಯಾಕೆ ಇವರಿಗೆ? –ನಾನು ಯೋಚಿಸತೊಡಗಿದೆ. ಅಷ್ಟರಲ್ಲಿ ಮೆಹ್‌ತಾಜೀ ಯಿಂದ ನನಗೆ ಬುಲಾವ್ ಬಂತು.

ಮಕ್ಕಳು ಬರೆದಿದ್ದ ಪ್ರಬಂಧಗಳನ್ನು ಓದಿ ಮೌಲ್ಯಮಾಪನ ಮಾಡುತ್ತಿದ್ದ ನಾನು, ಅದನ್ನು ಅಲ್ಲಿಗೇ ನಿಲ್ಲಿಸಿ ಮೆಹ್‌ತಾಜೀ ಇದ್ದಲ್ಲಿಗೆ ಬಂದೆ. 'ಮೇಡಂ, ನೋಡಿ, ಈ ಮಗುವಿಗೆ ತುಂಬ ಜ್ವರ. ಅಕ್ಲೈಮಟೈಸೇಷನ್‌ನಿಂದ ವಾಪಸ್ ಬಂದಿದ್ದಾಳೆ. ಇವಳನ್ನು ಅವಳ ಜೊತೆಗಾರರ ಟೆಂಟಿನಲ್ಲಿ ಉಳಿಸೋದು ಬೇಡ. ನಿಮ್ಮೊಂದಿಗೆ ಇಟ್ಟುಕೊಳ್ಳುವಿರಾ?' ಕೇಳಿದರು. ಹನ್ನೊಂದು ವರ್ಷದ ಆ ಮಗು ವಿಪರೀತ ಸುಸ್ತಾದಂತೆ ಕಂಡಳು. ಜ್ವರದಿಂದ ನಡುಗುತ್ತಿದ್ದ ಅವಳ ಮುಖವನ್ನೊಮ್ಮೆ ದಿಟ್ಟಿಸಿದೆ. ಹಾಲು ಬಿಳುಪಿನ ಆಕರ್ಷಕ ಮುಖ ಅಲ್ಲಲ್ಲಿ ಕೆಂಪು ಕೆಂಪಾಗಿತ್ತು. ಮನಸ್ಸಿನಲ್ಲಿ ಏನೋ ಸಂದೇಹವಾದರೂ ತೋರಗೊಡದೆ 'ಖಂಡಿತ. ನನ್ನ ಟೆಂಟಿನಲ್ಲೇ ಉಳಿಯಲಿ' ಅಂದವಳೆ ಅವಳ ಕೈ ಹಿಡಿದು ಕರೆದುಕೊಂಡು ಹೋಗಿ ಬೆಚ್ಚಗೆ ಹೊದಿಸಿ ಮಲಗಿಸಿದೆ. ಹುಡುಗಿ ವಿಪರೀತ ನಡುಗುತ್ತಿದ್ದಳು. 'ನಿನ್ನ ಹೆಸರೇನು ಮಗೂ?'– ಮೆಲ್ಲನೆ ಕೇಳಿದೆ. 'ಅಸಾವರೀ.' 'ಊಟ ಮಾಡಿದೆಯಾ?' 'ಹ್ಞೂ, ಸ್ವಲ್ಪ ಗಂಜಿ ಕುಡಿದೆ' ಎಂದಳು. 'ಮಾತ್ರೆ ಏನಾದರೂ ಕೊಡಲೇ?' ಇಂಥ ಸಂದರ್ಭಗಳಿಗೆಂದೇ ತಂದ ಔಷಧಿಗಳನ್ನು ತೆಗೆಯಲು ಹೋದೆ. 'ಬೇಡ ಆಂಟಿ, ಮಾತ್ರೆ ತೊಗೊಂಡೆ, ಮೆಹ್‌ತಾ ಸಾಬ್ ಕೊಟ್ಟರು' ಎಂದಳು. 'ಸರಿ, ಹಾಗಾದ್ರೆ ಮಲಗು, ನಾನೂ ಇಲ್ಲಿಗೇ ಬರ್ತೀನಿ, ಒಂದೇ ನಿಮಿಷದಲ್ಲಿ' ಎನ್ನುತ್ತಾ, ರಿಸೆಪ್ಶನ್ ಕೌಂಟರಿನಲ್ಲಿ ಇಟ್ಟುಹೋಗಿದ್ದ ಪ್ರಬಂಧಗಳನ್ನೂ ಪೆನ್ನನ್ನೂ ತಂದೆ, ಟೆಂಟಿನಲ್ಲಿಯೇ ಓದಲು ತೊಡಗಿದೆ.

ಆ ದಿನ ಪ್ರಬಂಧ ಸ್ಪರ್ಧೆಯಲ್ಲಿ ಭಾಗವಹಿಸಿದವರು ಮೂವತ್ತು ಮಂದಿಯಿದ್ದರು. ಉಳಿದ ದಿನಗಳಿಗೆ ಹೋಲಿಸಿದರೆ ಅದು ಜಾಸ್ತಿ ಸಂಖ್ಯೆ. ಇವುಗಳ ಮೌಲ್ಯಮಾಪನವಾದ ಮೇಲೆ ಡ್ರಾಯಿಂಗ್‌ನಲ್ಲಿ ಭಾಗವಹಿಸಿದ್ದವರ ಚಿತ್ರಗಳನ್ನು ನೋಡಬೇಕಿತ್ತು. ಅದೂ ಹೆಚ್ಚು ಕಡಿಮೆ ಇಷ್ಟೇ ಇತ್ತು. ಇವೆರಡನ್ನೂ ಸಂಜೆ ಏಳು ಗಂಟೆಯೊಳಗೆ ಮೌಲ್ಯಮಾಪನ ಮಾಡಲೇಬೇಕಿತ್ತು. ಯಾಕೆಂದರೆ ಬಹುಮಾನ ವಿಜೇತರ ಪಟ್ಟಿಯನ್ನು ಅಂದಂದಿನ 'ಶಿಬಿರಜ್ಯೋತಿ' ಕಾರ್ಯಕ್ರಮ ದಲ್ಲಿ ಪ್ರಕಟಿಸಿ, ಬಹುಮಾನ ನೀಡಬೇಕಿತ್ತು. ಹೈಯರ್ ಕ್ಯಾಂಪಿನಿಂದ ವಾಪಸಾದ ಮಕ್ಕಳು ಮಾತ್ರ ಇಷ್ಟವಿದ್ದವರು ಪ್ರಬಂಧ-ರಸಪ್ರಶ್ನೆ-ಡ್ರಾಯಿಂಗ್ ಸ್ಪರ್ಧೆಗಳಲ್ಲಿ ಭಾಗವಹಿಸುತ್ತಿದ್ದರು. ಎಲ್ಲವೂ ಕೂಡ ನಿಸರ್ಗಕ್ಕೆ ಸಂಬಂಧಪಟ್ಟಂತೆ, ಚಾರಣದಲ್ಲಿ ಅವರು ಕಂಡ, ಅನುಭವಿಸಿದ, ಕಲಿತ ಸಂಗತಿಗಳ ಬಗ್ಗೆಯೇ ಬರೆಯಬೇಕಿತ್ತು. ಪ್ರತಿ ದಿನದ ಈ ಸ್ಪರ್ಧೆಗಳು, ಇವುಗಳ ಮೌಲ್ಯಮಾಪನ, ಬಹುಮಾನ ಹಂಚಿಕೆ– ಇವೆಲ್ಲದರ ಸಂಪೂರ್ಣ ಜವಾಬ್ದಾರಿ ನನ್ನದಾಗಿತ್ತು. ಈ ಕೆಲಸ ನನಗೆ ಅತ್ಯಂತ ಸಂತೋಷದಾಯಕವಾಗಿದ್ದರಿಂದ ಪುರುಸೊತ್ತಿಲ್ಲದೆ ನಿರ್ವಹಿಸುತ್ತಿದ್ದೆ.

ಮಕ್ಕಳು ಇದರಲ್ಲಿ ಭಾಗವಹಿಸಿದಾಗ ಕುತೂಹಲದಿಂದ ಗಮನಿಸುತ್ತಿದ್ದೆ. ಕೆಲವು ಮಕ್ಕಳು ನಿಜಕ್ಕೂ ಅತ್ಯಂತ ಪ್ರತಿಭಾವಂತರಿರುತ್ತಿದ್ದರು. ಅನೇಕ ಸಲ ಬಹುಮಾನಗಳನ್ನು ಎಷ್ಟು ಜನಕ್ಕೆ ಕೊಡಬೇಕೆಂಬ ಗೊಂದಲ ಮೂಡಿ ನಾಲ್ಕೈದು ಬಹುಮಾನಗಳನ್ನು ಹೆಚ್ಚಿಸುತ್ತಿದ್ದುದುಂಟು. ಬಹುಮಾನಕ್ಕೆಂದು ಉತ್ತಮ ಪುಸ್ತಕಗಳು ಇದ್ದವು. ಅವು ಕೂಡ ಪ್ರಕೃತಿ-ಪ್ರಾಣಿ-ಪಕ್ಷಿಗಳಿಗೆ ಸಂಬಂಧಿಸಿದ ಪುಸ್ತಕಗಳು.

ಪ್ರಬಂಧವನ್ನು ಓದುತ್ತಿದ್ದಂತೆಯೇ ಮತ್ತೆ ಮೆಹ್‌ತಾಜಿಯ ಕರೆ ಧ್ವನಿವರ್ಧಕದಲ್ಲಿ– 'ಕ್ಯಾಂಪಸ್ ಮ್ಹೆ ಉಪಸ್ಥಿತ್ ಸಭೀ ಪ್ರತಿಭಾಗಿಯೋಂ ಸೇ ಮೇರಾ ನಮ್ರ ನಿವೇದನ್ ಹೈ, ಸಾಯಂ ಚಾಯ್ ಕೇ ಲಿಯೇ ಭೋಜನ್ ಕಕ್ಷ್ ಪರ್ ಆಯಿಯೇ.' ಅರೆ! ಆಗಲೇ ನಾಲ್ಕೂವರೆ ಗಂಟೆ. ಅಸಾವರಿಯತ್ತ ಕಣ್ಣು ಹಾಯಿಸಿದೆ. ಮೈ ಮುದುರಿ ಮಲಗಿತ್ತು ಮಗು. ಬಳಿ ಸರಿದು ಹಣೆ ಮುಟ್ಟಿದೆ. ವಿಪರೀತ ಸುಡುತ್ತಿದೆ; ಮಧ್ಯಾಹ್ನ ನಾನು ಸಂದೇಹಿಸಿದ್ದು ನಿಜವೂ ಆಗಿತ್ತು! ಹಾಗೇ ಅವಳಿಗೆ ಹೊದ್ದಿಸಿ ಹೊರಗೆ ಬಂದೆ. ಅಲ್ಲೇ ಮಾಮೂಲಿನಂತೆ ಹುಡುಗರ ಜೊತೆ ಚಹಾ ಕುಡಿಯುತ್ತ ಮಾತನಾಡುತ್ತಾ ನಿಂತಿದ್ದ ಮೆಹ್‌ತಾಜಿ ಕಾಣಿಸಿದರು. ಅವರ ಬಳಿ ಬಂದು 'ಮೆಹತಾಜೀ, ಅಸಾವರಿಗೆ ಚಿಕನ್ ಫಾಕ್ಸ್ ಆಗಿರುವಂತಿದೆ. ಮೈ ಮುಖವೆಲ್ಲ ಕಾಣಿಸಿಕೊಂಡಿದೆ, ಅವಳನ್ನು ನಾಳೆ ಹೈಯರ್ ಕ್ಯಾಂಪಿಗೆ ಕಳಿಸುವುದು ಬೇಡ, ಇಲ್ಲೇ ಇರಲಿ' ಎಂದು ಹೇಳಿದೆ. 'ಹೌದು ಮೇಡಂ, ನಾನೂ ಅದನ್ನೇ ಯೋಚಿಸುತ್ತಿದ್ದೆ, ಅವಳ ಎಸ್ಕಾರ್ಟ್ಸ್ ಜೊತೆ ಮಾತನಾಡುತ್ತೇನೆ, ಅವಳನ್ನು ನೀವು ನೋಡಿಕೊಳ್ಳಿ' ಎಂದರು.

ಟೆಂಟಿಗೆ ಹಿಂದಿರುಗಿ ಮತ್ತೆ ನನ್ನ ಕೆಲಸ ಆರಂಭಿಸಿದೆ. 'ಮಮ್ಮೀ...' ಮುಲುಗುಟ್ಟುತ್ತಿದ್ದಳು ಅಸಾವರೀ. ಪಾಪ! ಸಂತೋಷದಿಂದ ಕಾಲ ಕಳೆಯ ಬಂದು ಹೀಗಾಯಿತಲ್ಲಾ ಎಂದು ಹಲುಬಿದೆ. ಹೊರಗೆ ಅವಳ ಗುಂಪಿನ ಮಕ್ಕಳು ಷಟಲ್ ಆಡುವುದರಲ್ಲಿ, ರಾತ್ರಿ ಶಿಬಿರಜ್ಯೋತಿಯಲ್ಲಿ ಏನೇನು ಕಾರ್ಯಕ್ರಮ ನೀಡಬೇಕೆಂಬುದರಲ್ಲಿ ಪರಸ್ಪರ ಚರ್ಚೆಯಲ್ಲಿ ತೊಡಗಿದ್ದರು. ಅವಳ ಒಂದಿಬ್ಬರು ಗೆಳತಿಯರು ಬಂದು ಮಲಗಿದ್ದ ಅವಳನ್ನು ನೋಡಿಕೊಂಡು ಹೋದರು. ಅಹಮದಾಬಾದ್‌ನಿಂದ ಅವಳ ಗುಂಪನ್ನು ಕರೆತಂದಿದ್ದ ಎಸ್ಕಾರ್ಟ್ಸ್ ಇಬ್ಬರು ಬಂದು 'ಮೇಡಂ, ನಾವು ಟ್ರೈನಿನಲ್ಲಿ ಇಲ್ಲಿಗೆ ಬರುವಾಗ ಇವಳ ಪಕ್ಕದಲ್ಲಿ ಕುಳಿತಿದ್ದ ಚಿಕ್ಕ ಮಗುವಿಗೆ ಚಿಕನ್ ಫಾಕ್ಸ್ ಆಗಿತ್ತು. ಇವಳಿಗೂ ಸೋಂಕು ತಗುಲಿದೆ. ಹೈಯರ್ ಕ್ಯಾಂಪಿಗೆ ಬೇಡ. ಇವಳು ಇಲ್ಲೇ ರೆಸ್ಟ್ ತೆಗೆದುಕೊಳ್ಳಲಿ. ಅವರ ಮನೆಗೆ ಫೋನ್ ಮಾಡ್ತೇವೆ' ಎಂದು ಅವಳಿಗೆ ಕೊಡಬೇಕಾದ ಔಷಧಿಗಳನ್ನು ನನ್ನ ಕೈಯಲ್ಲಿ ಕೊಟ್ಟು ಹೋದರು. ಆಗಾಗ ಅವಳ ಬಾಯಿಂದ ಹೊರಡುತ್ತಿದ್ದ 'ಮಮ್ಮೀ' ಎಂಬ ಕರೆ ನನ್ನ ಮನಸ್ಸನ್ನು ಕಲಕುತ್ತಿತ್ತು. ಮುಟ್ಟಿ ನೋಡಿದೆ, ಮಗು ಜ್ವರದಿಂದ ಬೇಯುತ್ತಿದ್ದಳು. ತಡೆಯಲಾರದೆ ಕರ್ಚೀಫನ್ನು ಒದ್ದೆ ಮಾಡಿ ತಂದು ಹಣೆಯ ಮೇಲಿಟ್ಟೆ. ತಣ್ಣಗಾಗಿದ್ದಕ್ಕೋ ಏನೋ ಒಮ್ಮೆ ಬೆಚ್ಚಿದಳು. ಅಷ್ಟು ಹೊತ್ತಿಗೆ ಮತ್ತೊಮ್ಮೆ ಧ್ವನಿವರ್ಧಕದಲ್ಲಿ ಊಟಕ್ಕೆ ಕರೆ. ನನ್ನ ಕೆಲಸವೂ ಮುಗಿಯುತ್ತಾ ಬಂದು, ಬಹುಮಾನ ವಿಜೇತರ ಪಟ್ಟಿ ಮಾಡುವುದಷ್ಟೇ ಉಳಿದಿತ್ತು. ಸರಸರನೆ ಅದನ್ನೂ ಮುಗಿಸಿ ಅಡುಗೆ ಮನೆಯ ಕಡೆ ಓಡಿದೆ. ಅಸಾವರಿಗೆ ಕುಡಿಯಲು ಬಿಸಿ ನೀರು, ಊಟಕ್ಕೆ ಗಂಜಿ ಬೇಕಿತ್ತು. ಮಕ್ಕಳೆಲ್ಲ ಊಟ ಮುಗಿಸಿ

ರಾತ್ರಿಯ ಕ್ಯಾಂಪ್ ಫೈರ್‌ಗೆ ಅಣಿಯಾಗುತ್ತಿದ್ದರು. 'ಮೇಡಂ, ಫಿಲ್ಮ್ ಸಾಂಗ್‌ಗೆ ಡ್ಯಾನ್ಸ್ ಮಾಡಬಹುದಾ?' ಒಬ್ಬ ಹುಡುಗ ಕೇಳಿದ. 'ಖಂಡಿತ ಇಲ್ಲ. ಓರಿಯೆಂಟೇಶನ್‌ನಲ್ಲೇ ನೀವು ಕೇಳಿಲ್ಲವಾ? ಕೇವಲ ದೇಶಭಕ್ತಿಗೀತೆ ಜನಪದಗೀತೆ ಭಾವಗೀತೆಗಳನ್ನಷ್ಟೇ ಹಾಡಬಹುದು' ಎಂದೆ. ಆತ ಸಪ್ಪಗೆ ಮುಖ ಮಾಡಿಕೊಂಡು ಹೋದ. ಪಕ್ಕದಲ್ಲೇ ಇದ್ದ ಪ್ರದೀಪ್ ವರ್ಮಾ 'ಮೇಡಂ, ಅವ್ರಿಗೆ ಯಾವ್ದು ಖುಷಿ ಅನಿಸುತ್ತೋ ಅದನ್ನು ಮಾಡ್ಲಿ ಬಿಡಿ. ನೀವ್ಯಾಕೆ ಬೇಡ ಅಂತೀರಿ' ಅಂದ. 'ನೋ ನೋ, ಫಿಲ್ಮ್ ಸಾಂಗ್ಸ್ ಬೇಡ. ಇಲ್ಲಿ ಅಲೋ ಮಾಡೋಲ್ಲ ಅಂತ ನಿಮಗೂ ಗೊತ್ತು'– ಹಿಂದಿನಿಂದ ಮೆಹ್‌ತಾ ಧ್ವನಿಗೂಡಿಸಿದರು. ಅವರ ಮಾತಿಗೆ ಸಿಲುಕದೆ ನಾನು ಗಂಜಿ, ಬಿಸಿ ನೀರು ತೆಗೆದುಕೊಂಡು ಟೆಂಟಿಗೆ ಬಂದೆ. 'ಊಟ ಮಾಡಿ ಹೋಗಿ ಮೇಡಂ' ಎಂದ ಗೋಪಾಲ್. 'ಹಸಿವಿಲ್ಲ' ಎಂದೆ ನಿಜಕ್ಕೂ ಆ ದಿನ ನನಗೆ ಊಟ ಮಾಡುವ ಮನಸ್ಸಿರಲಿಲ್ಲ.

ಅಸಾವರಿಯನ್ನು ಮೆಲ್ಲಗೆ ಏಳಿಸಿದೆ. ಸ್ವಲ್ಪ ಸ್ವಲ್ಪವೇ ಗಂಜಿ ಕುಡಿಸಿ, ಮಾತ್ರೆ ಕೊಟ್ಟು ಮಲಗಿಸಿದೆ. 'ಟಾಯ್ಲೆಟ್‌ಗೆ ಹೋಗಬೇಕಾದರೆ ಹೇಳು' ಎಂದೆ.

ಅಂದಿನ ಕ್ಯಾಂಪ್ ಫೈರ್‌ನಲ್ಲಿ ಭಾಗವಹಿಸಲು ಮನಸ್ಸಾಗಲಿಲ್ಲ. ಜೊತೆಗೆ ಆ ಮಗುವನ್ನು ಒಂಟಿಯಾಗಿ ಬಿಟ್ಟು ಹೋಗಲಾರದೆ ಟೆಂಟಿನಲ್ಲಿಯೇ ಉಳಿದೆ, ಕ್ಯಾಂಪ್ ಫೈರ್‌ನ ಎಲ್ಲ ಕಾರ್ಯಕ್ರಮಗಳೂ ಜೋರಾಗಿ ಕೇಳಿಸುತ್ತಿದ್ದುವು. ಆ ದಿನ ಸ್ಥಳೀಯ ವ್ಯಕ್ತಿಯೊಬ್ಬರನ್ನು ಮುಖ್ಯ ಅತಿಥಿಗಳಾಗಿ ಆಹ್ವಾನಿಸಲಾಗಿತ್ತು, ಸ್ವಾಗತ, ಬಹುಮಾನ ವಿತರಣೆ ಮುಗಿದು ಸಾಂಸ್ಕೃತಿಕ ಕಾರ್ಯಕ್ರಮಗಳು ಆರಂಭವಾದುವು. ಕಾರ್ಯಕ್ರಮಗಳನ್ನು ನಿರೂಪಿಸುತ್ತಿದ್ದವನು ಆ ದಿನದ ಮಾಸ್ಟರ್ ಆಫ್ ಸೆರಮನಿ ಆಗಿದ್ದ ನಿಪುಣ್ ಕಾಕಡೆ.

ಮಕ್ಕಳ ಹಾಡು, ನಗೆ ಚಟಾಕಿಗಳು ಧ್ವನಿವರ್ಧಕದಿಂದ ಜೋರಾಗಿ ಕೇಳಿಬರುತ್ತಿದ್ದವು. ಅಸಾವರೀ ತಡೆಯಲಾರದೆ 'ಮೇಡಂ, ಅಲ್ಲೇ ಹೋಗಿ ಕುಳಿತುಕೊಳ್ಳೋಣ. ನಾನೂ ನೋಡ್ತೀನಿ' ಎಂದಳು 'ಬೇಡವೇ ಬೇಡ, ಗಾಳಿಯಲ್ಲಿ ನಿನಗೆ ಮತ್ತೂ ಜಾಸ್ತಿ ಥಂಡಿಯಾಗುತ್ತೆ. ಸುಮ್ಮನೆ ಮಲಗು' ಎಂದೆ. ನಾನೇನೋ ಹಾಗೆಂದೆ. ಆದರೆ ಅವಳಿಗೆ ಏನನಿಸಿರಬಹುದು? ತನ್ನ ಓರಗೆ ಯವರು ಹೀಗೆ ಹಾಡುತ್ತಾ ಕುಣಿಯುತ್ತಾ ಇದ್ದಾಗ...? ಯಾರೋ ಹಾರಿಸಿದ ನಗೆ ಚಟಾಕಿಗೆ ಎಲ್ಲರೂ ಬಿದ್ದು ಬಿದ್ದು ನಗುವ ಸದ್ದು ಕೇಳಿಬಂತು. 'ಯಾರೋ ಜೋಕ್ಸ್ ಹೇಳ್ತಿದಾರೆ ಅಲ್ವಾ...' ಆ ಸ್ಥಿತಿಯಲ್ಲೂ ಅಸಾವರೀ ನಕ್ಕಳು. 'ಅಪ್‌ನಾ ಅಪ್‌ನಾ ಬೋರ್ನ್‌ವಿಟಾ ಮಗ್ ಲೇ ಲ್ನೀ'– ಎಂದಾಗಲೇ ಕಾರ್ಯಕ್ರಮಗಳು ಮುಕ್ತಾಯವಾದವು ಎಂದುಕೊಂಡೆ.

ಮಕ್ಕಳೆಲ್ಲರೂ ತಮ್ಮತಮ್ಮ ಟೆಂಟಿನೊಳಗಡೆ ಹೊಕ್ಕು, ಸ್ವಲ್ಪ ಹೊತ್ತಿಗೇ ಲೈಟ್ಸ್ ಆಫ್ ಆಯಿತು. ಗಂಟೆ ಹತ್ತಾಯಿತು ಎನ್ನುವ ಸೂಚನೆ ಅದು. ದೀಪ ಆರಿದರೂ ಟೆಂಟಿನೊಳಗೆ ಮಕ್ಕಳ ಹರಟೆ-ನಗು ಇನ್ನೂ ಆರಿರಲಿಲ್ಲ. ನಮ್ಮ ಟೆಂಟಿನಲ್ಲಿ ಮಾತ್ರ ಮೌನ. ಸ್ವಲ್ಪ ಹೊತ್ತಾದ ಮೇಲೆ 'ಆಂಟೀ' ಎಂದು ಯಾರೋ ಕರೆದಂತಾಯಿತು. 'ಯಾರು?' ಎಂದೆ 'ನಾನು ಆಂಟಿ... ನಿಮಗೆ ನಿದ್ದೆ ಬಂತಾ?' ಅದು ಅಸಾವರೀ ಧ್ವನಿ. 'ಇಲ್ಲ. ನಿನಗೆ?' 'ಇಲ್ಲ.' 'ನೀರೇನಾದ್ರೂ ಕುಡಿಯಲು ಬೇಕಾ?' ಕೇಳಿದೆ. 'ಬೇಡ' ಅಂದಳು. ಅವಳು ಏನನ್ನೋ ಕೇಳಲು ಯತ್ನಿಸುತ್ತಿದ್ದಾಳೆ ಅನಿಸಿತು. 'ಏನು ಬೇಕು ಮಗೂ?' 'ನಾಳೆ ನಾನು ಹೈಯರ್ ಕ್ಯಾಂಪಿಗೆ

ಹೋಗಬಾರದೆ...?' ನಿಧಾನವಾಗಿ ಕೇಳಲೋ ಬೇಡವೋ ಎಂಬಂತೆ ಕೇಳಿದಳು. 'ಬೇಡ ಮರಿ, ನಿನಗೆ ಚಿಕನ್ ಫಾಕ್ಸ್ ಆಗಿದೆ. ಅಲ್ಲೆಲ್ಲ ಓಡಾಡಿದರೆ ಸುಧಾರಿಸುವುದು ಕಷ್ಟ. ಜೊತೆಗೆ ಎಲ್ಲರಿಗೂ ತೊಂದರೆ. ನಿನಗೆ ಹೋಗಲೇಬೇಕಿದ್ದರೆ ಮುಂದಿನ ವರ್ಷ ಬರುವಿಯಂತೆ' ಎಂದು ಸಮಾಧಾನ ಮಾಡಿದೆ. ಅವಳಿಂದ ನಿಟ್ಟುಸಿರು ಹೊರಬಿದ್ದದ್ದು ಕತ್ತಲೆಯಲ್ಲೂ ನನ್ನ ಅರಿವಿಗೆ ಬಂತು. 'ಆಂಟೀ, ನಿಮ್ಮನೇಲಿ ಎಷ್ಟು ಜನ ಇದ್ದೀರಿ?' ಇದ್ದಕ್ಕಿದ್ದಂತೆ ಅವಳಿಂದ ಬಂದ ಪ್ರಶ್ನೆ ನನಗೆ ಆಶ್ಚರ್ಯ ಹುಟ್ಟಿಸಿತು. 'ಯಾಕೆ ಮಗೂ?' 'ನಿಮ್ಗೆ ಮಕ್ಕಳಿದ್ದಾರಾ ಅಂತ ತಿಳ್ಕೋಳೋಕೆ.' 'ಇದ್ದಾರೆ.' 'ಇಬ್ಬರು ಮಗನಾ ಮಗಳಾ?' 'ಇಬ್ಬರೂ ಒಬ್ಬೊಬ್ಬರು.' ಅವಳು ನನ್ನ ವೈಯಕ್ತಿಕ ಬದುಕಿನ ಬಗ್ಗೆ ಪ್ರಶ್ನೆ ಮಾಡತೊಡಗಿ ಸುಮ್ಮನಾದಳು. ರಾತ್ರಿ ಬಹಳ ಹೊತ್ತು ನನಗೆ ನಿದ್ದೆಯೇ ಬರಲಿಲ್ಲ.

ಬೆಳಗ್ಗೆ ಟೆಂಟಿನ ಮುಂದೆ ನಿಂತು ಗೋಪಾಲ್ 'ಮೇಡಂ, ಬೆಡ್ ಟೀ' ಎಂದಾಗಲೇ ಎಚ್ಚರ. ಮಾರ್ನಿಂಗ್ ಎಕ್ಸರ್‌ಸೈಜ್‌ಗೆ ಹೋಗಲು ಅಣಿಯಾಗಿ ಮಕ್ಕಳು ಶಿಸ್ತಿನಿಂದ ಓಡುತ್ತಿದ್ದರು. ಬಿಯಾಸ್ (ವ್ಯಾಸ) ನದಿಯ ದಂಡೆಯ ಒಂದು ಪ್ರಾಥಮಿಕ ಶಾಲಾ ಆವರಣ ನಮ್ಮ ವ್ಯಾಯಾಮ ಸ್ಥಳ. ಚಾರಣ ಹೋಗುವ ಮಕ್ಕಳು ದೈಹಿಕ ಸಾಮರ್ಥ್ಯ ಹೆಚ್ಚಿಸಿಕೊಳ್ಳಲು ಇದು ಅಗತ್ಯವೂ ಹೌದು. ಕೈ-ಕಾಲು-ಕತ್ತು-ಸೊಂಟ-ಮಂಡಿ-ಬೆರಳು –ಹೀಗೆ ದೇಹದ ಎಲ್ಲ ಅಂಗಗಳಿಗೂ ಇನ್‌ಸ್ಟ್ರಕ್ಟರ್ ಸುಭಾಷ್ ವ್ಯಾಯಾಮ ಹೇಳಿಕೊಡುತ್ತಿದ್ದ. ಸುಭಾಷ್ ಇದರಲ್ಲಿ ಪಳಗಿದ್ದನು. ವ್ಯಾಯಾಮ ಮುಗಿಸಿ ಹಿಂತಿರುಗುವಾಗ ದಾರಿಯಲ್ಲಿದ್ದ ಪ್ರತಿಯೊಂದು ಮರ-ಗಿಡವನ್ನೂ ಪರಿಚಯ ಮಾಡುತ್ತಿದ್ದ. ಇದು ಮಕ್ಕಳಿಗೆ ಪ್ರಕೃತಿ ಅಧ್ಯಯನದ ಮೊದಲ ಪಾಠವಾಗಿತ್ತು. ಅವನು ಹೇಳುವುದನ್ನು ಮಕ್ಕಳು ತನ್ಮಯತೆಯಿಂದ ಕೇಳುತ್ತಿದ್ದರು. ವ್ಯಾಯಾಮದ ನಂತರ ಶಿಬಿರಾರ್ಥಿಗಳಿಂದ ಕ್ಯಾಂಪಸ್ ಕ್ಲೀನಿಂಗ್ ಕಾರ್ಯಕ್ರಮ. ಟೆಂಟಿನ ಸುತ್ತಮುತ್ತಲ ಆವರಣದಲ್ಲಿದ್ದ ಪೇಪರ್, ಪ್ಲಾಸ್ಟಿಕ್ ಕವರು ಇತ್ಯಾದಿಗಳನ್ನು ಹೆಕ್ಕಿ ತೆಗೆದು ಕಸದ ತೊಟ್ಟಿಯಲ್ಲಿ ಹಾಕಬೇಕಾಗಿತ್ತು.

ಇದೆಲ್ಲ ಆದ ನಂತರ ಏಳೂವರೆಗೆ ಬೆಳಗಿನ ತಿಂಡಿ. ಸಾಲಾಗಿ ಪ್ಲೇಟು ಹಿಡಿದು ನಿಂತ ಮಕ್ಕಳಿಗೆ ಬಡಿಸುವುದು ಇನ್ನಿಲ್ಲದ ಆನಂದ ಉಂಟುಮಾಡುತ್ತಿತ್ತು. ಆ ದಿನ ಹೈಯರ್ ಕ್ಯಾಂಪಿಗೆ ಹೋಗುವ ಮಕ್ಕಳಿಗೆ ಸಿಹಿ ಹಂಚಿ, ಧ್ವಜ ಹಾರಿಸಿ, 'ಸೀ ಆಫ್' ಮಾಡಿ ವಾಪಸ್ ಟೆಂಟಿಗೆ ಬಂದಾಗ ಅಸಾವರೀ ಇನ್ನೂ ಎದ್ದಿರಲೇ ಇಲ್ಲ. ಬ್ಲಾಂಕೆಟ್ ಪೂರ್ತಿ ಕವುಚಿಕೊಂಡಿದ್ದಳು. ಮುಟ್ಟಿದೆ, ಹೊರಳಾಡಿದಳೇ ಹೊರತು ಏಳುವ ಸೂಚನೆ ಕಾಣಿಸಲಿಲ್ಲ. 'ಅಸಾವರೀ...' ಮೆಲ್ಲನೆ ಕರೆದೆ. 'ಏಳು ಮರಿ ಹೊತ್ತಾಗಿದೆ, ಮುಖ ತೊಳೆದು ಏನನ್ನಾದರೂ ಹೊಟ್ಟೆಗೆ ತೆಗೆದುಕೊ' ಎಂದೆ. ಮೆಲ್ಲನೆ ಕಣ್ಣು ತೆರೆದಳು. 'ಆಂಟೀಜೀ, ಈಗ ಸಮಯವೆಷ್ಟು?' ಕೇಳಿದಳು. 'ಎಂಟೂವರೆಯಾಗಿದೆ' ಎಂದೆ. 'ಬ್ರಶ್ ಮಾಡಿ ಮುಖ ತೊಳೆದು ಬಾ' ಎಂದಿದ್ದಕ್ಕೆ 'ಆಂಟೀಜೀ, ನೀವೂ ನನ್ನೊಡನೆ ಬರುವಿರಾ...' ದೈನ್ಯದಿಂದ ಕೇಳಿದಳು. 'ನಡಿ' ಎನ್ನುತ್ತಾ ಅವಳ ಜೊತೆ ಹೊರಟೆ.

ಅಹಮದಾಬಾದಿನಲ್ಲಿ ಅಸಾವರಿಯ ಅಪ್ಪ, ಅಮ್ಮ ಇಬ್ಬರೂ ವೈದ್ಯರಾಗಿದ್ದರು. ಒಬ್ಬನೇ ಅಣ್ಣ. ಪ್ಲಸ್ ಟೂ ಓದುತ್ತಿದ್ದ. 'ಅವನೂ ಇಲ್ಲಿಗೆ ಬರುವವನಿದ್ದ. ಅದೇ ವೇಳೆಗೆ ಚಿಕ್ಕಪ್ಪ

ಸ್ವಿಟ್ಜರ್ಲೆಂಡಿನಿಂದ ಬಂದವರಿಂದ ಅವರ ಜೊತೆ ಹೋದ. ನಾನು ಇಲ್ಲಿಗೆ ಫ್ರೆಂಡ್ಸ್ ಜೊತೆ ಬಂದೆ' ಎಂದಳು. ತಾನು ಆರನೇ ತರಗತಿಯಲ್ಲಿ ಕಲಿಯುತ್ತಿರುವುದಾಗಿ ಹೇಳಿದಳು. ಅವಳ ಮಾತೂ ಕೂಡ ಕೇಳಲು ಅಷ್ಟೇ ಆಕರ್ಷಕವಾಗಿತ್ತು. 'ನಿನಗೆ ಅಸಾವರೀ ಅಂತ ಯಾರು ಹೆಸರಿಟ್ಟಿದ್ದು? ಹಾಗಂದರೇನು ಅಂತ ಗೊತ್ತಾ?' ಕೇಳಿದೆ. 'ಗೊತ್ತು, ಅದೊಂದು ರಾಗದ ಹೆಸರು. ಮಮ್ಮಿಗೆ ಸಂಗೀತ ತುಂಬ ಇಷ್ಟ. ಅದಕ್ಕೇ ಈ ಹೆಸರಿಟ್ಟರು.' 'ಸಂಗೀತ ನಿನಗೂ ಇಷ್ಟವೇ?' 'ಹೌದು ಆಂಟೀಜೀ, ನಾನು ಕಲೀತಿದೀನಿ, ಹಾಡ್ತೀನಿ' ಎಂದಳು. ಜ್ವರದಿಂದ ಬಳಲಿದ್ದ ಅವಳ ಮುಖವನ್ನೇ ನೋಡುತ್ತಿದ್ದ ನನಗೆ ಹಾಡು ಎನ್ನಲು ಮನಸ್ಸಾಗಲಿಲ್ಲ.

'ಮೇಡಂ' ಎಂದು ಯಾರೋ ಕರೆದಂತಾಯಿತು. ಟೆಂಟಿನ ಹೊರಗೆ ಬಂದು ನೋಡಿದೆ. ಮೆಹ್‌ತಾಜೀ ನಿಂತಿದ್ದರು. 'ಆ ಮಗುವಿನ ಮನೆಗೆ ವಿಷಯ ತಿಳಿಸಿ ಫೋನ್ ಮಾಡಿದ್ದೇನೆ. ಅವರ ತಂದೆ ಬಂದು ಕರೆದೊಯ್ಯುತ್ತಾರೆ. ಅಲ್ಲಿಯ ತನಕ ನಿಮ್ಮ ಸುಪರ್ದಿನಲ್ಲೇ ಇರಲಿ' ಎಂದರು. ಒಳಗೆ ಬಂದು ಅಸಾವರಿಗೆ ಅವಳ ತಂದೆ ಬರುವ ಸುದ್ದಿ ತಿಳಿಸಿ, 'ನಾಳೆ ನೀನು ಹೊರಡಬೇಕಾಗುತ್ತದೆ' ಎಂದೆ. ಮುಖ ಸಪ್ಪಗೆ ಮಾಡಿಕೊಂಡಳು.

ಮಾರನೆಯ ದಿನ ಅವಳ ತಂದೆ ಬಂದರು. ಅವರು ಮಗಳನ್ನು ನೋಡಿಕೊಂಡಿದ್ದಕ್ಕೆ ಥ್ಯಾಂಕ್ಸ್ ಹೇಳಿ, ಕೈ ಹಿಡಿದು ಕರೆದೊಯ್ಯುತ್ತಿದ್ದಾಗ ದಿಢೀರನೆ ಬಂದವಳೇ, 'ಆಂಟೀ, ನನಗೆ ನಿಮ್ಮ ವಿಳಾಸ, ಫೋನ್ ನಂಬರ್ ಕೊಡಿ' ಎಂದು ಕೇಳಿದಳು. 'ಪತ್ರ ಬರೀತೀಯಾ?' ಎಂದೆ, ಅವಳು ಮಾತನಾಡಲಿಲ್ಲ. ಎಷ್ಟೋ ಮಕ್ಕಳು ಊರಿಗೆ ಹಿಂತಿರುಗುವಾಗ ಶ್ರದ್ಧೆಯಿಂದ ಹೀಗೆ ವಿಳಾಸ, ಫೋನ್ ನಂಬರ್ ತೆಗೆದುಕೊಳ್ಳುತ್ತಿದ್ದರು. ಆದರೆ, ಯಾವತ್ತೋ ಒಂದು ಗ್ರೀಟಿಂಗ್ಸ್ ಕಳಿಸಿದ್ದನ್ನು ಬಿಟ್ಟರೆ ಉಳಿದಂತೆ ನೆನಪೇ ಬರುತ್ತಿರಲಿಲ್ಲ. ಇದೂ ಹಾಗೆಯೆ ಅಂದುಕೊಳ್ಳುತ್ತಲೆ ಅವಳಿಗೆ ನನ್ನ ಫೋನ್ ನಂಬರ್ ಬರೆದುಕೊಟ್ಟೆ. ಅದನ್ನು ಪಡೆದು ತಂದೆಯೊಡನೆ ಅವಳು ಕಾರು ಹತ್ತಿ ಹೋಗುವಾಗ ನನ್ನ ಕಣ್ಣುಗಳು ಅವಳನ್ನೇ ಹಿಂಬಾಲಿಸಿದವು.

ಇದಾದ ಮೂರು ವರ್ಷಗಳ ನಂತರ ಒಮ್ಮೆ ಇದ್ದಕ್ಕಿದ್ದಂತೆ ನನಗೆ ಅಚ್ಚರಿಯಾಗುವಂತೆ ಅಸಾವರೀ ಫೋನ್ ಮಾಡಿದ್ದಳು. 'ಹೇಗಿದ್ದೀರಿ ಆಂಟೀಜೀ, ನನ್ನ ನೆನಪು ಇದೆಯಾ? ನಾನು ನಿಮ್ಮನ್ನು ಮರೆತಿಲ್ಲ. ನಾನೀಗ ಸ್ವಿಟ್ಜರ್ಲೆಂಡಿನಲ್ಲಿ ಚಿಕ್ಕಪ್ಪನ ಮನೆಯಲ್ಲಿ ಓದುತ್ತಿದ್ದೇನೆ. ಮುಂದಿನ ವರ್ಷ ಇಂಡಿಯಾಕ್ಕೆ ಬಂದಾಗ ಟ್ರೆಕ್ಕಿಂಗ್‌ಗೆ ಬರ್ತೀನಿ. ನೀವೂ ಬರುತ್ತೀರಿ ತಾನೆ? ಅಲ್ಲಿ ಭೇಟಿಯಾಗೋಣ. ಬಾಯ್...' ಎನ್ನುತ್ತಾ ನಾನು ಉತ್ತರಿಸುವುದಕ್ಕೂ ಮುನ್ನ ಫೋನ್ ಇಟ್ಟುಬಿಟ್ಟಿದ್ದಳು. ನಾನು ಒಂದು ಕ್ಷಣ ಸ್ತಂಭಿತಳಾದೆ. ಆದರೆ ನಿಧಾನವಾಗಿ ಟೆಂಟಿನಲ್ಲಿ ಚಿಕನ್ ಫಾಕ್ಸ್ ಆಗಿ ಚಳಿಜ್ವರದಿಂದ ಮುದುರಿ ಮಲಗಿದ್ದ ಅಸಾವರಿಯ ಆಕರ್ಷಕ ಮುಖ ಕಣ್ಣ ಮುಂದೆ ಸುಳಿದಾಡಿತು.

✤ ಬಿ. ಎಸ್. ನಾಗರತ್ನಕುಮಾರಿ : 'ಹೊಂಬಾಳೆ', # ೨೨೨, ೧ನೇ ಮುಖ್ಯರಸ್ತೆ, ಬಾಪೂಜಿ ಬಡಾವಣೆ, ಬೋಗಾದಿ, ಮೈಸೂರು-೫೭೦ ೦೦೬ ✤

ಪಾ. ವೆಂ. ಆಚಾರ್ಯರ 'ಹೌಸಿಂಗ್ ಕಾಲನಿ'

ಬಸವರಾಜ ವಕ್ಕುಂದ

ಇದು ೧೫ ಸಂಪುಟಗಳಲ್ಲಿ ಪ್ರಕಟವಾದ ಪಾವೆಂ ಅವರ ಸಮಗ್ರ ಸಾಹಿತ್ಯದ ಪ್ರಕಟಣಾ ಯೋಜನೆಯಲ್ಲಿ ಕೊನೆಯದು. ಇಲ್ಲಿ ಪಾವೆಂ ಅವರ ಮೊದಲ ಪದ್ಯ ಸಂಕಲನ 'ನವನೀರದ' (೧೯೭೨)ದ ೪೦ ಪದ್ಯಗಳು; ಎರಡನೆಯ ಸಂಕಲನ 'ಕೆಲವು ಪದ್ಯಗಳು'(೧೯೭೮)ರ ೩೨ ಪದ್ಯಗಳು ಹಾಗೂ ಅಪ್ರಕಟಿತ ಸಂಗ್ರಹ 'ಪೆಂಗೋಪದೇಶ'ದ ೭೪ ಚೌಪದಿಗಳು ಸಂಕಲಿತಗೊಂಡಿವೆ.

ಪಾಂಡಿತ್ಯದ ಗಹನತೆ, ಕಾವ್ಯದ ನವಿರುತನ ಹಾಗೂ ಹರಟೆಯ ಹಗುರುತನ ಈ ಮೂರೂ ಮುಪ್ಪುರಿಗೊಂಡ ಪಾವೆಂ ಅವರ ಸಾಹಿತ್ಯ ಕನ್ನಡದ ಆಪ್ತ ದನಿಯಾಗಿ ಸದಾ ನಿಲ್ಲುವಂತಹದು. ವಿದ್ಯಾರ್ಥಿಯಾಗಿ ಹಲವಾರು ಸಲ ಅವರೊಂದಿಗೆ ಅತ್ಯಂತ ನಿಕಟವಾಗಿ ಸಂಭಾಷಿಸುವ ಅವಕಾಶ ನನ್ನದಾಗಿತ್ತು. ಇಂದಿಗೂ ಅವರು ನನ್ನೊಳಗೆ ದುರ್ಬೀನು ಕನ್ನಡಕ ಧರಿಸಿ ಎಲ್ಲವನ್ನು ಜಾಲಾಡುತ್ತ ರಸ್ತೆಯ ಪಕ್ಕದಲ್ಲೇ ಓಡಾಡಿದರೂ ಯಾರ ಗಮನಕ್ಕೂ ಬೀಳದ, ರಭಸದ ಬದುಕಿಗೆ ಮುದುಡಿಕೊಂಡ ಒಂದು ಕವಿತೆಯಂತೆ ಉಳಿದುಕೊಂಡಿದ್ದಾರೆ. ಅವರ ಕವಿತೆಗಳ ಬಗ್ಗೆ ಬರೆಯುವಾಗಲೂ ನನಗೆ ಅವರ ವ್ಯಕ್ತಿತ್ವದ ಹೆಜ್ಜೆಗಳು ಪದಗಳಲ್ಲಿ, ಸಾಲುಗಳಲ್ಲಿ, ಲಯ-ಛಂದಸ್ಸುಗಳಲ್ಲಿ ಓಡಾಡುತ್ತಿರುವಂತೆ ಭಾಸವಾಗುತ್ತದೆ. ನವೋದಯದ ಮಾಯೆಗೆ ಒಳಗಾಗಿಯೂ ಅದನ್ನು ವಾಸ್ತವದ ನಿಕಷಕ್ಕೊಡ್ಡಿ ನೋಡುವ ಹರಿತವಾದ ಬೌದ್ಧಿಕ ನೆಲೆಯೊಂದು ಅವರ ಕಾವ್ಯದುದ್ದಕ್ಕೂ ಜಾಗೃತವಾಗಿದೆ. ಆದರೆ ಅದನ್ನವರು ನೇರವಾದ ಪಾಂಡಿತ್ಯ ಮಾರ್ಗದಲ್ಲಿ– ಕಾವ್ಯದ ಸಂದರ್ಭದಲ್ಲಿ– ಪ್ರದರ್ಶಿಸದೆ ನಿಷ್ಕಲ್ಮಶ ವ್ಯಂಗ್ಯದ ವಕ್ರಮಾರ್ಗದಲ್ಲಿ ಅಳವಡಿಸಿಕೊಂಡಿರುವುದರಿಂದ ಅದಕ್ಕೊಂದು ಕಾವ್ಯಾತ್ಮಕ ಆಯಾಮ ನಿಲುಕಿದೆ. ಎಚ್. ಎಸ್. ಬಿಳಿಗಿರಿಯವರ ಪೋಲಿತನವಿಲ್ಲದ, ವಿ. ಜಿ. ಭಟ್ಟರ ಸರಳೀಕರಣಗಳಿಲ್ಲದ ಸೃಷ್ಟಿಯ ಬೆರಗನ್ನು ಮಗುವಿನ ಮುಗ್ಧ ಕಣ್ಣಿನಲ್ಲಿ ಕಾಣುತ್ತಲೇ ವಿವಗ್ಧನ ವಿಮರ್ಶಾತ್ಮಕ ಚಿಕಿತ್ಸೆಗೊಳಪಡಿಸುವುದರಿಂದ ಈ ಕವಿತೆಗಳಿಗೆ ವಿಶಿಷ್ಟ ಹದ, ತೂಕ ಸಂದಿದೆ.

ಬೆಳಕೆಲ್ಲಿ. ಬೆಳಕೆಲ್ಲಿ, / ಎಲ್ಲಿ ಬೆಳಕು? / ಎನ್ನ ದೇವರ ಗುಡಿಗ- / ದೆಲ್ಲಿ ಬೆಳಕು? /
ಕಾಡ ನೀರವದಲ್ಲಿ, / ಗುಹೆಯ ಕತ್ತಲೆಯಲ್ಲಿ / ಮೌನದಿ. ಸಮಾಧಿಯಲಿ / ಇಹುದೆ ಬೆಳಕು?

ಎಂದು ಪ್ರಶ್ನಿಸುವ ಅವರು ಬೆಳಕನ್ನು ಕಂಡುಕೊಳ್ಳುವದು ಜೀವನದ ನೇಹದಲ್ಲಿ,

ಬಿತ್ತ್ರ ಜೀವನದೊಂದು / ಘರ್ಷಣದಲಿ / ಸಿಡಿದ ಕಿಡಿಯನು ಹಿಡಿದು / ತನ್ನುಸಿರಲಿ /
ಊದೂದಿ ಅದನುರಿಸಿ, / ಆತ್ಮಯಜ್ಞವ ನಡೆಸಿ, / ಜೀವನದ ನೇಹದಲಿ /
ಬೆಳಗೆ ಬೆಳಕು! / ಬೆಳಕಲ್ಲಿ, ಬೆಳಕಲ್ಲಿ / ಅಲ್ಲಿ ಬೆಳಕು! (ಬೆಳಕೆಲ್ಲಿ)

ಆರಂಭದ ಕವಿತೆಗಳಲ್ಲಿಯೇ ಅವರಿಗಿದ್ದ ಈ ಸ್ವತಂತ್ರ ದೃಷ್ಟಿ, ಅಸ್ತಿತ್ವದ ಸೂಕ್ಷ್ಮ ಸ್ತರಗಳ ಅನಾವರಣಗೊಳಿಸುವ ತೀಕ್ಷ್ಣ ಒಳನೋಟ ಅವರ ಎಲ್ಲ ರಚನೆಗಳಲ್ಲಿ ಸಹಜ ವಿಕಾಸ ಪಡೆದಿರುವುದು ಕಂಡುಬರುತ್ತದೆ.

ಕೀರ್ತಿಶನಿಯ ಕುರಿತ ಅವರ 'ಜಸದ ಮರುಳು' ಕವಿತೆ ಇಂದಿನ ಲಾಭ-ಲೋಭ ದಿನಮಾನಕ್ಕೆ ಹೆಚ್ಚು ಪ್ರಸ್ತುತವೆನಿಸುವಂತಿದೆ.

ಎಂತೆ ಆಗಲೊಲ್ಲದೇಕೆ / ಕೀರ್ತಿಯೊಂದ ಗಳಿಸುವ!
ಎಂಬುದೊಂದೆ ಮರುಳು ಹಿಡಿದಿ- / ದದನದೆಂತು ಅಳಿಸುವ?
ಒಂದು ಕೆಲಸ ಮಾಡೆ ಮುಂಚೆ / ಜಸದ ಫಲದ ಉತ್ಕಟೇಚ್ಛೆ!

ತಮ್ಮ ಮನದ ಈ ಬಯಕೆ ಮರುಳನ್ನು ವಿಡಂಬಿಸುತ್ತ ಆತ್ಮಶೋಧಗೈಯುವ ಪಾವೆಂ ಅವರ ಆತ್ಮನಿಗ್ರಹ ಗುಣ ಕವಿತೆಯ ಮುಖ್ಯ ಆಶಯವೂ ಆಗಿ ಇಂದಿನ ಅಗತ್ಯವೂ ಎನಿಸುತ್ತದೆ. ಡಿ.ವಿ.ಜಿ.ಯವರ 'ಮಂಕುತಿಮ್ಮನ ಕಗ್ಗ'ದ ಈ ಕೆಳಗಿನ ಪದ್ಯವನ್ನು ಇದು ನೆನಪಿಸದೆ ಇರದು :

ಅನ್ನದಾತುರಕಿಂತ ಚಿನ್ನದಾತುರ ತೀಕ್ಷ್ಣ / ಚಿನ್ನದಾತುರಕಿಂತ ಗಂಡು ಹೆಣ್ಣೊಲವು /
ಮನ್ನಣೆಯ ದಾಹವದು ಎಲ್ಲಕೂ ತೀಕ್ಷ್ಣತಮ / ತಿನ್ನುವುದು ಆತ್ಮವನು - ಮಂಕುತಿಮ್ಮ

ಐತಿಹಾಸಿಕ ವಿಷಯಗಳನ್ನು ಆಧರಿಸಿ ಬರೆಯುವಾಗಲೂ ಪಾವೆಂ ಅವರ ಕವಿ ಹೃದಯ ಭಿನ್ನ ಒಳಸುಳಿಗಳನ್ನು ಕಾಣಿಸಲು ಸಮರ್ಥವಾಗಿದೆ. ಇನಿಯನ ಸ್ವಾಗತ, ಸಂಯುಕ್ತೆ, ಯುದ್ಧದಂತಹ ಕವಿತೆಗಳಲ್ಲಿ ಚರಿತ್ರೆಗೆ ಅಂಟಿರುವ ರಕ್ತದ ಕಳಂಕವನ್ನು; ಹೊನ್ನು, ಹೆಣ್ಣು, ಮಣ್ಣಿಗಾಗಿ ನಡೆಸುವ ದುರಂತದ ಸ್ಮೃತಿಗಳನ್ನು ಮಾರ್ಮಿಕವಾಗಿ 'ಸಂಯುಕ್ತೆ'ಯಲ್ಲಿ ವಿಡಂಬಿಸಿದ್ದಾರೆ :

ಪೌರಾಣಿಕ ಯಶವೆತ್ತಾ ದಿಲ್ಲಿ- / ಯಾರಾ ಹೆಸರನು ಅರಿಯದರಿಲ್ಲಿ?
ಸಾವಿರ ವಂಶಗಳಾಳಿದ ನಗರ / ಸಾವಿರ ವಂಶದ ನೆತ್ತರ ಕೊಳ್ಳಿ! / ....
ಗುಡುಗು ಮಿಂಚ ಹಿಂಬಾಲಿಸುವೊಲ್! / ಮೊದಲನು ಕೊನೆ ಬೆನ್ನತ್ತುವವೊಲ್?

'ಮೊದಲನು ಕೊನೆ ಬೆನ್ನತ್ತುವ' ಕಲ್ಪನೆ ಪಾವೆಂ ಅವರ ಶಕ್ತಿಗೆ ನಿದರ್ಶನ. ಕೇವಲ ವೇದಾಂತಿಯ ಹುಟ್ಟು ಸಾವಿನ ತಾತ್ತ್ವಿಕ ಜಿಜ್ಞಾಸೆಯೆನಿಸಬಹುದಾದ ಈ ಸಾಲು ಬಳಕೆಗೊಂಡ ಸನ್ನಿವೇಶದ ಬಲದಿಂದ ಅಪೂರ್ವವೆನಿಸುವ ಜೀವದ ಮಿಡುಕನ್ನು ಪಡೆಯುತ್ತದೆ. ದಿಲ್ಲಿ ನೆತ್ತರ ಕೊಳ್ಳಿ ಎಂದು ಹೇಳುವುದರ ಹಿಂದೆ ಚರಿತ್ರೆಯ ದುರಂತ ಮುಖದೊಂದಿಗೆ, ಆ ಕೊಳ್ಳಿಯನ್ನು ಸೃಷ್ಟಿಸುವ ರಾಜಕೀಯ ವಿದ್ಯಮಾನಗಳ ಹಿಂದಿನ ಮನಸ್ಸನ್ನು ಕಾಣಿಸುತ್ತಾರೆ.

ಒಬ್ಬನೊಬ್ಬನ ಕೊಲಲು ಕೊಲೆಯಹುದು ಶುದ್ಧ,
ರಾಜ್ಯ ರಾಜ್ಯವ ಕಡಿಯೆ ಅದು ಹಿರಿದು, ಯುದ್ಧ!
ಒಬ್ಬನನು ಕೊಂದವನು ಕೊಲೆಗಡಕ, ಕ್ರೂರ
ರಾಷ್ಟ್ರಗಳ ಕಡಿದವನೊ ಬಲು ಧೀರ, ಶೂರ!
ಆದರೂ ಮನುಜ ಮೃಗಗಳಿಗೆ ಮೇಲಂತೆ!
ಪಶುಗಳಿದ ಕೇಳಿದರೆ ನಗವೆ, ಓ ವೀರ? / ....
ಯುಗಯುಗಗಳಿಂ ಕಲಿತು ಮನುಜನೇನಾದ?–
ಜ್ಞಾನಿಯಾಗಿಲ್ಲ, ಬರಿ ತೀಕ್ಷ್ಣಮತಿಯಾದ.
ಮಸೆದ ಕೊಡಲಿಯ ಕೂರ್ಪ ಕಂಡುಹಿಡಿವುದಕೆ!
ತೊಡಗಿದನು ಮನೆಯ ಕಂಬವನೆ ಕಡಿವುದಕೆ! (ಯುದ್ಧ)

ಮೊದಲ ಸಂಕಲನದಲ್ಲಿ ರಮ್ಯ ಧಾಟಿಯ ಕೆಲವು ಪ್ರೇಮ ಕವನಗಳಿದ್ದರೂ ಅವುಗಳಲ್ಲಿ ಪಾವೆಂ ಅವರಿಗೇ ವಿಶಿಷ್ಟವಾದ ಸಭ್ಯ ಶೃಂಗಾರದ ಧ್ವನಿಪೂರ್ಣ ನೇಯ್ಗೆಯನ್ನು, ವಿಷಾದಪೂರ್ಣ ಎಳೆಗಳನ್ನು ಗುರುತಿಸಬಹುದಾಗಿದೆ :

ನಿನ್ನ ತುಟಿ ಸೋಂಕುವಾ ಸೌಭಾಗ್ಯವಿರದ / ಈ ಕೊಳಲ ಕೊರೆಯಲಿಲ್ಲಿ– ಇಂತೇಕೆ /
ಸಮಯವನು ಕಳೆದೆ ನಲ್ಲ?– ಇಂದೀಗ / ಈ ಮುರಲಿ ಧೂಳಿನಲಿ ಹೊರಳುತಿಹುದಿಲ್ಲಿ /
ಈ ಮಾರ್ಗಮಧ್ಯದಲ್ಲಿ! (ಮುರಲಿಯ ಹಾಡು)
'ನಿಲ್ಲೆ ನಲ್ಲೇ' ಎನುತೆ ತಡೆಯೆ ದಾರಿಯೊ'ಳೊಲ್ಲೆ /
ನಾನೆಂ'ದು ಬಿಡದೆ ನೀ ಸಾಗು ಮುಂದೆ! / ಕೈವಿಡಿದು ಮುತ್ತೊಂದ ಕಸಿದುಕೊಂಬೆ! /
ಅದಕಾಗಿ ಮುತ್ತು ನಾ ಹಸಿದುಕೊಂಬೆ! (ಕರೆ)

ಕಾವ್ಯಸ್ಫುರಣೆಯ ರಹಸ್ಯವನ್ನು ಸಾಕ್ಷಾತ್ಕರಿಸಿಕೊಳ್ಳುವ ಹಲವಾರು ರಚನೆಗಳು ಇಲ್ಲಿದ್ದು ಅವುಗಳಲ್ಲಿ ಭಿನ್ನ ಭಾವಗಳ ಸೆಳವುಗಳು ಮೇಳೈಸಿಕೊಂಡು ಸಂಕೀರ್ಣ ಅನುಭೂತಿಯೊಂದನ್ನು ಅವರು ಸಹಜವಾಗಿ ಕಟ್ಟಿಕೊಡುತ್ತಾರೆ.

ಕಮಲದೆಲೆಯ ಮೇಲಿನೊಂದು / ಹನಿಯ ತೆರದಿ ಹೃದಯವಂದು
ನಡುಗಿ ಕೆಡೆಯದಿರದು ನಿನ್ನ / ವಿರಹಕಾನು ಸಂದಿರೆ–
ಕವಿತೆ, ನೀನು ನಿರುತವೆನ್ನ / ಹೃದಯದಲ್ಲಿ ನಿಂದಿರೆ!

ಕವಿತೆಯ ವಿರಹ ನಲ್ಲೆಯ ವಿರಹದ ಕಾವನ್ನು ಮೂಡಿಸುವುದರೊಂದಿಗೆ ಕವಿತೆ ಮೂಡುವ ಭಾವೋತ್ಕಟ ಕ್ಷಣ 'ಪದ್ಮ ಪತ್ರದ ಜಲಬಿಂದುವಿನಂತೆ' ಕ್ಷಣಿಕ ಎನ್ನುವದು ನಾಗಚಂದ್ರನನ್ನು ನೆನಪಿಸುವ ಮೂಲಕ (ಸೀತೆಯನ್ನು ಕಂಡಾಗಿನ ರಾವಣನ ಮನಃಸ್ಥಿತಿಯದು!) ಬೇರೆಯದೆ ಕಂಪನ ವಲಯವನ್ನು ದೀಪ್ತಗೊಳಿಸುತ್ತದೆ. ಅದರ ಆರೋಹಣ ಅವರೋಹಣಗಳು ಭಿನ್ನ ವಿಸ್ತಾರದಲ್ಲಿ ಒಂದರೊಳಗೊಂದು ಪ್ರತಿಫಲನಗೊಳ್ಳುತ್ತ ಕವಿತೆಯ ಸಾರ್ಥಕ ಸಾಧ್ಯ ಧ್ವನಿಗಳ ಸಾಂಗತ್ಯ ನಿರ್ಮಾಣವಾಗುತ್ತದೆ. 'ಚುಕ್ಕಿಗಳಿಗೆ' ಪದ್ಯದ ಈ ಸಾಲುಗಳನ್ನು ಗಮನಿಸಿದರೆ ಈ ಅಭಿಪ್ರಾಯದ ಯಥಾರ್ಥತೆ ಅರಿವಿಗೆ ಬರಬಲ್ಲದು :

ಅಕ್ಕಟಾ! ಚುಕ್ಕಿಗಳೆ, ಏತಕೀ ಗಗನದಲಿ
ನೂರಾರು, ನೂರಾರು ಮಿನುಗುತಿಹಿರಿ? / ....
ಒಂದೊಂದು ಕಿಡಿಯಿದೆನ್ನಯ ಎದೆಯ ಹತ್ತಿಯಲಿ
ಹೊತ್ತಿಕೊಂಡುರಿಯುತಿದೆ ಬೆಂಕಿಯಾಗಿ
ಒಂದೊಂದು ಚಣಕು ನೂರಾರಾಹತಿಯ ಪಡೆದು
ನೊಂದು ಝುಂಕರಿಸುತಿದೆ ವೀಣೆ, ಕೂಗಿ! / ....
ತಡೆಯಲಾರೆನು ನಾನು / ಕಣ್ಣು ಹಗೆಗಳ ಮಿನುಗ,
ನಡೆಯಲಾರೆನು ಮುಂದೆ / ಹೆಜ್ಜೆ ಹೆಜ್ಜೆಗು ಮಿಡುಕ.

ಬಹಿರಂಗ ಗಗನದಷ್ಟೇ ಅಂತರಂಗದ ಗಗನದ ವಿಸ್ತಾರವನ್ನು ಕಣ್ಣು ಹೃದಯಗಳ ತಳಮಳದೊಂದಿಗೆ ಪೀಣಾರವವಾಗಿಸುವ ಸಂಕೀರ್ಣತೆ ಎಷ್ಟೆಲ್ಲವನ್ನು ಒಳಗೊಳ್ಳುತ್ತದೆ,

ಹೊರಗೆಡವುತ್ತವೆ. ಇಂಥ ಭಾವಗಳು ಕೇವಲ ಕಾಲ್ಪನಿಕ ಚಿತ್ರಗಳೆನಿಸದೆ ಹಾಗೆ ಅವರಲ್ಲಿ ಕಟು ವಾಸ್ತವದ ತಲಾತಲಗಳನ್ನು ದರ್ಶಿಸುವ ಮುಖವೂ ಇರುವುದರಿಂದ ವೈಚಾರಿಕ ಸಂವೇದನೆಯ ಆಯಾಮವೊಂದು ಸಹಜವಾಗಿಯೇ ಅಲ್ಲಿ ಸಾಧಿತಗೊಳ್ಳುತ್ತದೆ.

ಅಳಿದ ಬಯಕೆಯ ಚಿತೆಯ ಮೇಲಿನ / ಕವಲು ಕಿಡಿಯಂಗಾರ ನೀನೆ?

ಮುಳಿದ ಭಾಗ್ಯದ ಪ್ರತಿಹತಿಯ, ಮನ- / ಕರಗಿಸುವ ಗುರಿಬೊಂಬೆ ನೀನೆ?

'ಏನನೆಣಿಸುತಲಿರುವೆ?' ಕವಿತೆಯ ಈ ಸಾಲುಗಳಲ್ಲಿ ಸಂಚರಿಸುವ ತಣ್ಣಗಿನ ವಿಷಾದ 'ಕೊನೆಯ ಹಾಡು'ವಿನಂತಹ ಇನ್ನೂ ಹಲವಾರು ಪದ್ಯಗಳಲ್ಲಿ ಒಳದನಿಯಾಗಿ ಮಿಡಿದಿದೆ. 'ನನ್ನ ಗೋರಿಯ ಮೇಲೆ' ಕವಿತೆ ವೈಯಕ್ತಿಕ ಬದುಕು ಹರಿಹಂಚಾದ ಅವಸ್ಥೆಯನ್ನು ಆತ್ಮಮರುಕಕ್ಕೆಡೆಗೊಡದೆ ನಿರ್ಭಾವುಕ ಶೈಲಿಯಲ್ಲಿ ಚಿತ್ರಿಸಿದರೆ 'ಇದು ಏಕೆ ಹೀಗಾಯ್ತು' ಕವಿತೆ ನೋವಿನ ಆತ್ಯಂತಿಕ ಸೆಲೆಗಳನ್ನು ತೋಡಿದ ಬಗೆ ಕರುಳು ಕಿವುಚುವಂತಿದೆ.

ಗೂಡುಗೆಟ್ಟಿಹ ಖಗಕೆ ಹಾಡೊಂದೆ ಸಂಗಾತಿ.— / ಆ ಹಾಡನಾರು ಸೆರೆಯಿಕ್ಕಿದವರು? /

ಜೋಡುಗೆಟ್ಟಿಹ ವಿಧವೆಗುಳಿದೊಂದೆ ಕಣ್ಣೀರ / ಕಣಜಕವರಾರ್ ಕನ್ನವಿಕ್ಕಿದವರು?

ಇದು ಮನುಜಮಾತ್ರದವರಿಂದ ಉಂಟಾದ ಅಳಲೆನಿಸದೆ ವಿಧಿಯ ನಿಗೂಢ ಕಡೆಗಿನ ತಹತಹವೆನಿಸುತ್ತದೆ. 'ರೊಟ್ಟಿಯ ರಾಗ'ದಂತಹ ಕವಿತೆಗಳಲ್ಲಿ ವಿಡಂಬನೆಯು ವಿಷಾದದ ಛಾಯೆಯೊಂದಿಗೆ ಕವಿಯ ಸಾಮಾಜಿಕ ಜವಾಬ್ದಾರಿಯ ಎಚ್ಚರವನ್ನು ಒಳಗೊಳ್ಳುತ್ತದೆ.

ಸೌಂದರ್ಯದ ದೇವಿಯ ಪೂಜಾರಿ, / ದುಗುಡದ ನೋವಿಗೆ ಸುಯ್ಲನು ಕಾರಿ /

ಜಗವೊಂದಿದೆ ನರಳುತೆ, ಮರೆಯುವೆಯೆ?

ಇದಕ್ಕೆ ಇನ್ನಷ್ಟು ಗಾಢತೆಯನ್ನು ಒದಗಿಸುವುದು 'ನುಸಿಗೆ' ಕವಿತೆ.

ಬಡ ಮುನಸಿಪಾಲಿಟಿಗೆ ಒಡಹುಟ್ಟಿದವ ನೀನು! / ....

ಓ ನುಸಿಯೇ, ಪ್ರೇಮಗಾನದ ಸಸಿಯೆ, ಸಂತಸಿಯೆ!

ನಿನ್ನನರಿಯದೆ ಜರೆವ ಮಾನವನೆ ಕಡುಕಿವುಡ!

ಇದಕೊ! ನಿನಗೆನ್ನ ನೆತ್ತರ ಕಾಣ್ಕೆ, ಹಸಿಬಿಸಿಯೆ!

ಕವಿ ಮತ್ತು ಕವಿತೆಗೆ ಜೀವ-ಜೀವಿತ ಭಾವ ಇರಬೇಕು, ಇದನ್ನು ಪಾವೆಂ ಅವರಷ್ಟು ಅವಿನಾಭಾವದಿಂದ ಬರೆದ ರಚನೆಗಳು (ಕನ್ನಡದಲ್ಲಿ) ಅಪರೂಪ.

ಇದು ಭೋಗ್ಯವೇ ಇರಲಿ, / ಇದು ತ್ಯಾಜ್ಯವೇ ಇರಲಿ,

ಸಾಮಾನ್ಯವೇ ಇರಲಿ, / ಇದು ನನ್ನ ಕಾವ್ಯ.

ಇದರೊಳಗೆ ನನ್ನೆದೆಯು / ಮಿಡಿದಿಹುದು ಸತ್ಯ. / ....

ಇದರೊಳೆನ್ನೆದೆಯಿಲ್ಲೆ?/ನನಗೆದೆಯೆ ಇಲ್ಲ!

ಇದರೊಳಗೆ ನಾನಿಲ್ಲೆ? / ನಾನೆ ಇರಲಿಲ್ಲ!

ಇದು ಅನುಭವದ ಪ್ರಾಮಾಣಿಕತೆಯನ್ನು ಜೀವನ ಮರಣದಷ್ಟು ಗಾಢವಾಗಿ ಶೋಧಿಸಿಕೊಂಡಾಗ, ಇಡಿಯಾಗಿ ತನ್ನನ್ನೊಡ್ಡಿಕೊಂಡಾಗ ಹುಟ್ಟುವಾಗಿನ ಭಾವದ ನಿಲುವಲ್ಲವೇ? ತನ್ನ ಒಡಲ ನೂಲಿನಿಂದ ನೇಯುವ ಜೇಡನ, ತೆರಣೆಯ ಕೆಲಸವಿದು. ಇಲ್ಲಿ

ಬೇಂದ್ರೆ ನೆನಪಾಗುವದು ಹೀಗೆ : 'ತನ್ನ ಕಿರಣ ತನಗೆ ಹಗಲು / ಉಳಿದ ಬೆಳಕು ಕತ್ತಲು.'

ಬೇಂದ್ರೆ, ಕುವೆಂಪು, ಕಣವಿ, ಪಟ್ಟಣಶೆಟ್ಟಿ ಅಂಥವರಲ್ಲಿ ಕಾಣಸಿಗುವ ವಾತ್ಸಲ್ಯದ ರಚನೆಗಳನ್ನು ನೆನಪಿಸುವ 'ಮಗುವಿಗೆ'ಯಂತಹ ಪದ್ಯದ ದಟ್ಟ ಶಿಲ್ಪದಲ್ಲಿ ಮಗುವೊಂದು ಜೀವ ತಳೆದು ಓಡಾಡುವಂತೆ ಅನಿಸಿಬಿಡುತ್ತವೆ. ಮಗುವಿನ ಬೇರೆ ಬೇರೆ ಚಟುವಟಿಕೆಗಳ ಸಮಗ್ರ ಚಿತ್ರಣ ನೀಡುವ ಈ ಕವಿತೆ 'Child is the father of man' ಎಂಬ ಧ್ವನಿಯ ಅನುಭಾವ ತರಂಗಗಳನ್ನು ನಮ್ಮೊಳಗೆ ಎಬ್ಬಿಸುತ್ತದೆ.

ನಿನ್ನ ಎಳೆಗುರುಳ ಹೊದ್ದಿಹ ಚಿಕ್ಕ ತಲೆಯಲ್ಲಿ
ಬುದ್ಧನೊಬ್ಬನ ಬೋಧವಡಗಿ ಮಲಗಿಹುದೆ?
ಆವ ಘನ ಸಂದೇಶ ನಿನ್ನ ಕಳುಹಿದುದಿಲ್ಲಿ?
ಏಸು ಜನುಮಂಗಳನುಭವಸಾರ ಹರಿಯುತಿದೆ ನಿನ್ನ ನೆತ್ತರದೆ?

—ಎಂಬ ಪ್ರಶ್ನಾರ್ಥಕ ಉದ್ಗಾರಗಳು ವಾಸ್ತವದ ಪರಿಧಿಯಲ್ಲಿಯೇ ಫಲಿಸುವ ಅನಂತದ ಬೆಳಸಲ್ಲವೇ?

ವಾಸ್ತವತೆ, ವೈಚಾರಿಕತೆ, ವೈಜ್ಞಾನಿಕತೆಯ ನಮ್ಮ ಅತಿರೇಕ ವಿರೋಧಾಭಾಸಗಳನ್ನು ಅವರು ವಿಡಂಬಿಸುವ ರೀತಿ ಮಣ್ಣಿನ ವಾಸನೆಯ ಮಣ್ಣಿನ ಕಣ್ಣುಗಳನ್ನು ಭಿನ್ನ ಬೆಳಕಿಗೆ ತೆರೆಸುವಂತಿದೆ.

ಬೇಡ, ದಮ್ಮಯ್ಯ! ಓ ವಿಜ್ಞಾನಿ, / ಈ ಅಲರ ಪಕಳೆಯನು ತೂಗದಿರು ನನ್ನೆದುರು /
ನಿನ್ನ ಅತ್ಯಾಧುನಿಕ ತ್ರಾಸಿನಲಿ; / .... /
ಬೇಡ ಬೇಡೆನಗೆ ನೀ ಕೊಡಬೇಡ ಲೆಕ್ಕವನು— / ಈ ಗುಲಾಬಿಯಲಿ ಕಸವಂಶವಿಷ್ಟು, /
ನೀರಿಷ್ಟು ಇಂಥಿಂಥ ರಸಾಯನಗಳಿಷ್ಟಿಷ್ಟು / ಎಂದು ಶತಾಂಶ ಭಾಷೆಯಲಿ! /
ರಸವೆ ಮೈವೆತ್ತು ಬಂದಿದೆಯೆಂದು ನಾನಿದಕೆ / ಸ್ತೋತ್ರವೊಂದನು ಹಮೆಯುತಿರೆ, /
ತರಬೇಡ ನಿನ್ನ ಲೆಕ್ಕವನು— / ನನಗೆ ದುಕ್ಕವನು. (ಕವಿ-ವಿಜ್ಞಾನಿಗೆ)

'ಉದ್ದೇಶ' ಕವಿತೆಯು ಪಾವೆಂ ಅವರ ಪ್ರತಿಭೆಯ ಆಳ ವಿಸ್ತಾರಗಳೆರಡನ್ನು ಸಮರ್ಥವಾಗಿ ಬಿಂಬಿಸುವ ಪ್ರಾತಿನಿಧಿಕ ಕವನ. ತಾಯಿ-ಬಿತ್ತುಗಳ ನಡುವಿನ ಸಂಭಾಷಣೆಯ ಮೂಲಕ ವಿಶ್ವದ ರಹಸ್ಯವನ್ನು ಅರಿಯುವ, ಅದನ್ನು ಮಾನವೀಯ ನೆಲೆಯಲ್ಲಿ ಅನಾವರಣಗೊಳಿಸುವ, ವಿಡಂಬನಾತ್ಮಕವಾಗಿಯೆ ಬೆಳೆದು ನಿಲ್ಲುವ ಈ ಕವಿತೆ ರವಿ ಬೆಳಗೆರೆ ಅವರ ಕತೆಯೊಂದಕ್ಕೆ ಸ್ಫೂರ್ತಿ ನೀಡಿದ್ದನ್ನು ಅವರು ತುಂಬು ಭಾವದಿಂದ ನೆನೆದಿರುವುದನ್ನು ಇಲ್ಲಿ ನೆನಪಿಸುತ್ತಿರುವೆ. 'ಪಾವೆಂ ಹೇಳಿದ ಕತೆ' ಎಂತಲೇ ಆ ಸಂಕಲನಕ್ಕೆ ಹೆಸರಿಟ್ಟಿರುವುದು ಈ ಕವಿತೆಯ ಇನ್ನೊಂದು ವಿಮರ್ಶಾತ್ಮಕ ನೋಟವೆಂತಲೋ ಕವಿತೆಯೊಂದರ ಸೃಜನಾತ್ಮಕ ಪ್ರೇರಣೆಯ ಮಹತಿಯೆಂತಲೋ ಗುರುತಿಸಬಹುದಾಗಿದೆ.

ಬೀಜದಲಿ ಮಲಗಿದ್ದ ಭೂಜವೊಂದೆಚ್ಚತ್ತಿತ್ತು:
ಶೂನ್ಯದಲಿ ಚೆಲ್ಲಿರುವ ನೀಲಪ್ರಕಾಶವಿಸ್ತಾರದಲಿ
ತನ್ನ ಚೇತನದ ಕೇತನವನೆತ್ತಿ, / ....
ನರಳಿತ್ತು ಬಿತ್ತು:

ಗರ್ಭವನು ಸೀಳಿ ಬಹ ನವಜೀವದಾತುರದ / ನುಗ್ಗಾಟವನು,
ನಾಡಿನಾಡಿಗಳಲೊತ್ತರಿಸಿ ಧಾವಿಸುವ ಯಾತನೆಯ,
ನರನರವ ನುಗ್ಗುನುರಿಗೈಯುವಾ ಸಂಕಟವ,
ತಾಳಿಕೊಂಬುವ ಹಿಮಾಲಯಸಾಹಸವ ಹೊತ್ತು ಹೊತ್ತು
ಕಂಠದೊಳಗರ್ಧಾವರುದ್ಧ ನಿಃಶ್ವಾಸವನು ಒತ್ತಿಟ್ಟು ಒತ್ತಿಟ್ಟು,
ಮಿದುವಾಗಿ ನರಳಿತ್ತು ಬಿತ್ತು. (ಉದ್ದೇಶ)

ಈ ಪದ್ಯ ಅಡಿಗರ 'ಭೂಮಿಗೀತ'ದಷ್ಟೇ ಮಹತ್ವದ್ದು. ಸೃಷ್ಟಿ ರಹಸ್ಯದ ಬೆರಗನ್ನು ಅನುಭಾವದಲ್ಲಿ ನಿಲ್ಲಿಸದೆ ವಿಜ್ಞಾನದಲ್ಲಿ ಬೆಳೆಸಿರುವುದು, ಎಲ್ಲೂ ವಿಜ್ಞಾನದ ಮಾಹಿತಿಗಳಲ್ಲಿ ಮುಳುಗಿಸದೆ ಕಾವ್ಯದ ರೂಪಕಾತ್ಮಕ ಅನುಭೂತಿಯಲ್ಲಿ ಕಟೆದಿರುವುದು ಮುಂಬರುವ ಕಾವ್ಯದ ದಿಕ್ಸೂಚಿಯಂತಿದೆ.

ಈ ಲೇಖನದಲ್ಲಿ ಮುಖ್ಯವಾಗಿ ಪಾವೆಂ ಅವರ ಮೊದಲ ಸಂಕಲನದ ಕವಿತೆಗಳನ್ನು ವಿಶ್ಲೇಷಣೆಗೆ ಎತ್ತಿಕೊಳ್ಳಲಾಗಿದೆ. ಅವರ ಇತರ ಕವಿತೆಗಳ ಕುರಿತು ಇನ್ನಷ್ಟು ಬರೆಯುವ ಆಶೆಯಿದೆ. ಈ 'ಹೌಸಿಂಗ್ ಕಾಲನಿ'ಯಲ್ಲಿ ಗಾಳಿ ಬೆಳಕುಳ್ಳ ಯೋಜನಾಬದ್ಧ ಮನೆಗಳಿವೆ. ಗಂಭೀರ ಅಧ್ಯಯನಕ್ಕೆ ಕರೆಯುವ ಹೆದ್ದಾರಿಗೆ ಬೈಪಾಸ್ ನೀಡುವ ವಿಶಾಲ ರಸ್ತೆಗಳಿವೆ ಎಂದು ಸೂಚಿಸುತ್ತ ಇವರ ಕೊನೆಯಲ್ಲಿ ಪಟ್ಟಣಶೆಟ್ಟಿಯವರು ನೀಡಿರುವ ಅಭಿಮತದೊಂದಿಗೆ ದನಿಗೂಡಿಸುವೆ : 'ಛಂದೋವೈವಿಧ್ಯ, ಲಯಸೌಂದರ್ಯ, ಪ್ರಯೋಗ ನಾವೀನ್ಯ, ವಿಷಯ ವಿವೇಚನೆ, ಕಾವ್ಯಾನುವಾದ ಮುಂತಾದ ಎಲ್ಲ ದೃಷ್ಟಿಯಿಂದ ಪಾವೆಂ ಒಬ್ಬ ಸಮರ್ಥ ಕವಿ.'

❖ ಬಸವರಾಜ ವಕ್ಕುಂದ : # ೩೨, ಮಾಲತೇಶ ಬಿಲ್ಡಿಂಗ್, ೧ನೇ ಕ್ರಾಸ್, ಕೆಲಗೇರಿ ರಸ್ತೆ, ಕುಸುಮನಗರ, ಧಾರವಾಡ - ೫೮೦ ೦೦೮ ❖

ಪ್ರಭಾವಿಭಾವ ಕವಿತೆ

ಎಸ್. ವಿ. ಪ್ರಭಾವತಿ

ಇರು

ನಿನ್ನ ಇರುವಿಕೆಯೇ
ನನಗೊಂದು ಚೇತನ
ಮೋಡ, ಆಕಾಶ, ಗಿಡ, ಮರ,
ಹುಲ್ಲು, ಹೂ– ಇವು ಹೇಗೆ 'ಇರು'
ತ್ತವೆಯೋ ಹಾಗೇ ನೀನೂ ಇರು.

ಅವೂ ಏನೂ ಕೊಡುವುದಿಲ್ಲ
ನೀನೂ ಏನೂ ಕೊಡಬೇಡ.
ಆದರೆ ಅವುಗಳಂತೆ ನೀನು 'ಇರು'
ವುದಿದೆಯಲ್ಲಾ ಅದೇ
ನನಗೆ ದೊಡ್ಡದು.

ಮತ್ತೆ ಮತ್ತೆ

ಮತ್ತೆ ಮೋಹಿಸುವಾಸೆ ತೃಷೆ ತೀರದು
ಹಲವು ಸಲ ಜಗಿದರೂ ಈ ರಸ ತೀರದು.
ಒಸರಿ ಬರುವ ಒರತೆ ನಿಲ್ಲದೆಂದೇ ತೋರಿದೆ
ಬದುಕೇ ಬಾಯಾರಿದೆ ಸ್ವೀಕರಿಸು ಓ ಬದುಕೇ
ನನ್ನದೆಲ್ಲವೂ ನಿನ್ನದೇ ಏಕಿನ್ನೂ ಸಂಕೋಚ.
ಸವಿಯಲೆಂದೇ ನಾವು ಇಹುದಲ್ಲವೇ.
ನಮ್ಮೆದೆಯ ತೋಟಗಳ ಹೂ ಅರಳುವ ವರೆಗೆ
ಗಂಧ ತೀರುವ ವರೆಗೆ ಗಾಳಿ ಬೀಸುವ ವರೆಗೆ
ಸವಿಯೋಣ ಬಾ ತಿರಸ್ಕಾರ ಸಲ್ಲದು
ಬದುಕ ಮನ್ನಿಸು ಪ್ರಭುವೇ
ಬೆಳೆಯಗೊಡು ಹೀಗೇ.

ಬಿಡು

ಹರಿಯುತಿರುವ ನದಿ
ಹರಿಯುತಿರಲಿ ಬಿಡು
ತಡೆಯನೆಂದೂ ಒಡ್ಡದಿರು
ಬದುಕನೆಂದೂ ಕದಡದಿರು
ಆಶಯವನು ಬಿಸುಡದಿರು
ನಿರೀಕ್ಷೆಯನೆಂದೂ ಸುಡದಿರು
ಮೋಡ ಚಲಿಸುತ್ತವೆ
ಬಿಸಿಲು ಬಾಡುತ್ತದೆ
ವರ್ಷಗಳು ಉರುಳುತ್ತವೆ.
ಅಂಗಾಂಗಗಳು ಕುಸಿಯುತ್ತವೆ.
ಉಸಿರು ನಿಲ್ಲುತ್ತದೆ
ನಿಲ್ಲಲಿ. ಆದರೆ
ನದಿ ಹರಿಯುತ್ತಿರಲಿ

ಅಯ್ಯಾ

ಅಯ್ಯಾ ನೀ ಓದಿದರೆ ಓದು
ಓದದಿದ್ದರೆ ಮಾಣು
ನಾ ನಿನಗೆ ಬರೆದಲ್ಲದೇ ಸೈರಿಸಲಾರೆ
ಅಯ್ಯಾ ನೀ ಬಂದರೆ ಬಾ
ಬಾರದಿದ್ದರೆ ಮಾಣು
ನಾ ನಿನ್ನ ಕರೆದಲ್ಲದೇ ಸೈರಿಸಲಾರೆ
ಅಯ್ಯಾ ನೀ ಸ್ವೀಕರಿಸಿದರೆ ಸ್ವೀಕರಿಸು
ಸ್ವೀಕರಿಸದಿದ್ದರೆ ಮಾಣು
ನಾ ನಿನಗೆ ಒಡ್ಡಿಕೊಂಡಲ್ಲದೇ ಸೈರಿಸಲಾರೆ

ನನ್ನ ಹುಡುಗ

ಎಂಥ ಚೆಲುವ ನನ್ನ ಹುಡುಗ
ಹೇಗೆ ಅದನು ಹೇಳಲಿ.
ಹೇಳಲಾರೆ ನಾನು ಹಾಗೆ
ಅದೂ ಸುಮ್ಮ ಸುಮ್ಮನೆ.
ಕೊಟ್ಟುದೇನು ಅವನು ನನಗೆ
ಮೈಯಿ ಮನವೆ ಒಲವೆ ಚೆಲುವೆ
ದೊರೆತೊಡನೇ ಹೃದಯ ಹಿಗ್ಗಿ
ಹರಿಯುವಂಥ ಬಲವೇ
ಮಂಕು ಬಡಿದ ಮಸಿ ಹಿಡಿದ
ಪಾತ್ರೆ ನಾನು. ಉಜ್ಜಿ
ತಿಕ್ಕಿ ತೊಳೆದು ಹೊಳೆಸಿ ಬೆಳ
ಗಿದ ಅವನು.
ಬೆಳಕಾದೆ ಹೊಳೆಯಾದೆ.
ಹರಿದೆ ನಾನು.

ಈ ಮರ

ಈ ಮರಕ್ಕೆ ಚಿಗುರುವಾಸೆ.
ಮುಗಿದಿದೆ ಎಲ್ಲಾ ಚಿಕಿತ್ಸೆ.
ದೋಹದದ ಬಾಕಿಗಾಗಿ ಕಾಯುತ್ತಿದೆ.
ಒದೆಯಲೊಬ್ಬ ಬರಬೇಕಷ್ಟೇ.
ಬಂದಾನೋ ಬಂದಾನೋ ಸವಾರ
ಯಾವ ಊರಿನ ಸರದಾರ
ಇವನೆದೆ ಒಸರಿತು ದ್ರವವಾಗಿ
ಕರಗಿ ಹರಿದನಿವ ನನಗಾಗಿ
ಹೂ ಮುಡಿಯಿತು ಮರ ನಲಿಯಿತು
ಹಸಿರಾಗಿ ಮರದೆದೆ ಬಾಗಿತು
ಒಲವಿಗಾಗಿ ಯಾವ ಲೋಕದ
ಅಮೃತವೋ ಇದು ಯಾರೆರಚಿದ್ದು
ಈ ಗಂಧರ್ವ ಗಿರಿಯ ನೀರು

ಆಸೆ

ಈ ಭೂಮಿಗೆ ಚಿಗುರೊಡೆಯುವಾಸೆ.
ಭೂಕಂಪ ಕೊರೆದ ಬಿರುಕುಗಳಲ್ಲಿ
ಹಸಿರರಳಿಸುವಾಸೆ.
ಸುನಾಮಿ ಕೊರೆದ ತೀರಗಳಲ್ಲಿ
ಮರವಾಗುವಾಸೆ.
ಮತ್ತೆ ಮತ್ತೆ ಸೆಪ್ಟೆಂಬರುಗಳು ಬಂದರೂ
ವಿಮಾನಗಳೇ ಬಂದು ಡಿಕ್ಕಿ ಹೊಡೆದರೂ

ಗಗನವ ಚುಂಬಿಸುವಾಸೆ.
ಮತ್ತೆ ಮತ್ತೆ ಕಟ್ಟುವಾಸೆ.
ನಿಲ್ಲದ ಬೆಳವಣಿಗೆಗೆ ಎಲ್ಲಿದೆ ಎಲ್ಲೆ
ಇಲ್ಲವೆಂದರೂ ಈ ಚಿಗುರುವ
ಹಸಿರ ನೆರಳಲ್ಲೇ ಕಾಲ ಕಳೆಯಲು
ಕೂಡುತ್ತಾರಲ್ಲ ಅದೇ ಅಚ್ಚರಿ.

ಚುಂಬಕ ಗಾಳಿ

ಉತ್ತರ ಧ್ರುವದಿಂದ ದಕ್ಷಿಣ ಧ್ರುವಕೆ
ಬೀಸುತ್ತಿದ್ದ ಚುಂಬಕ ಗಾಳಿಯೂ ಈಗ
ಬಿರುಸಾಗುತ್ತಿದೆ ಕಸ ಕಡ್ಡಿಯನ್ನೆಲ್ಲಾ
ತೂರುತ್ತಿದೆ. ಅಂದಿನ ಸೂರ್ಯ
ಚಂದ್ರರ ಅವಿನಾಭಾವ ಸಂಬಂಧವೇ ಮಿತಿ
ಮೀರುತ್ತಿದೆ. ಬಯಕೆಯೋ ದಾಂಗುಡಿಯಿಡು
ತ್ತಿದೆ. ಒಂದಾಗುವಾತುರ ತೋರುತ್ತಿದೆ
ಮತ್ತೆ ಬರುತ್ತಿರಲಿ ಗಾಳಿ ಹರಿಯುತ್ತಿರಲಿ
ನದಿ. ಇಲ್ಲದಿದ್ದರೆ ಗಾಳಿ ಬೀಸದಿದ್ದರೆ
ನೀನಲ್ಲೆ ನಾನಿಲ್ಲೇ.

✤ ಡಾ. ಎಸ್. ವಿ. ಪ್ರಭಾವತಿ :
೩೦೧, ೩ನೇ ಮಹಡಿ, ಪಲ್ಲವ ಟೆರೇಸ್,
ಎಡೆಯೂರು ಲೇಕ್ ಎದುರು, ಜಯನಗರ
೭ನೇ ಬ್ಲಾಕ್, ಬೆಂಗಳೂರು - ೫೬೦ ೦೮೨

✤

ಕಂನಾಡಿಗಾ ನಾರಾಯಣ ಅವರ 'ಕಾಂಡ'

ರವಿ ಉಪಾಧ್ಯ

ಕಂನಾಡಿಗಾ ನಾರಾಯಣ ಅವರು ತಮ್ಮ 'ಕಾಂಡ' ಕೃತಿಯ ಶೀರ್ಷಿಕೆಯಡಿಯ ಕಂಸಿನಲ್ಲಿ 'ಸುಂದರ ರಾಮಾಯಣಕ್ಕೊಂದು ಮಧುರ ವ್ಯಾಖ್ಯಾನ' ಎಂದು ತಿಳಿಸಿದ್ದಾರೆ. 'ರಾಮಾಯಣ'ದ ಬಗ್ಗೆ ಅವರ ಕಲ್ಪನೆ ಸುಂದರವೆಂಬುದನ್ನು ಅದು ಸ್ಪಷ್ಟಪಡಿಸುತ್ತದೆ. ಕಂನಾ ಅವರು '....ಕಾಂಡ ಬಿಡುವ ಮುನ್ನ'ವನ್ನು ಪ್ರಾರಂಭಿಸುವುದು ಹೀಗೆ : 'ಕಾಂಡ' ಮಲೆನಾಡ ಮಡಿಲು ಶಿವಮೊಗ್ಗೆಯಲ್ಲಿ ೧೯೮೬ ರ ಜುಲೈ-ನವೆಂಬರ್ ನಡುವಿನ ಅವಧಿಯ ಮಳೆಗಾಲದಲ್ಲಿ ಕುರಿತು ಬರೆದದ್ದು. ಸುಮಾರು ಹತ್ತು ವರ್ಷಗಳ ನಂತರ ಮುದ್ರಣವಾಗುತ್ತಿದೆ. ಆಗ ನನಗೆ ಕೇವಲ ಇಪ್ಪತ್ತು ವರ್ಷ. ಅದೊಂದು ಬೆಚ್ಚಗಿನ ಕಾಮನೆಯ ಹುಚ್ಚು ಮನಸ್ಸಿನ ವಯಸ್ಸು. ಈಗ ನೆನಪಿರದ ಯಾವುದೋ ಒತ್ತಡ, ತೀವ್ರತೆ ಅಥವಾ ಇನ್‌ವಾಲ್ವ್‌ಮೆಂಟಿನಿಂದ ರೂಪುಗೊಂಡಿರುವ 'ಕಾಂಡ', ಅವತ್ತಿನ ನನ್ನ ಮನಃಸ್ಥಿತಿಯನ್ನು ಪ್ರತಿಬಿಂಬಿಸುತ್ತದೆ ಎಂದುಕೊಂಡಿದ್ದೇನೆ. ಆದರೆ ಇದೇನು ಕಾವ್ಯವೋ, ಕಾದಂಬರಿಯೋ, ವಿಮರ್ಶೆಯೋ, ಆತ್ಮಚರಿತ್ರೆಯೋ ಎಂಬ ಗೊಂದಲವೇ ನನಗಿನ್ನೂ ಪರಿಹಾರವಾಗಿಲ್ಲ. ಆದಾಗ್ಯೂ ಈವರೆಗಿನ ನನ್ನ ಎಲ್ಲಾ ಪುಸ್ತಕಗಳಿಗಿಂತ ಅತ್ಯಂತ ಸುಂದರವಾಗಿ ಬಂದಿರುವ 'ಕಾಂಡ' ನನ್ನ ಪ್ರೀತಿಯ, ಮಹತ್ವಾಕಾಂಕ್ಷೆಯ ಕೃತಿಗಳಲ್ಲೊಂದು...'

ಕಂನಾ ಅವರ ನಿವೇದನೆಯಲ್ಲಿ ಪ್ರಾಮಾಣಿಕತೆಯಿದೆ. ಕೃತಿರಚನಾ ಹೊತ್ತಿನ ಅವರ ವಯಸ್ಸು ಕೇವಲ ಇಪ್ಪತ್ತು. ಒಂದು ಕ್ಷಣ ನಂಬಲಾಗದಂತಾದರೂ ಅವರೇ ಹೇಳಿರುವುದರಿಂದ ಅದನ್ನು ಸುಳ್ಳು ಎನ್ನಲಾಗದು. ಬರೆದಿಟ್ಟದನ್ನು ಹತ್ತು ವರ್ಷಗಳ ತರುವಾಯ ಪ್ರಕಟಿಸಿದ್ದರಿಂದ, ಮರುಪರಿಶೀಲನೆಗೆ, ಕೆಲವೊಂದು ಮಾರ್ಪಾಟುಗಳಿಗೆ ಅವಕಾಶ ಸಿಕ್ಕ ಪರಿಣಾಮವಾಗಿ, ಕೃತಿಗೆ

ಒಂದು ಬಗೆಯ ಹವ ತಂದುಕೊಳ್ಳುವಲ್ಲಿ ಅವರು ನಿಗಾ ವಹಿಸಿರಬಹುದಾದ ಸಾಧ್ಯತೆಯನ್ನು ಅಲ್ಲಗಳೆಯಲಾಗುವುದಿಲ್ಲ.

'ಕಾಂಡ' ಕುರಿತು ಕಂನಾ ಅವರಿಗೆ ಇದು ಕಾವ್ಯವೋ, ಕಾದಂಬರಿಯೋ, ವಿಮರ್ಶೆಯೋ, ಆತ್ಮಚರಿತ್ರೆಯೋ ಎಂದು ಮುಂತಾಗಿ ಅನುಮಾನಗಳಿವೆ. ಇದು ಸ್ವಾಭಾವಿಕವೂ ಕೂಡ. ಅವರಿಗೆ ಯಾವುದೇ ರೀತಿಯ ಅನುಮಾನವಿರಲಿ, ನನಗಂತೂ 'ಕಾಂಡ' ಆತ್ಮಚರಿತ್ರೆಯ ವಿಖಂಡ ರೂಪದ ಒಂದು ವಿಸ್ತೃತ ರೂಪ. 'ವಿಖಂಡ' ಎಂಬ ಶಬ್ದವನ್ನು ನಾನಿಲ್ಲಿ ಪ್ರತಿ ಪಾತ್ರಗಳ ಪ್ರತ್ಯೇಕೀಕರಣದ ಹಿನ್ನೆಲೆಯಲ್ಲಿ ಬಳಸುತ್ತಿದ್ದೇನೆ. ಪಾತ್ರ ಪಾತ್ರ ತಮ್ಮಷ್ಟಕ್ಕೆ ತಾವು ಪ್ರತ್ಯೇಕವೆಂದಾದ ಮೇಲೆ ಕೃತಿಗೆ ಅಖಂಡ ವಿನ್ಯಾಸದ ರಾಚನಿಕತೆ ಹೇಗೆ ಲಭ್ಯವಾದೀತು– ಎಂಬ ಪ್ರಶ್ನೆ ಏಳುವುದು ಸಹಜ. ಕಂನಾ ಈ ಅಂಶವನ್ನು ಪ್ರಾಥಮಿಕ ಹಂತದಲ್ಲೇ ಲಕ್ಷ್ಯಕ್ಕೆ ತೆಗೆದುಕೊಂಡು, ಕಥೆಯ ನಡಿಗೆಗೆ ಎಲ್ಲೂ ಭಂಗ ಬರದಂತೆ ನೋಡಿಕೊಂಡಿದ್ದಾರಲ್ಲದೆ, ಯಾವ ಪಾತ್ರದ ನಂತರ ಯಾವ ಪಾತ್ರಕ್ಕೆ ಅನುವಾಗಬೇಕೆಂಬುದನ್ನೂ ಮರೆತಿಲ್ಲ. ಪಾತ್ರ ಪಾತ್ರಗಳ ನಡುವೆ ಅತ್ಯಂತ ಸೂಕ್ಷ್ಮ ಬೆಸುಗೆಯ ಕೊಂಡಿ ಬರುತ್ತ ಹೋಗಿ ಕೊನೆಯ ವರೆಗೂ ಕುತೂಹಲ ಉಳಿದುಕೊಂಡಿದೆ. ಆಭಾಸಕ್ಕೆ ಎಡೆಯಿಲ್ಲ.

ಪಾತ್ರಗಳ ಆತ್ಮನಿವೇದನಾತ್ಮಕ ಸನ್ನಿವೇಶಗಳು ಇಲ್ಲಿ ಬರುವುದನ್ನು ನೋಡಿದರೆ, ರಂಗಮಂದಿರವೊಂದರಲ್ಲಿ ನಾವು ಆಯಾ ಪಾತ್ರಗಳ ಬರು-ಹೋಗುವಿಕೆಯ ಸರದಿಯನ್ನು ಕಂಡಂತಾಗುತ್ತದೆ. ಹೀಗೆಂದು, ಇಲ್ಲಿಯ ಪಾತ್ರಗಳನ್ನು 'Fashion parade'ಕ್ಕೆ ಅನ್ವಯಿಸಲಾಗದು. ಕಾರಣ, ಇಲ್ಲಿಯವು ಬದುಕಿನ ಪಾತ್ರಗಳು. ವರ್ಣ-ವಿವರ್ಣ ಪಾತ್ರಗಳು. ಆರ್ಯ-ದ್ರಾವಿಡ ಪಾತ್ರಗಳೆಂದರೆ ಮತ್ತಷ್ಟೂ ಸೂಕ್ತ.

ಪಾತ್ರ ನಿರೂಪಣೆ ಎಂಬುದಾಗಲೀ, ಪಾತ್ರ ಪರಿಪೋಷಣೆ ಎಂಬುದಾಗಲೀ ಇಲ್ಲದಿರುವುದೇ ಇಲ್ಲಿಯ ವೈಶಿಷ್ಟ್ಯ. ಒಂದು ದೃಷ್ಟಿಯಲ್ಲಿ ಇಲ್ಲಿಯ ಪಾತ್ರಗಳು ಲೇಖಕನ ಹಂಗಿನಲ್ಲಿರಲು ಇಷ್ಟಪಡುವುದಿಲ್ಲ. ತಮ್ಮ ತಮ್ಮ ಆತ್ಮಸಾಕ್ಷಿಯ ಒರೆಗಲ್ಲಿಗೆ ಒಡ್ಡಿಕೊಳ್ಳುತ್ತ ನಿರಾತಂಕದ ಉಸಿರಾಟದಲ್ಲಿ ಸ್ವಾಭಿಮಾನವನ್ನು ಮೆರೆಯುತ್ತವೆ. ಹೀಗೆಂದಾಕ್ಷಣ, ತಮ್ಮ ಈ ತೆರನಾದ ಸ್ವಚ್ಛಂದ ಮುಕ್ತತೆಗೆ, ಅಸ್ತಿತ್ವದ ಪತಾಕೆಯನ್ನು ಬಾನೆತ್ತರ ಹಾರಿಸಲೆಂಬ ಸದ್ಭಾವ ತಳೆದಾತನನ್ನು ಅವು ಹೇಗೆ ಮರೆತಾವು? ಅವಕ್ಕೆ ಚೆನ್ನಾಗಿ ಗೊತ್ತು ನಿರೂಪಕ ಅವ್ಯಕ್ತನೆಂಬುದು, ಕಾಣದ ಕೈ ಅವುಗಳ ಹಿಂದೆ ಇದೆಯೆಂಬುದು. ತಮಗರಿವಿಲ್ಲದೆಯೇ ಅವು ಅವನಿಗೆ ಋಣಿ.

ಪಾತ್ರ ಪಾತ್ರಗಳ ಸ್ವಯಂಪ್ರದರ್ಶನ ಮತ್ತು ಸ್ವಯಂನಿರ್ಗಮನದ ದೃಷ್ಟಿಯಿಂದ ಇದನ್ನು ನಾಟಕವೆನ್ನಲೂಬಹುದು. ಪರಸ್ಪರ ಎದುರುಬದುರಿನ ಸಂಭಾಷಣಾ ಸಂಧಿಲಭ್ಯದ ಅವಕಾಶ ದೊರಕದೆ ಹೋದರೂ, ಜಿಜ್ಞಾಸಾ ಮಟ್ಟದ ಅರಿವನ್ನು ಪಡೆದುಕೊಂಡಿದ್ದರಿಂದ ಸ್ವವಿಮರ್ಶೆ ಪಾತಳಿಯಲ್ಲೂ ಇಲ್ಲಿಯ ಪಾತ್ರಗಳು ಕ್ರಿಯಾಸಂಪನ್ನವಾಗಿವೆ. ತೋಳ್ಬಲದ ಸಾಮರ್ಥ್ಯವೇ ಪ್ರಧಾನ ಅಂಶವಾಗಿದ್ದರೂ ಬುದ್ಧಿಬಲವನ್ನು ಚಿಂತನ-ಮಂಥನದ ಜರಡಿಗೆ ತರುವುದರ ಮೂಲಕ ದಾನವ ಪಾತ್ರಗಳಿಗೂ ಇಲ್ಲಿ ಮಹತ್ವ ಬಂದಿದೆ. ಈ ನಿಟ್ಟಿನಿಂದ 'ಕಾಂಡ'ವನ್ನು ಒಂದು ಮನೋವೈಜ್ಞಾನಿಕ ವಿಮರ್ಶಾ ಕೃತಿಯೆಂತಲೂ ಪರಿಭಾವಿಸಬಹುದು. ಇಲ್ಲಿಯ ಪಾತ್ರಗಳ

ಸ್ವಯಂ ಸನ್ನಿವೇಶಗಳನ್ನಾಗಲೀ, ಘಟನಾವಳಿಗಳನ್ನಾಗಲೀ ನೆನಪಿನ ಆಧಾರದಲ್ಲಿ ಕಣ್ಮುಂದೆ ತಂದುಕೊಂಡು, ತಮ್ಮ ತಮ್ಮ ಪಾಲಿನ ಸಿಹಿ-ಕಹಿ ಕ್ರಿಯಾಜಾಣ್ಮೆಯನ್ನು ತೋರ್ಪಡಿಸುತ್ತವೆ. ತಪ್ಪು-ಒಪ್ಪುಗಳ ಮಗ್ಗುಲಿನಿಂದ, ನೊಂದು-ಬೆಂದ ಸಂಘರ್ಷದಿಂದ, ಮಾನವೀಯ ನಿಲುವಿನಿಂದ– ಹೀಗೆ ಹಲವು ಬಗೆಯ ಆಯಾಮಗಳನ್ನು ಕೂಡಿಕೊಂಡು ತಮ್ಮ ತಮ್ಮ ವ್ಯಕ್ತಿತ್ವ ವಿಕಸನದ ಚರಮಗೀತೆಯನ್ನು ಸಾದರಪಡಿಸುತ್ತವೆ. ಮೂಲ ವಾಲ್ಮೀಕಿ 'ರಾಮಾಯಣ'ಕ್ಕೆ ತಮ್ಮದೇ ಆದ ಓಜಸ್ಸಿನ ಗುಣಲಬ್ಧಿಯನ್ನು ಕೊಡುಗೆಯಾಗಿ ಕೊಡುತ್ತವೆ. ಇಂಥ ಅಂಶಗಳನ್ನು ಗಣನೆಗೆ ತೆಗೆದುಕೊಂಡದ್ದಾದರೆ 'ಕಾಂಡ' ಕಾದಂಬರಿಯೂ ಹೌದು, ಕಾವ್ಯವಂತೂ ಸರಿಯೇ. ಮುಖ್ಯವಾಗಿ ಕಾವ್ಯವೇ ಹೌದು. ಕಾವ್ಯದ ಮೂಲೋದ್ದೇಶ ಪಾತ್ರಗಳ ಮಹೋನ್ನತೀಕರಣ, ದಾನವ ದೇವನಾಗುವ ಅಲಭ್ಯ ಲಭ್ಯ ಪದೋನ್ನತೀಕರಣ.

ಕಂನಾ ಅವರ ಮನದಲ್ಲಿ 'ಕಾಂಡ' ಕಾವ್ಯ, ಕಾದಂಬರಿ, ವಿಮರ್ಶೆ, ಆತ್ಮಚರಿತ್ರೆ ಎಂಬ ಗೊಂದಲ ಉದ್ಭವಿಸಿದ್ದು ಅಸಹಜವೇನಲ್ಲ. ಅವರು ಅನುಮಾನದಲ್ಲೇ ಅಂದುಕೊಂಡಂತೆ 'ಕಾಂಡ' ಎಲ್ಲ ಹೌದು. ಈ ಅಂಶ ಅವರಿಗೆ ಗೊತ್ತೂ ಇಲ್ಲದಿಲ್ಲ. ಸ್ಥೂಲ ರೂಪದಲ್ಲಿ ಇದು ಆತ್ಮಚರಿತ್ರೆಯೇ.

'.....ಕಾಂಡ ಬಿಡುವ ಮುನ್ನ'ದ ಕೊನೆಯ ಪ್ಯಾರಾದಲ್ಲಿ "'ಕಾಂಡ' ವೈಚಾರಿಕ, ವೈಜ್ಞಾನಿಕ ಹಿನ್ನೆಲೆಯಲ್ಲಿ ವಾಸ್ತವಕ್ಕೆ ಸನಿಹವಾದ ವಿವೇಚನೆ ನೀಡಲು ಸ್ವಲ್ಪಮಟ್ಟಿಗೆ ಪ್ರಯತ್ನಿಸಿದೆ. ಪ್ರತಿಯೊಂದು ವಿಷಯದ ಬಗ್ಗೆಯೂ, ವಿಶದವಾದ ಅಧ್ಯಯನ, ಸಂಶೋಧನೆಯಾಗಬೇಕಾದ ಅನಿವಾರ್ಯತೆಯಿದ್ದು ನಮಗಿರುವ ಸೀಮಿತ ಪರಿಮಿತಿಯೊಳಗೆ ಕಷ್ಟಸಾಧ್ಯವಾಗಿದೆ. ಆದ್ದರಿಂದ 'ಇದಮಿತ್ಥಂ' ಎನ್ನಲಾಗುವುದಿಲ್ಲ. ಬೆಳೆಯುತ್ತಿರುವ ವೈಜ್ಞಾನಿಕ ಯುಗದಲ್ಲಿ ಯಾವುದೇ ವಿಭಿನ್ನ ಚಿಂತನೆಗೆ ಯಾವಾಗಲೂ ಸ್ವಾಗತ ಅತ್ಯಗತ್ಯ. ಈ ನಿಟ್ಟಿನಲ್ಲಿ 'ಕಾಂಡ' ಪ್ರಯೋಗ ಮಾತ್ರ. ಕೆಲವರದಾದರೂ ಜಡಮನಸ್ಸನ್ನು ಕಲಕಿ ಯೋಚನೆಗೆ ಹಚ್ಚುವಲ್ಲಿ ಯಶಸ್ವಿಯಾದರೆ ಈ ಪರಿಶ್ರಮ ಸಾರ್ಥಕವಾದೀತು" ಎಂದು ಹೇಳುವ ಕಂನಾ ತಮ್ಮ ಉದ್ದೇಶಿತ ಪರಿಶ್ರಮದಲ್ಲಿ ಬಹುಮಟ್ಟಿಗೆ ಯಶಸ್ವಿಯಾಗಿದ್ದಾರೆ.

ಪಾತ್ರಗಳ ಕುರಿತಾಗಿಯೇ ಹೇಳಬೇಕಾದ್ದು ಇನ್ನೊಂದಿಷ್ಟು ಇದೆ : ಇಲ್ಲಿಯ ಪಾತ್ರಗಳು ತಮ್ಮಷ್ಟಕ್ಕೆ ತಾವೇ ಸ್ವಗತಪ್ರಿಯವಾಗಿ ತಮ್ಮ ಒಲವು-ನಿಲುವುಗಳ ಅಂತರಂಗವನ್ನು ಅದೆಷ್ಟೇ ಚೆನ್ನಾಗಿ, ಸಮಂಜಸವಾಗಿ ತೆರೆದಿಟ್ಟಿದ್ದರೂ, ಅವುಗಳ ಆಂತರಿಕ ತಾಕಲಾಟವನ್ನು ಸೈದ್ಧಾಂತಿಕ ನೆಲೆಗಟ್ಟಿನ ಮೂಸೆಯಿಂದ ಹೊರಹಾಕುವುದು, ಭಾಷೆಯ ಮುಖಾಂತರ ಅವನ್ನು ಸಮರ್ಥವಾಗಿ ಅಭಿವ್ಯಕ್ತಿಸುವುದು ತಿಳಿದುಕೊಂಡಷ್ಟು ಸುಲಭ ಸಾಧ್ಯದ ಮಾತಲ್ಲ. ಆದರೆ ಕಂನಾ ಅವನ್ನು ಅತ್ಯಂತ ಸೊಗಸಾಗಿ ಓದುವ ಬಹುತೇಕರಿಕೆ ಮೆಚ್ಚಿಗೆಯಾಗುವಂತೆ ನಿಭಾಯಿಸಿದ್ದಾರೆ. ಕಂನಾ ಅವರ ಈ ದಿಶೆಯ ಭಾಷಾ ಹಿಡಿತ ಉಲ್ಲೇಖನೀಯ. ಆಯಾ ಪಾತ್ರಗಳ ಸೋಲು-ಗೆಲುವುಗಳ ನೋವುಂಡ ಹಿನ್ನೆಲೆ, ಹರ್ಷಗೊಂಡ ಹಿನ್ನೆಲೆಯ ಪಕ್ಕಾ ಅರಿವಿನಲ್ಲಿ ಅವವುಗಳ ಪ್ರತಿಕ್ರಿಯೆ ಯನ್ನು, ಸ್ಪಂದಿಸುವ ಕ್ಷಮತೆಯನ್ನು ಓದುಗ ಸಮೂಹ ಗ್ರಹಿಸಬಹುದಾದ ರೀತಿಯಲ್ಲಿ ಇಲ್ಲಿಯ ಭಾಷೆಯನ್ನು ಅರಳಿಸಲಾಗಿದೆ. ಇದನ್ನು 'ಕಾಂಡ'ದ ಹೆಗ್ಗಳಿಕೆ ಎನ್ನಬೇಕು.

೧) 'ಕಾಂಡ'ದ ಪ್ರಾರಂಭದ 'ಬೇರು' ಎಂಬ ವಿಭಾಗದಲ್ಲಿ 'ಶಾಪ'ದ ಬಗ್ಗೆ ಪ್ರಸ್ತಾಪಿಸುತ್ತ 'ಶಾಪ ಸಹ ಈ ರೀತಿಯ ತಪಸ್ಸಿನಿಂದ ಅಥವಾ ಅಧ್ಯಯನದಿಂದ ಗೌರವಾನ್ವಿತ ಸ್ಥಾನ ಗಳಿಸಿದ್ದವರು ತಮ್ಮ ಇಚ್ಛೆಗೆ ವಿರುದ್ಧವಾಗಿ ನಡೆದುಕೊಳ್ಳುತ್ತಿದ್ದವರಿಗೆ ನೀಡುತ್ತಿದ್ದ ಶಿಕ್ಷೆ. ಇದು ನೈತಿಕ ಆಧಾರದ ಮೇಲೆ ರೂಪುಗೊಂಡಿರುವಂಥದು ಹಾಗೂ ದುರ್ಬಲ ಮನಸ್ಸುಗಳಲ್ಲಿ ಭಯ-ಭೀತಿ ಉಂಟುಮಾಡಿ ದೊಡ್ಡ ಸ್ಥಾನ ಸಂಪಾದಿಸಲು ಪ್ರಯತ್ನಿಸುವ ಸ್ವಾರ್ಥದ ವ್ಯಾಪಾರ'ವೆಂಬ ವಿವರಣೆಯನ್ನು ಕಂನಾ ಕೊಡುತ್ತಾರೆ.

೨) ಹನುಮಂತನ ಸಮುದ್ರಲಂಘನ ವಿಷಯಕ್ಕೆ ಬಂದರೆ, ಅವನು ಅಂದು ಆ ಅಸಾಧ್ಯ ಅಂತರವನ್ನು ಯಾಕೆ ಹಾರಿರಬಾರದು, ಅದರಲ್ಲೇನು ಅತಿಶಯೋಕ್ತಿ ಎಂಬ ನಿಲುವಿಗೆ ಬರುವ ಕಂನಾ ಅವರು ಸಮುದ್ರ ಕೊರೆತದ ಕಾರಣವೊಡ್ಡುತ್ತ, 'ಭಾರತ ಲಂಕೆಯ ನಡುವಿನ ಅಂತರ ಅಧಿಯಾಗಲು ಇನ್ನೊಂದು ವೈಜ್ಞಾನಿಕ ಕಾರಣವೂ ಇದೆ. ಪ್ರತಿ ಸಾವಿರ ವರ್ಷಗಳಲ್ಲಿ ಸಮುದ್ರ ಮಟ್ಟವು ಸುಮಾರು ೪ ಮೀಟರುಗಳಷ್ಟು ಕಡಿಮೆಯಾಯಿತು ಎಂದರ್ಥ. ಪರಿಣಾಮವಾಗಿ ಎರಡು ಭೂಖಂಡಗಳ ನಡುವಿನ ಭೂಭಾಗ ಮುಳುಗುತ್ತಾ ಬಂದು ಅವುಗಳ ಅಂತರ ವಿಶಾಲವಾಗುತ್ತ ಹೋಗುತ್ತದೆ. ಹೀಗಾಗಿಯೇ ದ್ವಾರಕಾ ಮುಂತಾದ ಐತಿಹಾಸಿಕ ಸ್ಥಳಗಳು ಈಗ ಸಮುದ್ರದ ತಳ ಸೇರಿರುವುದು. (ಇದೇ ಕಾರಣದಿಂದಲೇ ಕೊನೆಗೊಮ್ಮೆ ಜಲಪ್ರಳಯ ವಾಗಿ ಭೂಮಿಯ ಸಂಸ್ಕೃತಿ ಸಂಪೂರ್ಣ ನಾಶವಾಗುತ್ತದೆ ಎಂಬ ಕಲ್ಪನೆ ಮೂಡುವುದು)' ಎಂದು ನೀಡಿದ ವಿವರದಲ್ಲಿ ಸತ್ಯಾಂಶವಿರುವುದು ಕಂಡುಬರದೇ ಇರದು.

ಇಲ್ಲೇ ಕಂನಾ ಅವರ 'ಅವುಗಳು ರಾಮಾಯಣದಲ್ಲಿ ಕವಿ ತಿಳಿಸಿರುವಂತೆ ಅಗಾಧ ದೂರವನ್ನು ಹಾರುತ್ತಿದ್ದವು ಎಂಬುದು ಕಾವ್ಯದ ಉತ್ಪ್ರೇಕ್ಷೆಯ ಪರಮಾವಧಿ' ಎಂಬ ಮಾತಿನಲ್ಲಿ ಲೇಖಕರಿಗೆ ಕಾವ್ಯದ ಮೂಲಬೀಜದ ಅರಿವೂ ಇದೆಯೆಂಬುದು ಗೊತ್ತಾಗುತ್ತದೆ. 'ರಾಮಾಯಣ' ಕಾಲ್ಪನಿಕ ಕಟ್ಟುಕಥೆ ಎಂಬ ಅಂಶವನ್ನು ಲೇಖಕರು ಹೇಳುವ ಉದ್ದೇಶವನ್ನೂ ಹೊಂದಿದ್ದಾರೆ ಎಂಬುದೂ ಮಿಳಿತವಾಗಿದೆ.

ಕಂನಾ ಅವರು ಕೇವಲ 'ರಾಮಾಯಣ'ದ ಅವಧಿಗೆ ಮಾತ್ರವಲ್ಲದೆ ಒಟ್ಟಾರೆ ಭಾರತೀಯ ಸಂಸ್ಕೃತಿಯ ದೃಷ್ಟಿಯಲ್ಲಿ ಪ್ರಮುಖ ಪಾತ್ರ ವಹಿಸುವ ಶಸ್ತ್ರಾಸ್ತ್ರಗಳ ಬಗ್ಗೆಯೂ ಗಮನ ಸೆಳೆಯುತ್ತ, ಅರ್ಧಚಂದ್ರಾಕಾರದ ಬಾಣ, ಆಗ್ನೇಯಾಸ್ತ್ರ, ವಾಯವ್ಯಾಸ್ತ್ರ, ಸರ್ಪಾಸ್ತ್ರ ಮತ್ತು ಗರುಡಾಸ್ತ್ರಗಳ ಕುರಿತಾಗಿಯೂ ಆಗಿನವರು ಅದೆಷ್ಟು ಕುಶಲಮತಿಯಾಗಿದ್ದರೆಂಬುದನ್ನು ವೈಜ್ಞಾನಿಕ ಹಿನ್ನೆಲೆಯಲ್ಲಿ ವೇದ್ಯಪಡಿಸುತ್ತಾರೆ.

ಆಗಿನ ಪುಷ್ಪಕ ವಿಮಾನದತ್ತಲೂ ಉತ್ಸುಕರಾಗುತ್ತ ಕಂನಾ, 'ಆಧುನಿಕ ಯುಗದ ೧೮೮೫ರಲ್ಲಿ ಮೊತ್ತ ಮೊದಲ ಬಾರಿಗೆ ಗುರುತಿಸಲಾಗದಂತಹ ಹಾರುವ ವಸ್ತುಗಳನ್ನು ಟರ್ಕಿಯಲ್ಲಿ ಪತ್ತೆ ಹಚ್ಚಲಾಗಿದ್ದರೂ ಸಹ ಅದಕ್ಕಿಂತಲೂ ಹಿಂದೆ ಇದ್ದವೆಂಬ ಸಾಧ್ಯತೆಗಳನ್ನು ಅಲ್ಲಗಳೆಯುವಂತಿಲ್ಲ' ಎಂದು ಹೇಳುತ್ತಲೇ 'ಈ ಹಾರುವ ತಟ್ಟೆಗಳು ನಮಗಿನ್ನೂ ಗೊತ್ತಿಲ್ಲದ ಯಾವುದೋ ಅನ್ಯಗ್ರಹ ಅಥವಾ ನಕ್ಷತ್ರ ಮಂಡಲದಿಂದ ಬಂದವುಗಳೆಂದು ಹೇಳಬಹುದು. ಪ್ರಾಚೀನ ಕಾಲದಲ್ಲಿಯೇ ಈ ಹಾರುವ ತಟ್ಟೆಗಳು ಭೂಮಿಗೆ ಬಂದಿದ್ದವು ಎಂಬುದಕ್ಕೆ ಸಾಕ್ಷಿ

ಗಳಿವೆ. ಸುಮಾರು ಹನ್ನೆರಡು ಸಾವಿರ ವರ್ಷಗಳಷ್ಟು ಹಿಂದೆಯೇ ಅವು ಭೂಮಿಗೆ ಬಂದಿದ್ದರ ಬಗ್ಗೆ ವಿಜ್ಞಾನಿಗಳು ಅಂಕಿ ಅಂಶಗಳನ್ನು ಒದಗಿಸಿದ್ದಾರೆ. (ರಾಮಾಯಣದ ಕಾಲವು ಅನೇಕ ವಿದ್ವಾಂಸರ ಪ್ರಕಾರ ಬೇರೆ ಬೇರೆಯಾಗಿದ್ದರೂ ಸ್ಥೂಲವಾಗಿ ಕ್ರಿಸ್ತಪೂರ್ವ ೨೮೦೦ ರಿಂದ ಕ್ರಿಸ್ತಪೂರ್ವ ೧೪೦೦ ರ ಅವಧಿಯೊಳಗಡೆ ಘಟಿಸಿರಬಹುದೆಂದು ಭಾವಿಸಿದರೂ ಇದರ ಸಾಧ್ಯತೆಗಳನ್ನು ಅಲ್ಲಗಳೆಯಲಾಗುವುದಿಲ್ಲ.)..... ಇಂಥದೇ ಬೇರೆ ಯಾವುದೋ ಸಂದರ್ಭದಲ್ಲಿ ಹಿಮಾಲಯದ ಹತ್ತಿರ ವಾಸಿಸುತ್ತಿದ್ದ ದೇವ ಜನಾಂಗಕ್ಕೆ ಈ ಹಾರುವ ತಟ್ಟೆಗಳು ಲಭ್ಯವಾಗಿರಬೇಕು. ಅವೇ ಕಾವ್ಯಮಯ ಭಾಷೆಯಲ್ಲಿ 'ಪುಷ್ಪಕ ವಿಮಾನ'ವಾಗಿರಬಹುದು. ಮೂಲತಃ ದೇವ ಜನಾಂಗದವನೇ ಆದ ರಾವಣ, ಅವರ ಮೇಲೆ ಮಾಡಿದ ಅನೇಕ ಯುದ್ಧ ಗಳಲ್ಲಿ ಜಯಗಳಿಸಿದ್ದು ಅವರಿಂದ ಈ ಪುಷ್ಪಕ ವಿಮಾನವನ್ನು ತಂದಿರಬೇಕು' ಎಂಬುದನ್ನು **ಖಚಿತ ಸಂಶೋಧನಾತ್ಮಕ ದೃಷ್ಟಿಯಿಂದ ವಿವರಿಸುತ್ತಾರೆ.**

ಮೇಲಿನ ಅಂಶಗಳಿಗೆ ಪೂರಕವಾಗಿ ಮುಂದುವರಿಯುತ್ತ, '.....ನಾವು ಇಂದು ಇಪ್ಪತ್ತೊಂದನೆಯ ಶತಮಾನಕ್ಕೆ ಕಾಲಿಟ್ಟು ಇಷ್ಟೆಲ್ಲಾ ತಾಂತ್ರಿಕ ವೈಜ್ಞಾನಿಕ ತಿಳುವಳಿಕೆ ಪಡೆದಿದ್ದರೂ ವೈಚಾರಿಕ ಕ್ರಾಂತಿಯಾಗದಿರುವ ಬಗೆಗೆ ವಿಷಾದವೆನಿಸುತ್ತದೆ. ಯಾವುದೇ ಕೃತಿಯ ಹಿಂದೆ ಇರುವ ವಾಸ್ತವಕ್ಕೆ ಸ್ವಲ್ಪವಾದರೂ ಹತ್ತಿರಕ್ಕೆ ನಮ್ಮ ಆಲೋಚನೆಯು ಸಮ್ಮಿಳಿತವಾಗಿ. ಪರಾಪರ ವಿವೇಚನೆಗೆ ಪ್ರಚೋದಿಸುವುದು ಈವತ್ತಿನ ಅನಿವಾರ್ಯ. ಅದು ಕೇವಲ ಅಕ್ಷರಸ್ಥರಿಗೆ ಮಾತ್ರವಲ್ಲ, ಪ್ರತಿಯೊಬ್ಬ ಮಾನವನಲ್ಲಿಯೂ ಇಂತಹ ಜಾಗೃತಿ ಮೂಡಬೇಕು' **ಎಂಬ ವಿಷಾದಯುಕ್ತ ಹಾಗೂ ಜಾಗೃತಿಯ ಅನಿವಾರ್ಯತೆಯ ಮಾತನ್ನಾಡುತ್ತಾರೆ.**

ಕಂನಾ ಅವರ 'ಬೇರು' ಮನನಯೋಗ್ಯವಾಗಿದ್ದು, ಅವರಿಗೆ ಪರಂಪರೆಯ ಬಗ್ಗೆ ಅದೆಷ್ಟು ಪ್ರೀತಿ ಇದೆಯೆಂಬುದನ್ನು ತೋರಿಸುತ್ತದೆ.

'ದೂರದಲ್ಲಿ ಸಣ್ಣ ಚುಕ್ಕೆಯಂತೆ ಪ್ರಾರಂಭವಾಗಿ ನೆತ್ತಿಯ ಮೇಲೆ ಬಂದಾಗ ಸ್ಪಷ್ಟವಾಗಿ ಕಾಣುತ್ತಿದ್ದವು. ಮತ್ತು ಮುಂದೆ ಹಾರಿ, ಸಣ್ಣ ಚುಕ್ಕೆಯಾಗಿ ಮಾಯವಾಗುತ್ತಿದ್ದವು. ಮನುಷ್ಯನು ಬರುವಾಗ ಒಂದು ಚುಕ್ಕೆಯಷ್ಟು ಸಣ್ಣವನು. ಉತ್ತುಂಗಕ್ಕೆ ಬಂದಾಗ ಪ್ರಕಾಶಮಾನದ ತುಂಬುಜೀವನ ಮತ್ತು ದೂರವಾಗುತ್ತಾ, ಪುನಃ ಸಣ್ಣ ಚುಕ್ಕೆ... ಹೀಗೇ ಮನಸ್ಸು ವಿಚಿತ್ರವಾಗಿ ಆಲೋಚಿಸುತ್ತಿತ್ತು, ಆಗ ದೂರವಾಗುತ್ತಾ ಆಗುತ್ತಾ, ಸಣ್ಣ ಚುಕ್ಕೆಯಾಗುವ ಬದಲು ದೊಡ್ಡದಾಗಿಯೇ ಉಳಿಯಲು ಸಾಧ್ಯವೇ ಇಲ್ಲವೇ? ಎಂಬ ಪ್ರಶ್ನೆ ಎದುರಾಯಿತು. ಉತ್ತರವೂ ತಕ್ಷಣವೇ ಹೊಳೆಯಿತು. ಮನುಷ್ಯನ ಆದರ್ಶಗಳೇ ಆತನನ್ನು ಸಣ್ಣವನಾಗಲು ಬಿಡದಂತೆ ಕಾಯುವ ಶಕ್ತಿಗಳು ಎನಿಸಿತು.'– **ಸಾರ್ಥಕ ಬದುಕಿನ ಗುಟ್ಟನ್ನು ಈ ಸಾಲುಗಳಲ್ಲಿ ಕಂನಾ ಅರ್ಥಪೂರ್ಣವಾಗಿ ಬಿಂಬಿಸುತ್ತಾರೆ.**

'ಮನುಷ್ಯ ತನ್ನ ಜೀವನದಲ್ಲಿ ನೂರಾರು ಸುಳ್ಳುಗಳನ್ನು ಹೇಳುತ್ತಾನೆ. ಯಾವುದೇ ಉಪಯೋಗವಿಲ್ಲದೇ ಯಾರೂ ಸುಳ್ಳನ್ನು ಹೇಳಲಾರರಷ್ಟೆ. ಈ ಸುಳ್ಳಿನ ಹಿಂದೆ ಸ್ವಾರ್ಥ ಇರುತ್ತದೆ.....

ಆ ಮಾತುಗಳು ಸಾಯುವಾಗಿನ ಸ್ಥಿತಿಯಲ್ಲಿ ತನಗರಿವಿಲ್ಲದೆಯೇ ಎಷ್ಟೋ ವೇಳೆ ಹೊರಬಂದುಬಿಡುತ್ತವೆ. ತನ್ನ ಜೀವಿತಾವಧಿಯ ಸತ್ಯಾಸತ್ಯಗಳೆಲ್ಲ ಆ ಸಮಯದಲ್ಲಿ ಮೆಲುಕು ಹಾಕಲ್ಪಡುತ್ತಿರುತ್ತವೆ. ಮಾಡಿದ ತಪ್ಪಿಗೆ ನೇರವಾಗಿ ಕ್ಷಮೆ ಯಾಚಿಸಬೇಕಾಗುತ್ತದೆ. ಆಗ ಸ್ವಪ್ರತಿಷ್ಠೆ ಮಾಯವಾಗುತ್ತದೆ.'– ಇಲ್ಲಿ ಸುಳ್ಳಿನ ಬಗೆಗಿನ ಚಿಂತನೆಯನ್ನು ಕಂನಾ ಅವರು ಯಥೋಯೋಗ್ಯವಾಗಿ ಮಾಡಿದ್ದಾರೆ.

'ನನ್ನ ಆಲೋಚನೆ ಬೇರೆಯದಾಗಿತ್ತು. ಕಾಮಧೇನು ತಳಿಯಲ್ಲಿನ ಒಂದೇ ಒಂದು ಬೀಜದ ಹೋರಿ ಸಿಕ್ಕರೆ. ನಮ್ಮ ದನಗಳನ್ನೆಲ್ಲ ಕಾಮಧೇನುವಿನ ಜಾತಿಗೆ ಪರಿವರ್ತಿಸಬಹುದು. ಅದನ್ನು ನಮ್ಮ ದನಗಳಿಗೆ ಅಡ್ಡ ಹಾಯಿಸಿದರೆ ಕ್ರಮೇಣ ಬದಲಾವಣೆ ಸಾಧ್ಯವಾಗಬಹುದೇನೋ ಎಂದೆಣಿಸಿದ್ದೆ.'– ಬುಟ್ಟಿಯಲ್ಲಿರುವ ಹಣ್ಣುಗಳಲ್ಲಿ ಒಂದೇ ಒಂದು ಹಣ್ಣು ಕೊಳೆತರೆ ಸಾಕು, ಅದು ಇತರ ಹಣ್ಣುಗಳನ್ನು ಒಂದೊಂದಾಗಿ ಕೊಳೆಸಿಬಿಡುತ್ತದೆ. ಹಾಗಾಗಿ, ಕಂಡಾಕ್ಷಣವೇ ಆ ಕೊಳೆತ ಹಣ್ಣನ್ನು ಹೊರ ಬೀಸಾಕಿದರೆ ಉಳಿದವುಗಳು ತಿನ್ನಲು ಯೋಗ್ಯ. ಇವನ್ನು ಅರಿಯುವಂತೆ, ನಮ್ಮಲ್ಲಿಯ ದನಗಳನ್ನೆಲ್ಲ ಸುಧಾರಿಸಲು ಅವುಗಳನ್ನೆಲ್ಲ, ಕಾಮಧೇನುವಿನ ಸಹವಾಸದಲ್ಲಿ ಇರುವಂತೆ ಮಾಡುವುದೇ ಸರಿಯಾದ ಕ್ರಮ. ಸತ್ಸಂಗ ಸಹವಾಸ ಬೆಳೆಸಬೇಕೆಂಬುದೇ ಮೇಲಿನ ಉದ್ಧರಣೆಯ ಮರ್ಮ. ಕಂನಾ ಅವರು ಒಳ್ಳೆಯ ಉದಾಹರಣೆಯನ್ನು ಎತ್ತಿಕೊಂಡು ಬದುಕಿನ ಸತ್ಯಾಸತ್ಯತೆಯನ್ನು ಮನವರಿಕೆಯಾಗಿಸಿದ್ದಾರೆ.

'ಒಬ್ಬನನ್ನು 'ನಾಯಕ' ಎಂದು ಆರಿಸಿದ ಮೇಲೆ ಅವನ ದೋಷಗಳನ್ನು ದೌರ್ಬಲ್ಯಗಳನ್ನು ತಿಳಿದಿದ್ದರೂ ಸಹ ಏನೂ ಮಾತನಾಡುವಂತಿಲ್ಲ. ಆತನನ್ನು ಆಯ್ಕೆ ಮಾಡುವಾಗ ನಮಗೆ ಯಾವುದೇ ಭಾವನೆಗಳಿದ್ದರೂ, ನಂತರ ಆತ ಸರ್ವಾಧಿಕಾರಿಯಾಗಿ ಬಿಡುತ್ತಾನೆ. ಅವನ ದುರ್ಬಲ ಅಂಶಗಳನ್ನು ಸರಿಪಡಿಸುವ ಅಥವಾ ಆತನ ತಪ್ಪನ್ನು ತೋರಿಸಿಕೊಡುವ ಹಕ್ಕನ್ನು ನಾವು ಕಳೆದುಕೊಂಡು ಬಿಡುತ್ತೇವೆ.'– ಈ ಮಾತುಗಳಿಂದ ಕಂನಾ ಅವರು ವಾಸ್ತವದ ರಾಜಕೀಯದಲ್ಲಿ ನಡೆಯುವ, ನಡೆಯುತ್ತಿರುವ ಕಠೋರ ಸತ್ಯದ ಸನ್ನಿವೇಶವನ್ನೇ ಎತ್ತಿ ತೋರಿಸಿದ್ದಾರೆ. ಈ ಸಾಲುಗಳಲ್ಲಿ ಜಾಗತೀಕರಣದ ಕಪಿಮುಷ್ಟಿಯ ಹೊಳವು ಇಲ್ಲದಿಲ್ಲ.

'ಆಗ ಅಲ್ಲಿ ಒಂದು ಸೂಕ್ಷ್ಮವನ್ನು ಗಮನಿಸಿದೆ. ಬೇರೆಲ್ಲಾ ರಾಜಕುಮಾರರು ಎತ್ತುವಾಗ ವೇದಿಕೆಯ ಎಡಭಾಗದಲ್ಲಿ (ಅಂದರೆ ಹಿಂದಿನ ರಾತ್ರಿ ಸೂಜಿಗಲ್ಲಿನ ತುಂಡನ್ನು ಊಳಿದ್ದ) ಇದ್ದ ಬಿಲ್ಲು ಈಗ ಬಲಭಾಗದಲ್ಲಿತ್ತು. ಬಹುಶಃ ಯಾರ ಗಮನಕ್ಕೂ ಬಂದಿರಲಾರದು. ಒಂದು ವೇಳೆ ಬಂದಿದ್ದರೂ ಅದನ್ನು ಪ್ರತಿಭಟಿಸುವಷ್ಟು ಅಥವಾ ಇದರ ಹಿಂದಿರುವ ಸೂಜಿಗಲ್ಲಿನ ಬಣ್ಣ ಯಾರಿಗೆ ಗೊತ್ತಾದೀತು. ಆದರೆ ಅದನ್ನು ವೈಮರ್ಶಿಕ ದೃಷ್ಟಿಯಿಂದ ನೋಡುತ್ತಿದ್ದ ನನ್ನ ಕಣ್ಣಿಗೆ ಬೀಳಲು ತಡವಾಗಲಿಲ್ಲ. ಆದರೆ ಇದು ಯಾರ ಕೆಲಸ?'– ಸ್ವಯಂವರ ಸಂದರ್ಭದಲ್ಲಿ ಶಿವಧನುಸ್ಸನ್ನು ರಾಮ ತನ್ನದೇ ಆದ ಬಲದ ಸಾಮರ್ಥ್ಯದಿಂದ ಎತ್ತದೆ, ಸೂಜಿಗಲ್ಲಿನ ಗೌಪ್ಯ ಸ್ಥಾನಪಲ್ಲಟದಿಂದಾಗಿ ಎತ್ತಿದ ಎಂಬ ಸತ್ಯವನ್ನು ಸೀತೆ ಅರಿತು ರಾಮನ ಬಗ್ಗೆ ಭ್ರಮನಿರಸನವಾದದ್ದು ಇಲ್ಲಿ ವ್ಯಕ್ತ. ಮೋಸವಿಲ್ಲದೆ ರಾಜಕೀಯವಿಲ್ಲವೆಂಬುದನ್ನು ಕಂನಾ ಅವರು ಈ ಸನ್ನಿವೇಶದಿಂದ ದೃಢಪಡಿಸುತ್ತಾರೆ.

ದೇವತೆಗಳನ್ನು ಕಂನಾ ಕಾಣುವ ಪರಿಯನ್ನು ಗಮನಿಸಬೇಕು. ಅದಕ್ಕೆ ಉದಾಹರಣೆಯಾಗಿ ಶಿವನ ಬಗ್ಗೆ ನೋಡೋಣ :

'ಅಲ್ಲಿ ಕಾಪುಪ್ರಾಣಿಯ ಭಯವಿದ್ದದ್ದರಿಂದ ಈಶ್ವರನು ಬಿಲ್ಲು ಬಾಣಗಳನ್ನು ಪಕ್ಕದಲ್ಲೇ ಇರಿಸಿಕೊಂಡು ತಪಸ್ಸಿಗೆ ಕುಳಿತಿದ್ದನಂತೆ. ಮನ್ಮಥ ಈಶ್ವರನ ಏಕಾಗ್ರತೆಯನ್ನು ಕೆಡಿಸಲೋಸುಗ ಮರಗಳ ಮರೆಯಲ್ಲಿ ನಿಂತು ಬಾಣ ಪ್ರಯೋಗಿಸಿ ಘಾಸಿಗೊಳಿಸಿದನಂತೆ. ಸಿಟ್ಟಿನಿಂದ ಮೂಢನಾದ ಶಂಕರ ತಾಳ್ಮೆಯನ್ನು ಕಳೆದುಕೊಂಡು ಶಬ್ದವನ್ನೇ ಅನುಸರಿಸಿ ಬಾಣ ಪ್ರಯೋಗಿಸಿದನಂತೆ. ಇಷ್ಟನ್ನು ನಿರೀಕ್ಷಿಸಿರದ ಮನ್ಮಥ ಬಾಣದಿಂದ ಗಾಯಗೊಂಡು ಕಿರುಚಿಕೊಳ್ಳತೊಡಗಿದಾಗ ಅಲ್ಲಿಗೆ ಬಂದ ಈಶ್ವರ ನೋಡುತ್ತಾನೆ. ಆತ ತಮ್ಮ ಜನಾಂಗದ ಮುಖ್ಯನಾದ ವಿಷ್ಣುಶರ್ಮನ ಮಗ. ಈಶ್ವರನ ಸಿಟ್ಟು ಇಳಿಯುವುದರ ಜೊತೆಗೆ ಭಯ ಮೂಡಿತಂತೆ. ಅಷ್ಟರಲ್ಲಿ ಕೊನೆಯುಸಿರೆಳೆದ ಮನ್ಮಥನ ವಿಷಯ ಯಾರಿಗೂ ತಿಳಿಯದಿರಲೆಂದು ಹತ್ತಿರವೇ ಇದ್ದ ಒಣಗಿದ್ದ ಸೌದೆಯನ್ನು ಒಟ್ಟುಹಾಕಿ ಸುಟ್ಟುಹಾಕಿದನಂತೆ.

ವಿಷ್ಣು ಉದ್ದೇಶಪೂರ್ವಕವಾಗಿ ಮಗನನ್ನು ಕಳುಹಿಸಿರುವುದರಿಂದ ಶಂಕರನನ್ನು ವಿಧವಿಧವಾಗಿ ಪರೀಕ್ಷೆಗೀಡು ಮಾಡಿದಾಗ, ತಾನು ಕೊಲೆ ಮಾಡಿದ್ದು ನಿಜವೆಂದು ಒಪ್ಪಿಕೊಂಡನಂತೆ. ಆದರೆ ತಾನು ಅಪರಾಧಿ ಎಂದು ತಿಳಿದಿದ್ದರೂ, ತಾನು ಮಾಡಿದ್ದು ತಪ್ಪು ಎಂದು ಕ್ಷಮೆ ಯಾಚಿಸುವವರು ಕಡಿಮೆ. ತಪ್ಪೊಪ್ಪಿಗೆಯ ಬದಲಾಗಿ ಸಮರ್ಥನೆಗೆ ಏನಾದರೊಂದು ಕಾರಣ ಹೇಳುವುದು ಸಹಜ. ಈಶ್ವರನೂ ತನಗೆ ಏಕಾಗ್ರತೆಯಿಂದ ತಪಸ್ಸು ಮಾಡಿದಾಗ ಹಣೆಯ ಮೇಲೆ ನೀಲಿಯ ಕಣ್ಣು ಕಾಣುವಂಥ ಅತೀಂದ್ರಿಯ ಶಕ್ತಿಯಿದೆಯೆಂದೂ, ಅದರಿಂದಲೇ ಅವನನ್ನು ಸುಟ್ಟುಹಾಕಿದನೆಂದನಂತೆ. ಮನ್ಮಥನ ಬಾಣದ ಸಲುವಾಗಿ ನಡುಹಣೆಯ ಮೇಲೆ ಉಂಟಾಗಿದ್ದ ಗಾಯದ ಕಲೆಯನ್ನು ತೋರಿಸಿ, ಅದರಿಂದುಂಟಾಗುವ ನೋವಿನಿಂದಾಗಿ ಬೆಂಕಿಯ ಉಂಡೆಗಳೇ ಉದುರಿದಂತಾಗುತ್ತವೆಂದು ಹೇಳಿದನಂತೆ. ನೋವಿನ ಸಿಟ್ಟನ್ನು ಬೆಂಕಿಯ ಉಂಡೆಗೂ, ರೆಪ್ಪೆ ಮುಚ್ಚಿದ ಕಣ್ಣಿನಂತೆ ಕಾಣುತ್ತಿದ್ದ ಗಾಯದ ಕಲೆಯನ್ನು ತನ್ನ ಮೂರನೆಯ ಕಣ್ಣೆಂದೂ ವಾದ ಮಾಡತೊಡಗಿದನಂತೆ. ಅದರಿಂದ ಮನ್ಮಥನಂತೆ ಇತರರನ್ನು ಕೊಲ್ಲಬಲ್ಲ ಶಕ್ತಿ ತನ್ನಲ್ಲಿದೆಯೆಂದು ಬಡಾಯಿ ಕೊಚ್ಚಿಕೊಂಡು ಕೊಲೆಯ ಅಪರಾಧದಿಂದ ವಿಮುಕ್ತನಾದನಂತೆ.'

ಇಲ್ಲಿ ದಿಢೀರನೆ ಏಳುವ ಪ್ರಶ್ನೆಯೆಂದರೆ ದೇವಾಧಿದೇವ ಶಿವನಿಗೆ ಹೆದರಿಕೆ ಯಾಕೆ ಎಂಬುದು, ಬಿಲ್ಲು ಬಾಣಗಳ ಆವಶ್ಯಕತೆ ಅವನಿಗ್ಯಾಕೆ ಎಂಬುದು.

ಕಂನಾ ಅವರು ಬಿಲ್ಲು ಬಾಣಗಳನ್ನಷ್ಟೇ ಹೇಳಿದ್ದಾರೆ. ಹಾಗೆ ನೋಡಿದರೆ, ಶಿವನಿಗೆ ತ್ರಿಶೂಲ ಯಾಕೆ? ಅದೂ ಅಲ್ಲದೆ ಕೊರಳಲ್ಲಿ ಹಾವು ಯಾಕೆ? ಹೋಗಲಿ. ಸಿಡುಮಾಮಿಡಿಯ ಚೆನ್ನಮಲ್ಲ ವೀರಭದ್ರ ಸ್ವಾಮೀಜಿಯವರ ಪ್ರಕಾರ ಇವೆಲ್ಲ ಸುಳ್ಳು ಸೃಷ್ಟಿ. ಈ ಹೆಸರಿನಲ್ಲೇ ಅವರು ಅದಾಗಲೇ ಹೊರತಂದಿರುವ ಪುಸ್ತಕವನ್ನು ಕಂನಾ ಅವರು ನೋಡಿರಬಹುದು. ಇದೇ ಸಂದರ್ಭದಲ್ಲಿ ಮಾಂಟೇಯ್ನ್ ಎಂಬಾತನ 'ಮನುಷ್ಯ ಒಬ್ಬ ಹುಚ್ಚ. ಒಂದು ಹುಳುವನ್ನು ಸೃಷ್ಟಿಸಲಾರದವನು ನೂರಾರು ದೇವತೆಗಳನ್ನು ಸೃಷ್ಟಿಸುತ್ತಾನೆ' ಎಂಬ ಸೂಕ್ತಿ ಜ್ಞಾಪಕಕ್ಕೆ ಬರುತ್ತದೆ. ಮಾಂಟೇಯ್ನ್‌ನ ಸೂಕ್ತಿ ಏನೇ ಇರಲಿ, ಮಾನವನಿಂದ ದೇವಸೃಷ್ಟಿ,

ಯಾಕೆ ಆಯಿತು ಎಂಬುವಕ್ಕೆ. ಚಂಚಲತೆಯಿಂದಾಗಿ ಸಂಭವಿಸಬಹುದಾದ ಕೇಡನ್ನು ತಪ್ಪಿಸಲೋಸುಗ, ಹೆದರಿಸುವಂಥ ಶಕ್ತಿರೂಪವೊಂದು ಎದುರಿಗಿದ್ದಲ್ಲಿ ಮನುಷ್ಯ ಮನುಷ್ಯ ನಾಗಿರಲು ಸಾಧ್ಯ ಎಂಬ ಪರಿಕಲ್ಪನೆ ಮಾನವನಲ್ಲಿ ಮೂಡಿದ್ದರಿಂದ. ಇದನ್ನೇ, ಮಾನವ ತನ್ನ ಒಳಿತಿಗಾಗಿ, ನೆಮ್ಮದಿಗಾಗಿ ಆಯಾ ಬಗೆಯ ದೇವತೆಗಳನ್ನು ಸೃಷ್ಟಿಸಿದ್ದು ಎಂದು ಹೇಳಬಹುದು. ಈ ವಿಚಾರಸರಣಿ ಯಾರಿಗೆ ಒಪ್ಪಿಗೆಯಾದೀತು, ಯಾರಿಗೆ ಆಗಲಿಕ್ಕಿಲ್ಲ. ಆ ಮಾತು ಬೇರೆ.

ಕಂನಾ ಅವರ ವಿಷಯಕ್ಕೆ ಬಂದಾಗ, ಮನ್ಮಥನ ಸಾವಿಗೆ ಶಿವನು ಕೊಡುವ ಸಮರ್ಥನೆ ಸಮರ್ಥನೀಯವಾದದ್ದಲ್ಲ. ಬರೀ ವಾದಯುಕ್ತವಾದದ್ದು, ಬಡಾಯಿ ಕೊಚ್ಚಿಕೊಳ್ಳುವಂಥದ್ದು. ತನ್ನ ಸ್ಥಾನಚ್ಯುತಿಯ ಪ್ರಶ್ನೆ ಅವನಿಗಿಲ್ಲದ್ದರಿಂದ ಅವನೊಬ್ಬ ಹುಲುಮಾನವನೇ ಸರಿ.

ಕಂನಾ ಅವರು 'ಕಾಂಡ'ದ 'ಬೇರು' ಎಂಬಲ್ಲಿ ಒಂದೆಡೆ 'ಒಂದು ದೃಷ್ಟಿಕೋನದಿಂದ ಪರಾಮರ್ಶಿಸಿದರೆ ಇಡೀ ರಾಮಾಯಣದ ಕಥೆ ಸೀತೆ ಕಂಡ ಕೋನದಲ್ಲಿಯೇ ಇದೆ ಅನ್ನಿಸುತ್ತದೆ' ಎಂಬ ಮಾತೊಂದನ್ನು ಹೇಳಿದ್ದಿವೆ. ಅಲ್ಲದೆ ಇದಕ್ಕೂ ಮೊದಲು... 'ಹಾಗಾಗಿ ಪರಿತ್ಯಕ್ತಳಾದ ಸೀತೆ ಲಕ್ಷ್ಮಣನಲ್ಲೂ ಕಾರಣಾಂತರಗಳಿಂದ ಅನುರಕ್ತಿಯನ್ನು ಕಾಣದಾಗಿ...' ಎಂಬಂಥ ವಾಕ್ಯವೂ ಬಂದದ್ದಿದೆ.

ಈ ಮಾತುಗಳನ್ನನುಸರಿಸಿ ಪೋಲಂಕಿ ರಾಮಮೂರ್ತಿಯವರ 'ಸೀತಾಯಣ'ದ ಒಳಗಡೆಯೂ ಪ್ರವೇಶಿಸುವುದು ಸೂಕ್ತವೆನಿಸುತ್ತದೆ :

..."ರಾಮಾಯಣದ ಈ ರಾಮ–ಸಂದರ್ಭಗಳನ್ನು ಪರಿಶೀಲಿಸುವ ನಮಗೆ. ರಾಮನು ಸೀತೆಗೆ ಕಾಡಿಗೆ ಬರಬೇಡವೆಂದಾಗ ಸೀತೆ ರಾಮನನ್ನು ಕುರಿತು ಆಡಿದ "ಪುರುಷರೂಪದ ಸ್ತ್ರೀ" (ಸ್ತ್ರೀಯಂ ಪುರುಷವಿಗ್ರಹಂ) ಎಂಬ ಕೇಕುನುಡಿ ಕೇವಲ ಮರ್ಮಭೇದಕವಾದದ್ದಷ್ಟೇ ಅಲ್ಲ, ಭೀಕರವಾದ ಭವಿಷ್ಯವಾಣಿಯೂ ಹೌದು. ಸತಿಯಾದ ಸೀತೆ ಗಂಡನ ಭೋಗದಿಂದ ಉದ್ದಕ್ಕೂ ವಂಚಿತಳೇ. ಅವಳ ಪಾಲಿಗೆ ರಾಮ "ಧರ್ಮ"; ರಾಮನನ್ನು ಕುರಿತ ಅವಳ ಸಂಬೋಧನೆಗಳೆಲ್ಲ "ಧರ್ಮ" ಶಬ್ದದ ಸಂಯೋಜನೆಗಳೇ. ಆದರೆ ಲಕ್ಷ್ಮಣ "ಮಹಾಬಾಹು". "ಮಹಾಬಾಹು ಆಗಿಯೇ ಲಕ್ಷ್ಮಣ ಅವಳನ್ನು ಕಾಯುತ್ತಾನೆ. "ಪುರುಷನಾಗುತ್ತಾನೆ"; "ಧರ್ಮಿ" ಯಾದ ರಾಮನೂ ಲಕ್ಷ್ಮಣನ ಪೌರುಷವನ್ನು ಕಂಡುಕೊಂಡೇ ಅವನನ್ನು "ಮಹಾಬಾಹು" ಎಂದೂ ಸಂಬೋಧಿಸುತ್ತಾನೆ. ವಿವಾಹದಿಂದ ಸೀತೆಗೆ ಗಂಡನಾದರೂ ಬಾಳಿನ ನಿಜದಲ್ಲಿ ಲಕ್ಷ್ಮಣ ಅವಳಿಗೆ "ಪುರುಷ"ಸದೃಶ. ಈ ಸತ್ಯವನ್ನು ಒತ್ತಿಹೇಳುವಂತೆ ವಿರಾಧ "ನಿಮ್ಮಿಬ್ಬರಿಗೆ ಅವಳು ಹೆಂಡತಿ", ಅವಳು "ದ್ವಿಪತಿಗಳಿಗೆ ರಾಣಿ" ಎನ್ನುತ್ತಾನೆ. ಆ ರಾಮಾಯಣದ ಓದುಗನಿಗೆ ಈ ಸಾದೃಶ್ಯತೆ ಗುಪ್ತವಾಗಿಯಾದರೂ ಅನಿಸಿರಲು ಸಾಕು."

ಪೋಲಂಕಿಯವರ 'ಸೀತಾಯಣ'ದ ಪ್ರವೇಶದ ಮೂಲಕ ಇಲ್ಲಿ ನಾನು ಸ್ಪಷ್ಟಪಡಿಸುವುದು ಇಷ್ಟೇ : ವಾಲ್ಮೀಕಿ ರಾಮಾಯಣ ಪುರುಷ ಸಂಸ್ಕೃತಿಯನ್ನು ಎತ್ತಿಹಿಡಿದರೆ, ಪೋಲಂಕಿಯವರ ಸೀತಾಯಣ ಸ್ತ್ರೀಪರ ಸಂಸ್ಕೃತಿಯನ್ನು ಸ್ಥೂಲವಾಗಿ ಬೆಂಬಲಿಸುತ್ತದೆ. (ಈ ಸಂದರ್ಭದಲ್ಲಿ ಸ್ನೇಹಲತಾ ರೆಡ್ಡಿಯವರು ಬರೆದ 'ಸೀತಾ' ನಾಟಕ ನೆನಪಿಗೆ ಬಾರದಿರದು.)

ಕಂನಾ ಅವರ ಅಭಿಪ್ರಾಯವಂತೂ ಸೀತಾ ಪರವಾಗಿಯೇ ಇದೆ ಎಂಬುದನ್ನು ಮತ್ತೊಮ್ಮೆ ಹೇಳುವ ಆವಶ್ಯಕತೆ ಇಲ್ಲ. ಸೀತೆಯ ಮನದಲ್ಲಿಯ ಧರ್ಮ-ಅಧರ್ಮಗಳ ತಾಕಲಾಟವನ್ನು ಯಾವ ತೆರನಾಗಿ ಅಭಿವ್ಯಕ್ತಿಸಬೇಕೆಂಬುದರ ಸ್ಪಷ್ಟ ಅರಿವಿನ ಕಂನಾ ಅವರು ಅದನ್ನು– 'ಧರ್ಮಕ್ಕೆ ಜಯ ದೊರೆಯುತ್ತದೆಂದು ನಂಬಿದ್ದಾರೆ ಜನ. ಆದರೆ ನನಗನ್ನಿಸುತ್ತದೆ. ಜಯಗಳಿಸಿದವರದೆ ಧರ್ಮ. ಪ್ರಸ್ತುತ ಶೂರ್ಪನಖಿಯನ್ನು– ನನ್ನಂತೆಯೇ ಒಂದು ಹೆಣ್ಣು ಎಂದು ಭಾವಿಸಿದಾಗ –ನಮ್ಮವರು ಕಿವಿ ಮೂಗು ಕತ್ತರಿಸಿ ವಿರೂಪಗೊಳಿಸಿದ್ದು ಧರ್ಮವೇ? ಅಥವಾ ಅದನ್ನು ಕೇಳಲು ಬಂದ ಖರನನ್ನು ಕೊಂದದ್ದು ಧರ್ಮವೇ? ಅವರನ್ನು ತಿದ್ದುತ್ತೇನೆಂದು ಪಣತೊಟ್ಟ ರಾವಣನದು ಅಧರ್ಮವೇ? ಅದರ ಸಫಲತೆಯ ಕನಸನ್ನು ಹೊತ್ತು ನನ್ನನ್ನು ಕರೆತಂದದ್ದು ತಪ್ಪೆ? ಸತ್ಯವು ಕೇವಲ ನನ್ನ ಆತ್ಮಸಾಕ್ಷಿಗೆ ಮಾತ್ರಾ ಗೊತ್ತಿರುತ್ತದೆ ಅಂತೆಯೇ ರಾಮನಿಗೂ ಅಷ್ಟೇ...' **ಹೀಗೆ ಹರಿಬಿಟ್ಟಿದ್ದಾರೆ.**

ನೀತಿ-ಅನೀತಿಯೆಂಬ ಹೊಯ್ದಾಟದಲ್ಲಿದ್ದ ಲಕ್ಷ್ಮಣನ ಮನಃಸ್ಥಿತಿಯನ್ನು ಕಂನಾ ಅವರು– 'ಆದದ್ದು ಆಗಿ ಹೋಯಿತು. ತಂದೆ ದಶರಥ ಎದೆಯೊಡೆದು ಸತ್ತ. ಭರತ ರಾಜನೂ ಆದ. ಕೈಕೇಯಿ ನಿಷ್ಠುರಿಯೂ ಆದಳು. ರಾಮ ತನ್ನ ನಾಮಮಾತ್ರ ಹೆಂಡತಿಯೊಂದಿಗೆ ಮತ್ತು ಬೆನ್ನೆರಳ ಹಾಗೆ ತಿರುಗುವ ತಮ್ಮನೊಡನೆ ವನವಾಸವನ್ನೂ, ಅದರ ಅನುಭವವನ್ನೂ ಗಳಿಸಿದ. .....ನನಗೆ ಒಂದು ಅನುಮಾನ ಬರುತ್ತಿದೆ. ನಮ್ಮ ಪ್ರೇಮ ಪರಸ್ಪರರು ಮೆಚ್ಚಿಕೊಂಡ ಪ್ರೀತಿಯಲ್ಲವೇನೋ. ಅದು ಕೇವಲ ಏಕಮುಖದ್ದೇ ಇರಬೇಕು. ನಾನು ಅವಳನ್ನು ಪ್ರೀತಿಸಿದ್ದುದು ನನಗೆ ಮಾತ್ರಾ ಗೊತ್ತು. ಆದರೆ ಆಕೆಗೆ ಗೊತ್ತೆ? ಅವಳೂ ನನ್ನನ್ನು ಪ್ರೀತಿಸಿದ್ದಿರಬಹುದೇ? ಇದ್ದರೆ ಅದು ಮೈದುನನ ಮೇಲೆ ಅತ್ತಿಗೆಯಾದವಳಿಗೆ ಇರಬೇಕಾದ ನಿಷ್ಕಾಮ ಪ್ರೇಮವೇ? ಅದು ಅವಳಿಗೆ ಮಾತ್ರಾ ಗೊತ್ತು. ನನ್ನ ಈ ಭಾವನೆ ಕೇವಲ ಕಲ್ಪನೆಯೇ ಇದ್ದರೂ ಇದ್ದೀತು..... ಅದು ಕಾಮವೇ ಇರಲಿ, ನಿಷ್ಕಾಮ ಪ್ರೇಮವೇ ಆಗಲಿ ಸಹೋದರತ್ವ ಭಾವನೆಯ ಅಥವಾ ಮಾತೃಭಾವನೆಯ ಪ್ರೇಮವೇ ಇರಲಿ. ಒಟ್ಟಿನಲ್ಲಿ ಸೀತೆ ಎದುರಿಗಿರದಿದ್ದರೆ ನನಗೆ ಸಮಾಧಾನವಿಲ್ಲ'... **ಹೀಗೆ ತೆರೆದಿಡುತ್ತಾರೆ.**

ಸೀತೆ ಬದಿಯಲ್ಲೇ ಇದ್ದರೂ ನಿರ್ಲಿಪ್ತ, ಅಲಿಪ್ತನಾಗಿದ್ದ ರಾಮ, ಈಗ ಆಕೆಯ ನೆನಪು ತೀವ್ರ ಕಾಡಿದ್ದರಿಂದ ತನ್ನ ಯೋಚನಾಲಹರಿಯನ್ನು ಅದಾವ ರೀತಿಯಲ್ಲಿ ತೋಡಿಕೊಳ್ಳುತ್ತಾನೆಂಬುದನ್ನು ಕಂನಾ ಅವರು– 'ನನ್ನ ನೆನಪು ಅನಿವಾರ್ಯವಾಗಿ ಸೀತೆಯತ್ತ ಹರಿಯಿತು. ನನ್ನದು ವಿಚಿತ್ರ ಸ್ವಭಾವ ಎನ್ನಿಸುವುದು ಆಕೆಯ ವಿಷಯದಲ್ಲಿ ಮಾತ್ರ ಇರಬೇಕು. ಸ್ವಯಂವರದಲ್ಲಿ ಗೆದ್ದಂದಿನಿಂದ ಇಂದಿನ ವರೆಗಿನ ಸುಮಾರು ಹದಿನೈದು ವರ್ಷಗಳ ಅಂತರದಲ್ಲಿ ಒಮ್ಮೆಯಾದರೂ ಅವಳನ್ನು ಸಂಧಿಸಿದ್ದೇನೆಯೇ? ಎಂಬ ಪ್ರಶ್ನೆ ಮೂಡಿತು. ಅಂದು, ಅಂದರೆ ಮದುವೆಯಾದ ಹೊಸತರಲ್ಲಿ ನಾನಿನ್ನೂ ಬಾಲಕನಾಗಿದ್ದುದರಿಂದ ಮತ್ತು ವಿಶ್ವಾಮಿತ್ರನ ಮಹರ್ಷಿತ್ವದ ಆಕರ್ಷಣೆಯಿಂದ ಆ ಆಸೆಯನ್ನು ಹತ್ತಿಕ್ಕಿದ್ದೆ. ಕಾಡಿನಲ್ಲಿ ಒಟ್ಟಿಗೇ ಇದ್ದ ಕೆಲ ವರ್ಷಗಳಲ್ಲಿ ಹೆಣ್ಣಿನ ಸಂಗದಿಂದ ತಪಸ್ಸು ಮಾಡಲು ಏಕಾಗ್ರತೆ ಮಾಯವಾಗಿ ಚಂಚಲತೆ ಬರುತ್ತದೆಯೆಂದು ಅನುಭವಸ್ಥರಿಂದ ಕೇಳಿದ್ದರಿಂದ ಆಗಲೂ ಅವಳಿಂದ

ದೂರವಾಗಿಯೇ ಇರಲು ಪ್ರಯತ್ನಿಸಿದ್ದೆ. ನಂತರ ರಾವಣನು ಆಕೆಯನ್ನು ಕದ್ದೊಯ್ದಾಗ..... ಹೆಣ್ಣಿನ ಸಂಗವನ್ನು ಬಯಸುವ ಬಯಕೆ ಅತಿಯಾಯಿತು. ಶೂರ್ಪನಖಿಯು ನಮ್ಮಲ್ಲಿಗೆ ಬಂದು ತೋಡಿಕೊಂಡಿದ್ದ ಬೇಡಿಕೆಯು ನನ್ನನ್ನು ಇನ್ನಷ್ಟು ಪ್ರೇರೇಪಿಸಿತು. ನನ್ನ ಆ ಪ್ರಯೋಗವನ್ನು ಪರೀಕ್ಷಿಸಿ ನೋಡಲು ಸೀತೆಯೇ ಆಗಬೇಕೆಂದಿರಲಿಲ್ಲ, ಬದಲಾಗಿ ಯಾವ ಹೆಣ್ಣಾದರೂ ಆಗುತ್ತಿತ್ತು. ಆದರೆ ಅದು ಅಲಭ್ಯ. ಸಮಾಜದ ದೃಷ್ಟಿಯಲ್ಲಿ ಹೀನಕೃತ್ಯ. ಆದ್ದರಿಂದ ಉಳಿದದ್ದು ಏಕೈಕ ಮಾರ್ಗ ಸೀತೆ ಮಾತ್ರ'... ಹೀಗೆ ವೇದ್ಯವಾಗಿಸುತ್ತಾರೆ.

ತಪ್ಪಿಗೆ ಮಹಾತಪ್ಪು ಮದ್ದಲ್ಲ. ಕಟ್ಟಾ ವೈರಿಯಾದರೂ ಅವನ ಮನಸ್ಸನ್ನು ತಾಳ್ಮೆಯಿಂದ ಪರಿವರ್ತಿಸುವ ಕ್ರಮದ ಆಯ್ಕೆಯನ್ನು ರಾವಣ ಅನುಸರಿಸುವ ಬಗೆಯನ್ನು ಕಂನಾ ಅವರು—

'ಕೊಂದ ಮಾತ್ರಕ್ಕೆ ಪರಿಹಾರ ದೊರೆಯುತ್ತದೆಯೇ? ಒಬ್ಬನನ್ನು ಕೊಂದರೆ ಅವನ ಪರಿಸಮಾಪ್ತಿಯಾಗುತ್ತದೆಯಷ್ಟೇ? ಆದರೆ ಅವನ ಕಡೆಯವರ ದ್ವೇಷ ಕಟ್ಟಿಕೊಳ್ಳಬೇಕಾಗುತ್ತದೆ. ಬದಲಾಗಿ ಅವನಲ್ಲಿದ್ದ ಕೆಟ್ಟ ಮನಸ್ಸನ್ನು ಪರಿವರ್ತಿಸಬೇಕು. ಅಹಂಕಾರ ತೊಲಗಿಸಬೇಕು. ಅದು ನಿಜವಾದ ರಾಜಕೀಯ ಮುತ್ಸದ್ದಿತನ.

ಇಲ್ಲ, ನಾನು ಅವನನ್ನು ಕೊಲ್ಲುವುದಿಲ್ಲ. ನನ್ನ ತಮ್ಮನನ್ನು ಕೊಂದರೂ, ನೂರಾರು ಜನ ಸೈನಿಕರನ್ನು ಕೊಂದರೂ, ನನ್ನ ತಂಗಿಯ ಭವಿಷ್ಯ ಹಾಳಾಗಿದ್ದರೂ ನಾನು ಅವನನ್ನು ಕೊಲ್ಲುವುದಿಲ್ಲ. ನನಗೆ ಬೇಕಾಗಿರುವುದು ಕೇವಲ ಅವನ ಸಾವಲ್ಲ, ಅವನ ಪರಿವರ್ತನೆ. ಈ ಮಾಡಿದ ಕಾರ್ಯಗಳಿಗೆಲ್ಲಾ ಅತ ಪಶ್ಚಾತ್ತಾಪ ಪಡಬೇಕು. ಅದೇ ನನ್ನ ಧ್ಯೇಯ, ಆದರ್ಶ.

ಹೌದು, ನನಗೆ ಜನರು ನೀಡಿರುವ ಆದರ್ಶ ರಾಜ ಪಟ್ಟವನ್ನು ಉಳಿಸಿಕೊಳ್ಳುತ್ತೇನೆ. ದಶರಥನ ಮಗ ರಾಮನನ್ನು ನಾನು ಅವನ ಧೂರ್ತಕಾರ್ಯಕ್ಕೆ ಕೊಲ್ಲುವುದಿಲ್ಲ, ಬದಲಾಗಿ ಪ್ರೀತಿಸುತ್ತೇನೆ. ಉತ್ತಮ ಮನುಷ್ಯನನ್ನಾಗಿಸಲು ಪ್ರಯತ್ನಪಡುತ್ತೇನೆ. ಉತ್ತಮ ಸ್ನೇಹಿತನಾಗುವಂತೆ ಮಾರ್ಪಡಿಸುತ್ತೇನೆ.....'

ರಾಮಾಯಣದ ಪ್ರಮುಖ ಪಾತ್ರಗಳಾದ ಈ ಮೇಲಿನವುಗಳಲ್ಲಿ (ಸೀತೆ, ಲಕ್ಷ್ಮಣ, ರಾಮ, ರಾವಣ) ಕಂನಾ ಅವರು ಸ್ತ್ರೀವಾದಿ ಸಂವೇದನೆಯನ್ನು ಮಾನವನ ಸಹಜ ಐಂದ್ರಿಯಕ ಕಾಮನೆಯನ್ನೂ, ವಿರಹದ ಯಾತನಾ ಸೆಳುವನ್ನೂ ಅಲ್ಲದೆ ದುರಾಲೋಚನೆಯ ಸ್ಥಿತಪ್ರಜ್ಞತ್ವವನ್ನೂ ಮೇಳೈಸಿ, ಆಯಾ ಪಾತ್ರಗಳ ಸಹಜಗತಿಗೆ, ಸ್ವಭಾವೋಕ್ತಿಯ ಸಿರಿಗೆ ನ್ಯಾಯ ಒದಗಿಸಿದ್ದಾರೆ. ಉಪಪಾತ್ರಗಳಾದ ಮಂಥರೆ, ಹನುಮಂತ ಇವರುಗಳು ತಮ್ಮದೇ ಆದ ಆತ್ಮನಿರೀಕ್ಷೆಗೆ ಒಳಗಾಗುವ ಮೂಲಕ ಓದುಗರ ಗಮನ ಸೆಳೆಯುತ್ತಾರೆ.

'ಕಾಂಡ'ದಲ್ಲಿ ಕಂನಾ ಅವರು ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಬಳಸಿಕೊಂಡದ್ದು ಸ್ಪಷ್ಟವಾಗಿ ಗೋಚರಿಸುತ್ತದೆ. ವೈಜ್ಞಾನಿಕತೆಯ ಉತ್ತುಂಗಾವಸ್ಥೆಯ ಬಗ್ಗೆ ನಾವು ಹೆಮ್ಮೆ ಪಡುತ್ತಿರುವುದೇನೋ ಸರಿ. ಆದರೆ ವೈಚಾರಿಕ ಕ್ರಾಂತಿಯಾಗುತ್ತಿಲ್ಲವಲ್ಲ ಎನ್ನುವ ವಿಷಾದ ಕಂನಾ ಅವರನ್ನು ತೀವ್ರ ಕಾಡಿದ್ದರಿಂದ, ಭಾರತೀಯ ಸಂದರ್ಭದಲ್ಲಿ ಪೌರಾಣಿಕ ಮಹಾಕಾವ್ಯವೆಂದೇ ಮನೆಮಾತಾಗಿರುವ 'ರಾಮಾಯಣ'ವನ್ನು, ವಾಸ್ತವದ ಜ್ವಾಲಾಮುಖಿಯ ಮೇಲೆ ನಡೆದಾಡುವಂತೆ ಅಲ್ಲಿಯ

ಪಾತ್ರಗಳನ್ನು ಬೆನ್ನು ತಟ್ಟಿ ಹುರಿದುಂಬಿಸಿದ್ದಾರೆ. ಇದನ್ನು ಅಪರೂಪದ ಸವಾಲೆಂದು ಬಗೆಯುತ್ತ, ಅಲ್ಲಿನ ಪಾತ್ರಗಳು ಅತಿ ಉತ್ಸಾಹದಲ್ಲೇ ಇಲ್ಲಿ ಪಾಲ್ಗೊಂಡಿವೆ. ಲೇಖಕನ ಆಶಯಕ್ಕೆ ಭಂಗ ಬರದಂತೆ ನಡೆದುಕೊಂಡಿವೆ. ಮುಟ್ಟಲಮುರುಕಿಯಂತೆ ನಾಜೂಕಿನಲ್ಲಿ ನಾಚಿಕೊಳ್ಳದ ಇವು ತಮ್ಮ ತಮ್ಮ ಸ್ವಭಾವಕ್ಕನುಗುಣವಾಗಿ ಒರಟುತನವನ್ನೂ, ಅಸಭ್ಯತೆಯನ್ನೂ ತೋರ್ಪಡಿಸುತ್ತವೆ. ಪಾರಜದ ಗುಣಧರ್ಮವೂ ಇವಕ್ಕೆ ಗೊತ್ತಿಲ್ಲದಿಲ್ಲ. ಹಾಗಾಗಿ ತಲೆಗೇರಿದ ಪಿತ್ತವನ್ನು ಮತ್ತೆ ಎದೆಗೆ ಇಳಿಸಿಕೊಳ್ಳುತ್ತವೆ; ಪಾತ್ರ ಪಾತ್ರಗಳಲ್ಲಿ ಅಸ್ತಿತ್ವದ ಬಗೆಗಿನ, ವ್ಯಕ್ತಿತ್ವದ ಬಗೆಗಿನ ಪ್ರಜ್ಞೆ ಸದಾ ಜಾಗೃತವಾಗಿದೆ. ಸ್ವಗತಪ್ರಿಯವಾಗಿರುವ ಇವು ತಮ್ಮ ತಮ್ಮ ಅನುಭವವನ್ನು ಅನುಭಾವದ ಮಟ್ಟಕ್ಕೇರಿಸಲು ಹವಣಿಸಿದಂತಿವೆ. ಇಲ್ಲಿನ ವೈಶಿಷ್ಟ್ಯವೆಂದರೆ, ನಾಡಿನ ಪಾತ್ರಗಳಿಗಿಂತ ಕಾಡಿನ ಪಾತ್ರಗಳು ಸುಸಂಸ್ಕೃತವಾಗಿವೆ. ಇಂಥ ಪಾತ್ರಗಳ ಮುಖೇನ ನಾವು ನಮ್ಮನಮ್ಮಲ್ಲಿಯ ಕುಬ್ಜತೆಯನ್ನು ನೀಗಿಸಿಕೊಳ್ಳಬೇಕಾದ ಅನಿವಾರ್ಯತೆಯನ್ನು ಲೇಖಕರು ಒತ್ತಿ ಹೇಳುವುದೂ, ಅವರ ಪಾಲಿನ ಸಂದೇಶ.

ಕಂನಾ ಅವರು 'ಕಾಂಡ'ದಲ್ಲಿ ಆದರ್ಶಗಳ ಗುಣಾತ್ಮಕ ವೈಚಾರಿಕತೆಯನ್ನು ಅಳವಡಿಸಿದ್ದಾರೆ. ಆದರೆ ಲೇಖಕರೇ ಅಂದುಕೊಳ್ಳುವಂತೆ, ಇದೂ ಒಂದು 'ಸೀತಾಯಣ'ವೇ ಆದರೂ ಪೋಲಂಕಿಯವರ 'ಸೀತಾಯಣ'ದಷ್ಟು ನಿಖರ ವೈಚಾರಿಕತೆಯನ್ನು ಹೊಂದಿಲ್ಲ. ಪೋಲಂಕಿಯವರಲ್ಲಿ ಅತ್ಯಂತ ಸೂಕ್ಷ್ಮ ಸಂಶೋಧನಾತ್ಮಕ ಮತ್ತು ಯಾರೆಲ್ಲ ಬೆಚ್ಚಿಬೀಳುವಂಥ ತೀಕ್ಷ್ಣ ವೈಚಾರಿಕತೆಯ ಮೊನಚನ್ನು ಕಂಡರೆ, ಕಂನಾ ಅವರಲ್ಲಿ, ವಾಸ್ತವ ನೆಲೆಯಲ್ಲಿ ಪೌರಾಣಿಕ ಪಾತ್ರಗಳು ಜೀವಿಸಲೇಬೇಕಾದ ಒತ್ತಡದಲ್ಲಿ, ತಮ್ಮ ವರ್ತನೆಯನ್ನು ಹೇಗೆ ಬದಲಿಸಿಕೊಳ್ಳಬೇಕಾಗುತ್ತದೆ, ಜೊತೆಗೆ ಆದರ್ಶಗಳ ಪರಿಪಾಲನೆಯನ್ನೂ ಹೇಗೆ ಮಾಡಿಕೊಳ್ಳಬೇಕಾಗುತ್ತದೆ ಎಂಬುದನ್ನು ಕಾಣುತ್ತೇವೆ.

ಕೊನೆಯದಾಗಿ 'ಕಾಂಡ'ದಲ್ಲಿ ಕಂಡುಬಂದಂಥ ಲೋಪಗಳತ್ತ ಲಕ್ಷ್ಯ ಹಾಕುವುದೂ ಅಷ್ಟೇ ಅಗತ್ಯ : ಶಬರಿ ಪಾತ್ರ ಯಾಕೆ ಕಣ್ಮರೆಯಾಯಿತು ಗೊತ್ತಾಗುವುದಿಲ್ಲ. ಎಂಜಲು ಬೋರೆ ಹಣ್ಣೆಂದುಕೊಂಡು ರಾಮ ಹಿಂದೇಟು ಹಾಕಿದನೇ? ವೈಜ್ಞಾನಿಕ ವೈದ್ಯಕೀಯ ದೃಷ್ಟಿಯಿಂದ ಲೇಖಕರು ಎಂಜಲನ್ನು ತಿನ್ನಿಸಬಾರದೆಂದುಕೊಂಡರೇ? ಏನೇ ಇರಲಿ, ಆ ಮಮತೆ ಮಮಕಾರದ ಸಾಕಾರಮೂರ್ತಿಯ ಅನುಪಸ್ಥಿತಿ ಒಡೆದು ಕಾಣುವ ಕೊರತೆ.

ಮತ್ತು ಕೆಲವೊಂದೆಡೆ ಯಾವುದು ಅಲ್ಪಪ್ರಾಣದಲ್ಲಿ ಬರಬೇಕೋ ಅದು ಮಹಾಪ್ರಾಣದಲ್ಲಿ ಬಂದದ್ದಿದೆ. ಕೆಲವು ಅಕ್ಷರ ದೋಷ, ತಪ್ಪು ಪ್ರಯೋಗಗಳೂ ಇಣಕಿವೆ. ಇವನ್ನು ಸರಿಪಡಿಸಿಕೊಳ್ಳಬೇಕಲ್ಲ? ಇರಲಿ. ಇಂಥವೆಲ್ಲ ಸಣ್ಣಪುಟ್ಟ ದೋಷಗಳು.

ಲಲಿತ ಶೈಲಿಯ 'ಕಾಂಡ' ಚೂಟಿತನದ ಕೃತಿ ಎನ್ನುವುದರಲ್ಲಿ ಅನುಮಾನವಿಲ್ಲ. ಇದೊಂದು ಪ್ರಾಯೋಗಿಕ ಕೃತಿ.

✣ ರವಿ ಉಪಾಧ್ಯ : # ೨೯೫, ಚಕ್ರೇಶ್ವರಿ, ೧ನೇ ಹಂತ, ರಾಣಿ ಚೆನ್ನಮ್ಮನಗರ, ಬೆಳಗಾವಿ-೬ ✣

ಕರ್ನಾಟಕದ ಸಾಂಸ್ಕೃತಿಕ ಸಂಪತ್ತು

ಜಿ. ಡಿ. ಜೋಶಿ

ಪೀಠಿಕೆ : ಸಂಸ್ಕೃತಿಯ ವಿವಿಧ ಅಭಿವ್ಯಕ್ತಿ ರೂಪಗಳಲ್ಲಿ ಸಾಹಿತ್ಯ, ಬೇರೆ ಬೇರೆ ಶಾಸ್ತ್ರಗಳು, ಕಲೆಗಳು, ಆಧುನಿಕ ವಿಜ್ಞಾನ, ರಂಗಭೂಮಿ, ಜಾನಪದ, ಭಾಷೆ, ಕಲೆ ಮೊದಲಾದವೆಲ್ಲ ಸಮಾವೇಶ ವಾಗುತ್ತವೆ. ಒಂದು ಜನಾಂಗದ ಸಂಸ್ಕೃತಿಯನ್ನು ರೂಪಿಸುವುದರಲ್ಲಿ ಸಾಹಿತ್ಯವು ಒಂದು ನಿರ್ದಿಷ್ಟವಾದ ಪ್ರಧಾನವಾದ ಪಾತ್ರ ವಹಿಸುತ್ತಿದೆ. ಸಂಸ್ಕೃತಿ, ಸಮೂಹ ಜೀವನದಿಂದ ಬರುವಂಥಾದ್ದು.

ಸಂಸ್ಕೃತಿ ಎಂದರೇನು? ಇದನ್ನು ವಿವರಿಸುವುದು ಸುಲಭ ಸಾಧ್ಯವಲ್ಲ. ಡಿ.ವಿ.ಜಿ. ಅವರ ಮಾತಿನಲ್ಲಿ ಹೇಳುವುದಾದರೆ, ಸಂಸ್ಕೃತಿ ಎಂಬುದು ಒಂದು ಅಂತರಂಗದ ಪರಿಪಾಕ, ಒಂದು ಬಗೆಯ ಆತ್ಮಶಿಕ್ಷಣ. ಸಂಗೀತ ಸಾಹಿತ್ಯಾದಿ ನಾನಾ ಕಲಾನುಭವಗಳ ಮತ್ತು ನಾನಾ ಶಾಸ್ತ್ರ ಶಿಕ್ಷಣಗಳ ಫಲಿತಾಂಶಗಳ ಸಾರಸಮ್ಮೇಳನ. ಅದರಲ್ಲಿ ವಿಜ್ಞಾನವೂ ಉಂಟು, ವಿವೇಕವೂ ಉಂಟು, ಔದಾರ್ಯವೂ ಉಂಟು ದಾರ್ಢ್ಯವೂ ಉಂಟು, ಬಿಗಿಯೂ ಉಂಟು ಸಡಿಲವೂ ಉಂಟು... ನಮ್ಮ ಜೀವನವನ್ನು ಸಾಧುವನ್ನಾಗಿ ಮಾಡಿಕೊಳ್ಳುವ ವಿಧಾನವೇ ಸಂಸ್ಕೃತಿ. ಲೋಕದೊಡನೆ ನಮಗಾಗುವ ನಾನಾ ಸಂಪರ್ಕಗಳಲ್ಲಿ ನಾವು ಸಂಪಾದಿಸುವ ಔಚಿತ್ಯವೇ ಸಂಸ್ಕೃತಿ... ನಮ್ಮ ಲೋಕ ಬಾಂಧವ್ಯವನ್ನು ರಮ್ಯವೆನಿಸುವುದಕ್ಕೂ ಬುದ್ಧಿಪೂರ್ವಕವಾಗಿ ಶ್ರಮಿಸಬೇಕು. ಅದೇ ಸಂಸ್ಕೃತಿಯ ಸಾರಾಂಶ. ಒಂದು ಜನಾಂಗವು ಬಳಸುವ ವಸ್ತುಗಳಿಂದ ನಾವು ಸುಲಭವಾಗಿ ಅದರ ನಾಗರಿಕತೆಯನ್ನು ಗುರುತಿಸಬಹುದು. ಆದರೆ ಒಂದು ಜನಾಂಗದ ದೈಹಿಕ ಮತ್ತು ಮಾನಸಿಕ ಚಟುವಟಿಕೆಗಳನ್ನೆಲ್ಲ ನಿರೀಕ್ಷಿಸಿ ಅದರ ಸಂಸ್ಕೃತಿಯನ್ನು ಗುರುತಿಸ ಬೇಕಾಗುತ್ತದೆ. ಸಾವಿರಾರು ವರ್ಷಗಳ ಶ್ರೇಷ್ಠ ಸಂಸ್ಕೃತಿಯ ಶ್ರೀಮಂತ ಕಲೆ, ಅನುಪಮ ಸಾಹಿತ್ಯ ಭಂಡಾರಗಳ ವೈಭವ, ಸಾಮಾಜಿಕ ಸಮಾನತೆ, ಹೃದಯ ವೈಶಾಲ್ಯಗಳಿಂದ ಮೂಡಿಬಂದ ವಚನ ಮತ್ತು ದಾಸ ಸಾಹಿತ್ಯಗಳು ಸದಾ ಪ್ರಸ್ತುತವಾಗಿವೆ. ಅವು ಮನುಕುಲಕ್ಕೆ ಕನ್ನಡದ ಕಾಣಿಕೆಯಾಗಿವೆ. ಧರ್ಮಗಳು, ನೃತ್ಯ, ಸಂಗೀತ, ನಾಟಕ, ಕ್ರೀಡೆ, ವಿಜ್ಞಾನ, ತಂತ್ರಜ್ಞಾನ ಮಹೋನ್ನತ ಕಾಣಿಕೆ.

ಕನ್ನಡ ಸಾಹಿತ್ಯ : ಇಪ್ಪತ್ತನೆಯ ಶತಮಾನದ ಪ್ರಾರಂಭದಿಂದಲೂ ಆಧುನಿಕ ಕನ್ನಡ ಸಾಹಿತ್ಯ ಸ್ಥಿತ್ಯಂತರಗಳನ್ನು ಪಡೆಯುತ್ತ ಬೆಳೆದುಬಂದಿದೆ (ನವೋದಯ, ಪ್ರಗತಿಶೀಲ, ನವ್ಯ, ದಲಿತ ಬಂಡಾಯ). ಪ್ರಾಚೀನತೆಯ ದೃಷ್ಟಿಯಿಂದ ನೋಡಿದಾಗ, ಭಾರತೀಯ ಸಾಹಿತ್ಯಗಳಲ್ಲಿ ಸಂಸ್ಕೃತ, ತಮಿಳುಗಳ ನಂತರ ಬರತಕ್ಕದ್ದು, ಕನ್ನಡ ಸಾಹಿತ್ಯವೇ. ಒಂದೂವರೆ ಸಾವಿರ ವರ್ಷದ ಸುದೀರ್ಘ ಇತಿಹಾಸ ಕನ್ನಡ ಸಾಹಿತ್ಯಕ್ಕಿದೆ. ಪಂಪ-ರನ್ನರಂತಹ ಉದ್ದಾಮ ಚಂಪೂ ಕವಿಗಳು ಬಸವೇಶ್ವರ-ಪ್ರಭುದೇವರಂತಹ ವಚನಕಾರರು, ಹರಿಹರ ರಾಘವಾಂಕರಂತಹ ರಗಳೆ ಷಟ್ಪದಿಕಾರರು, ಕುಮಾರವ್ಯಾಸ ಚಾಮರಸರಂತಹ ಷಟ್ಪದಿಯ ಗೇಯ ಕವಿಗಳು, ರತ್ನಾಕರ ನಂಜುಂಡರಂತಹ ಸಾಂಗತ್ಯ ಕವಿಗಳು, ಪುರಂದರ ಕನಕರಂತಹ ದಾಸರು, ನಿಜಗುಣ

ಷಡಕ್ಷರರಂತಹ ದೇವ ಕವಿಗಳು ಕನ್ನಡ ಸಾಹಿತ್ಯದ ಶ್ರೀಮಂತಿಕೆಯನ್ನು ಹೆಚ್ಚಿಸಿದ್ದಾರೆ. ಜೀವನದ ಶಾಶ್ವತ ಮಹಾಮೌಲ್ಯ, ಸಾಹಿತ್ಯದ ಕುಸುರಿನ ಸಾಕಲ್ಯ, ಭಾಷೆಯ ಬೆಡಗಿನ ನೈರ್ಮಲ್ಯಗಳಿಂದ ವಚನ ಸಾಹಿತ್ಯವು ವಿಶ್ವ ಸಾಹಿತ್ಯಕ್ಕೆ ಕನ್ನಡವು ನೀಡಿದ ಅಪೂರ್ವ ಕಾಣಿಕೆಯಾಗಿದೆ. ತತ್ತ್ವದ ಗಾಂಭೀರ್ಯ ಮಾಧುರ್ಯಗಳಿಂದ ಅದು ನಿತ್ಯ ವಿನೂತನವಾಗಿದೆ; ಸತ್ಯಸಂಪದವೆನಿಸಿದೆ.

ಹೊಸಗನ್ನಡ ಸಾಹಿತ್ಯದಲ್ಲಿ (೧೯೨೦-೫೦) ನವೋದಯ, (೧೯೫೦-೭೦) ನವ್ಯ ಮತ್ತು (೧೯೭೦ ರಿಂದ ಮುಂದೆ) ಬಂಡಾಯ ಎಂಬುವು ಮುಖ್ಯವಾದ ಅವಸ್ಥೆಗಳೆನ್ನಬಹುದು. ನವೋದಯವೆಂದರೆ ರಮ್ಯಯುಗ, ರಸ ಸಂಪ್ರದಾಯ ಪ್ರಧಾನವಾದದ್ದು. ಬಿ.ಎಂ.ಶ್ರೀ ಅವರ ಇಂಗ್ಲಿಷ್ ಗೀತೆಗಳಿಂದ ನವೋದಯ ಯುಗ ಪ್ರಾರಂಭವಾಗುತ್ತದೆ ಎನ್ನಬಹುದು. ಆದರೂ ಎಸ್. ಜಿ. ನರಸಿಂಹಾಚಾರ್ಯರು, ಪಂಜೆ ಮಂಗೇಶರಾಯರು, ಗೋವಿಂದ ಪೈಗಳು, ಹಟ್ಟಿಯಂಗಡಿ ನಾರಾಯಣರಾವ್, ಬೇಂದ್ರೆಯಂತಹರು ಕೆಲವು ಹೊಸ ಪ್ರಯೋಗಗಳನ್ನು ಈ ಮೊದಲೇ ಮಾಡಿದ್ದರು.

ಬಿ.ಎಂ.ಶ್ರೀ ಆಂಗ್ಲ ಛಂದೋ ಮಾದರಿಯಲ್ಲಿ ಕನ್ನಡದ ಲಯಗಳನ್ನು ಪಳಗಿಸುವ ಸಾಮರ್ಥ್ಯವನ್ನು ತಮ್ಮ ಮೊದಲ ಕೃತಿ (ಎಲ್ಲ ಇಂಗ್ಲಿಷ್ ಅನುವಾದಗಳು) ಇಂಗ್ಲಿಷ್ ಗೀತೆಗಳಲ್ಲಿ ತೋರಿಸಿದ್ದಾರೆ. ಉತ್ತಮ ಉದಾಹರಣೆ : 'ಕರುಣಾಳು ಬಾ ಬೆಳಕೆ'. ನವೋದಯ ಕವನಗಳು ನಮ್ಮ ನಾಡಿನ ಸಮಕಾಲೀನ ಸ್ಥಿತಿಗೆ, ಸಾಮಾಜಿಕ ಸಮಸ್ಯೆಗಳಿಗೆ ಮತ್ತು ಜನರ ಆಶೋತ್ತರಗಳಿಗೆ ಸ್ಪಂದಿಸಿ ರಚನೆಯಾದವುಗಳು. ಕವಿಗಳು ತಮ್ಮ ಪ್ರತಿಭೆಯಿಂದ ವಾಸ್ತವ ಅನುಭವ, ಸೌಂದರ್ಯ ಪ್ರೇಮ, ಬದುಕಿನಲ್ಲಿ ಶ್ರದ್ಧೆ, ಆದರ್ಶವಾದ ಆಧ್ಯಾತ್ಮಿಕ ಲೋಕದ ನಿಲುವುಗಳಿಗೆ ಎಡೆ ಕೊಟ್ಟಿದ್ದಾರೆ. ತಮ್ಮ ಕವನಗಳಲ್ಲಿ ಬೇಂದ್ರೆ, ಕುವೆಂಪು, ಮಧುರಚೆನ್ನ, ಗೋವಿಂದ ಪೈ, ಡಿ.ವಿ.ಜಿ., ಮಾಸ್ತಿ, ಪು.ತಿ.ನ. ಕಡೆಂಗೋಡ್ಲು ಶಂಕರಭಟ್ಟರು, ವಿ. ಸೀ., ರಂ. ಶ್ರೀ. ಮುಗಳಿ, ಡಿ. ಎಸ್. ಕರ್ಕಿ, ಈಶ್ವರ ಸಣಕಲ್ಲ, ಕೆ. ಎಸ್. ನರಸಿಂಹಸ್ವಾಮಿ ಮೊದಲಾದವರು ವಸ್ತುವಿಗೆ ತಕ್ಕ ಲಯ, ಭಾಷೆ ಪ್ರತಿಮೆ ಬಳಸಿ ನವೋದಯ ಕಾವ್ಯ ರಚಿಸಿದರು.

ಇಂಗ್ಲಿಷ್ ಸಾಹಿತ್ಯದ ಪ್ರಭಾವದಿಂದ ಆರಂಭಗೊಂಡ ಎರಡನೆಯ ಘಟ್ಟ ನವ್ಯ ಕಾವ್ಯ ಬರಲು ಸಮಾಜದಲ್ಲಾದ ಬದಲಾವಣೆಗಳೇ ಕಾರಣ. ಹಿಂದಿನ ಆ ಆದರ್ಶದಿಂದ ಕವಿತೆ ನೆಲಕ್ಕಿಳಿದು, ಮಣ್ಣಿನ ನೇರ ವಾಸನೆ ಬಡಿಯಬೇಕಾಯ್ತು. ಸ್ವಾತಂತ್ರ್ಯಪೂರ್ವದ ಕನಸಿನ ರಾಜ್ಯ ಭ್ರಮೆ ಎನಿಸತೊಡಗಿತು. ಕೊಲೆ, ಸುಲಿಗೆ, ಭ್ರಷ್ಟಾಚಾರ, ಲಂಚ, ಜಾತೀಯತೆ, ದಾರಿದ್ರ್ಯ, ಬಡತನ, ಶೋಷಣೆ ಆವರಿಸಿದುವು. ಗೋಪಾಲಕೃಷ್ಣ ಅಡಿಗರ 'ಗೊಂದಲಪುರ' ನವ್ಯ ಧ್ವನಿಗೆ ನಾಂದಿ ಹಾಕಿತೆನ್ನಬಹುದು. ಗೋಕಾಕರು ನವೋದಯ ನವ್ಯಗಳ ಸಮನ್ವಯದ ಕಾವ್ಯ ರಚಿಸಿದರು. ನವ್ಯಕಾವ್ಯ ಕಾವ್ಯಮಾರ್ಗ ಅವರ ಸಮುದ್ರಗೀತೆಗಳಿಂದ ಆರಂಭವಾಯಿತೆನ್ನಬಹುದು. ನವೋದಯದ ಶೈಲಿಯಲ್ಲಿ ಬರೆಯುತ್ತಿದ್ದ ಹಲವಾರು ಕವಿಗಳು ಈಗ (೧೯೫೦) ನವ್ಯಕಾವ್ಯ ರಚಿಸತೊಡಗಿದರು. ಉದಾ : ಕೆ.ಎಸ್.ಎನ್., ಕಣವಿ, ಜಿ.ಎಸ್.ಎಸ್., ರಾಮಚಂದ್ರ ಶರ್ಮ, ಕಂಬಾರ, ಲಂಕೇಶ. ಆಗ ಪ್ರಕಟವಾದ ಉತ್ತಮ ನವ್ಯ ಕವನಸಂಕಲನ ಇವು : ಸಮುದ್ರ ಗೀತೆಗಳು, ಭೂಮಿಗೀತ, ಶಿಲಾಲತೆ, ಮಣ್ಣಿನ ಮೆರವಣಿಗೆ, ಏಳು ಸುತ್ತಿನ ಕೋಟೆ, ಗೋಡೆ, ತಕರಾರಿನವರು, ಸಂಜೆ ಐದರ ಮಳೆ ಇತ್ಯಾದಿ. ಪ್ರತಿಮೆ, ರೂಪಕ, ಸಂಕೇತಗಳೇ ಇವುಗಳ

ಮಾಧ್ಯಮವಾದುದರಿಂದ (ಗೇಯ ಗುಣ ಬಿಟ್ಟಿದ್ದರಿಂದ) ನವ್ಯ ಶೈಲಿ ಕ್ಲಿಷ್ಟವೆನಿಸಿತು. ಅಸ್ಪಷ್ಟತೆ ಕಾವ್ಯದಲ್ಲಿ ಕಾಣಿಸಿಕೊಂಡಿತು. ಭಾವನೆಗಿಂತ ಬುದ್ಧಿಗೆ ನವ್ಯಸಾಹಿತ್ಯದಲ್ಲಿ ಪ್ರಾಶಸ್ತ್ಯ ದೊರೆಯಿತು.

ಸಾಮಾಜಿಕ ಹಾಗೂ ರಾಜಕೀಯ ಸ್ಥಿತ್ಯಂತರಗಳಿಂದ ಕೆರಳಿ, ದೀನ ದಲಿತರ ಮೇಲಿನ ಅತ್ಯಾಚಾರ, ಅನ್ಯಾಯಗಳ ವಿರುದ್ಧ ದನಿ ಎತ್ತಿದ ಕಾವ್ಯಪ್ರಕಾರ, ಬಂಡಾಯ ಎಂಬ ಹೆಸರು ಪಡೆಯಿತು. ಹೆಚ್ಚು ವಿಡಂಬನೆ, ಕ್ರೋಧ, ಪ್ರತಿಭಟನೆಗಳು ಕವಿಗಳ ಮನಸ್ಸನ್ನೇರಿ ಕಾವ್ಯವನ್ನು ಖಡ್ಗವನ್ನಾಗಿ ಮಾಡಿಕೊಳ್ಳುವಂತಾಯಿತು. ಹಳೆಯ ಮೌಲ್ಯ, ಪರಂಪರಾಗತ ಸಾಮಾಜಿಕ ವ್ಯವಸ್ಥೆಯ ವಿರುದ್ಧ ಬಂಡಾಯವೆದ್ದ ಚಂಪಾ, ದೇವನೂರು ಮಹಾದೇವ, ಸಿದ್ದಲಿಂಗಯ್ಯ, ರಮಜಾನ ದರ್ಗಾ, ಚೆನ್ನಣ್ಣ ವಾಲೀಕಾರ, ಕುಂ. ವೀರಭದ್ರಪ್ಪ, ಲಲಿತಾ ನಾಯಕ ಇತ್ಯಾದಿ. ನಮ್ಮ ನೆಲ ಜಲದಲ್ಲಿ ಬೆಳೆದ ಬಂಡಾಯ ಸಾಹಿತ್ಯದ ಭವಿಷ್ಯ ಉತ್ತಮವಾಗಿದೆ.

ಸಾಹಿತ್ಯವು ಸಂಸ್ಕೃತಿಯ ಒಂದು ಮಹತ್ವದ ಘಟಕವಾಗಿರುವಂತೆ ಅದು ಇತರ ಸಾಹಿತ್ಯ ಘಟಕಗಳ (ಉದಾ : ಸಾಹಿತ್ಯ ಕಲೆ, ನೃತ್ಯ, ಸಂಗೀತ)ಗಳ ಸಂವಹನ ಕಾರ್ಯಕ್ಕೆ ತಾನು ಬಳಸುವ ಭಾಷಾ ಮಾಧ್ಯಮದ ಮೂಲಕ ನೆರವಾಗಬಲ್ಲದು. ಅವುಗಳನ್ನು ವರ್ಣಿಸಿ, ವಿವರಿಸಿ, ಜನರಿಗೆ ಪರಿಚಯಿಸುವ ಸಾಮರ್ಥ್ಯವನ್ನು ಹೊಂದಿದೆ. ಮುಂದಿನ ಪೀಳಿಗೆಗೂ ಇದು ಜನಾಂಗದ ಸಂಸ್ಕೃತಿಯ ಸಾಧನೆಗಳನ್ನು ಕೊಂಡೊಯ್ದು, ವೈಭವಗಳನ್ನು ಸಾರಬಲ್ಲದು. ಹಾಗೆಯೆ ಜನಪದ ಸಾಹಿತ್ಯ ಕಲೆಗಳೂ ಸಂಸ್ಕೃತಿಯ ವೈಭವವನ್ನು ಹೆಚ್ಚಿಸುತ್ತವೆ.

ಭಾರತದ ಹಾಗೂ ಅದಕ್ಕನುಗುಣವಾದ ಕರ್ನಾಟಕ ಸಂಸ್ಕೃತಿಯ ಗಮ್ಯವೂ ಆತ್ಮ ಸಾಕ್ಷಾತ್ಕಾರವೇ ಆಗಿದೆ. ಸಂಸ್ಕೃತಿಯೆಂದರೆ ಬೆಳಕು, ಆನಂದ, ಅರಿವು ಎಂಬ ಅರ್ಥಗಳು ಇವೆ. ಭಾರತದ ದಕ್ಷಿಣ, ಉತ್ತರ ಭಾಗಗಳ ಸಮನ್ವಯವನ್ನು ಕರ್ನಾಟಕ ಸಾಧಿಸಿಕೊಂಡಿದೆ. ದ್ರಾವಿಡ ಸಂಸ್ಕೃತಿಯ ಉತ್ತಮ ಲಕ್ಷಣಗಳನ್ನು ತ್ಯಜಿಸದೆ ಸಂಪರ್ಕ ಬಂದ ಆರ್ಯ ಸಂಸ್ಕೃತಿಯ ಒಳ್ಳೆಯ ವೈಶಿಷ್ಟ್ಯಗಳನ್ನು ಮೈಗೂಡಿಸಿಕೊಂಡು ಸಮನ್ವಯ ಸಾಧಿಸಿದೆ. ಕರ್ನಾಟಕ ಅತೀ ಪುರಾತನ ಮಾನವನ ವಾಸಸ್ಥಾನವಾಗಿತ್ತೆಂದೂ ಸಿಂಧುಕೊಳ್ಳದ ನಾಗರಿಕತೆಗಿಂತ ಪ್ರಾಚೀನವಾದ ನಾಗರಿಕತೆ ಇತ್ತೆಂದೂ ಹವೆ, ನಿಸರ್ಗಸೌಂದರ್ಯ, ಅರಣ್ಯ ಸಂಪತ್ತು, ಖನಿಜ ಸಂಪತ್ತು, ಸಮುದ್ರ ಸಂಪತ್ತು, ಫಲವತ್ತಾದ ಭೂಮಿಗಳಿಂದಾಗಿ ಖ್ಯಾತಿ ಗಳಿಸಿತ್ತೆಂದೂ ತಿಳಿದುಬರುತ್ತದೆ.

ಒಂಬತ್ತನೆಯ ಶತಮಾನದ ಕವಿರಾಜಮಾರ್ಗ(ಮೊದಲ ಕನ್ನಡ ಗ್ರಂಥ)ದಲ್ಲಿ ಕನ್ನಡ ನಾಡಿನ ಜನಸಾಮಾನ್ಯರು ಕುರಿತೋದದೆಯುಂ ಕಾವ್ಯಪ್ರಯೋಗ ಪರಿಣತಮತಿಗಳ್ ಸುಭಟರ್ಕಳ್, ಕವಿಗಳ್, ಸುಪ್ರಭುಗಳ್, ಚೆಲ್ವರ್ಕಳ್, ಅಭಿಜನರ್ಕಳ್, ಗುಣಿಗಳ್, ಅಭಿಮಾನಿಗಳ್, ಅತ್ಯುಗ್ರರ್, ಗಭೀರ ಚಿತ್ತರ್, ವಿವೇಕಿಗಳ್ ಎಂದು ವರ್ಣಿಸಲಾಗಿದೆ.

ಶಂಕರ, ರಾಮಾನುಜ, ಮಧ್ವಾಚಾರ್ಯರಂಥ ಧರ್ಮಬೋಧಕರು ಕರ್ನಾಟಕವನ್ನು ತಮ್ಮ ಕಾರ್ಯಕ್ಷೇತ್ರವನ್ನಾಗಿಸಿ ಪ್ರಸಾರಕಾರ್ಯ ಮಾಡಿದ್ದಾರೆ. ಹಾಗೆಯೇ ಕವಿಗಳೂ ಕಲಾವಿದರೂ ತಮ್ಮ ಕೊಡುಗೆ ನೀಡಿ ಕರ್ನಾಟಕದ ಸಾಂಸ್ಕೃತಿಕ ಪರಂಪರೆಯನ್ನು ಸಮೃದ್ಧಗೊಳಿಸಿದ್ದಾರೆ, ವೈವಿಧ್ಯಪೂರ್ಣ ಮಾಡಿದ್ದಾರೆ.

ಕರ್ನಾಟಕವು ಸಾಮ್ರಾಜ್ಯದ ತೊಟ್ಟಿಲಾಗಿ, ಧರ್ಮಗಳ ಭಂಡಾರವಾಗಿ, ಶಿಲ್ಪ ಹಾಗೂ ಇತರ ಕಲೆಗಳ ಜನ್ಮಭೂಮಿಯಾಗಿತ್ತೆಂದು ಅಲ್ಲಿಗೆ ಆಗ ಬಂದ ವಿದೇಶೀ ವಿದ್ವಾಂಸರು

ವರ್ಣಿಸಿದ್ದಾರೆ. ಶಾತವಾಹನ, ಗಂಗ, ಕದಂಬ, ರಾಷ್ಟ್ರಕೂಟ, ಹೊಯ್ಸಳ, ಚಾಲುಕ್ಯ, ವಿಜಯನಗರ, ಮೈಸೂರು ರಾಜ್ಯಗಳು ಕನ್ನಡ ಸಂಸ್ಕೃತಿಯನ್ನು ಸುವ್ಯವಸ್ಥಿತವಾಗಿ ಬೆಳೆಸಿದವು. ಅರಬರ ದಾಳಿಯನ್ನು ತಡೆಗಟ್ಟಲು ವಿಜಯನಗರವು ಹಲವು ವರ್ಷ ಯಶಸ್ವಿಯಾಯಿತು. ಹಿಂದೆ ಇಮ್ಮಡಿ ಪುಲಕೇಶಿ ಹರ್ಷವರ್ಧನನನ್ನು ಸೋಲಿಸಿ ಕರ್ನಾಟಕ ಸಾಂಸ್ಕೃತಿಕ ಪರಂಪರೆಯನ್ನು ರಕ್ಷಿಸಿದ್ದನು. ಅವನ ಶೌರ್ಯ, ಔದಾರ್ಯ, ವಿಶಾಲ ದೃಷ್ಟಿ ಸ್ಮರಣೀಯವಾಗಿವೆ. ಚೀನ ದೇಶದ ಹ್ಯೂಯೆನ್ ತ್ಸ್ಯಾಂಗ್ ಯಾತ್ರಿಕನು ಪುಲಕೇಶಿಯ ರಾಜ್ಯದ, ಜನರ ಗುಣಗಾನ ಮಾಡಿದ್ದಾನೆ. ಕರ್ನಾಟಕದ ದೊರೆಗಳು ತಮ್ಮ ಧರ್ಮಗುರುಗಳಿಂದ ಬೋಧನೆ, ಸ್ಫೂರ್ತಿ ಪಡೆಯುತ್ತಿದ್ದರು. ಸುಸಂಸ್ಕಾರ ಹೊಂದಲು ಇದು ಮಾರ್ಗದರ್ಶಕವಾಗುತ್ತಿತ್ತು. ಸಾಹಿತ್ಯ ಸಂಗೀತ ಶಿಲ್ಪಕಲೆ ಆಡಳಿತಗಳಲ್ಲಿ ಅವರು ಕೊಟ್ಟ ಸಂಸ್ಕಾರ ಅಭಿವ್ಯಕ್ತಿ ಪಡೆಯುತ್ತಿತ್ತು. ರಾಷ್ಟ್ರಕೂಟರ ೩ನೆಯ ಕೃಷ್ಣ, ಕಲ್ಯಾಣ ಚಾಲುಕ್ಯರ ೬ನೆಯ ವಿಕ್ರಮಾದಿತ್ಯ, ಹೊಯ್ಸಳ ವಿಷ್ಣುವರ್ಧನ, ವಿಜಯನಗರದ ಕೃಷ್ಣದೇವರಾಯ ಅವರು ಸಮಸ್ತ ಜನಕಲ್ಯಾಣ ಕಾರ್ಯ ಮಾಡಿ, ಮೌಲ್ಯಗಳನ್ನು ಎತ್ತಿಹಿಡಿದು, ಸಂಸ್ಕೃತಿಯ ಮಟ್ಟವನ್ನು ಏರಿಸಿದರು. ಹಾಗೂ ಎಲ್ಲರೂ ಅವರು ನಿರ್ಮಿಸಿದ ಕಲಾಲಯಗಳನ್ನು ವರ್ಣಿಸಿ ಎಲ್ಲರೂ ಹೆಮ್ಮೆಪಡುವಂತಾಗಿದೆ. ಉದಾ : ಬಾದಾಮಿ ಗುಹೆಗಳು ಚಾಲುಕ್ಯರ ಘನತೆಯನ್ನು, ವೇರೂಳದ(ಎಲ್ಲೋರಾ) ಬಂಡೆಗಳಲ್ಲಿ ಕೆತ್ತಿದ ಕೈಲಾಸೇಶ್ವರ ಎಂಬ ಜಗತ್ಪ್ರಸಿದ್ಧ ದೇವಾಲಯವು ರಾಷ್ಟ್ರಕೂಟರ ಹಿರಿಮೆಯನ್ನು ಸಾರಿ ಹೇಳುತ್ತವೆ. ಕಲ್ಯಾಣದ ೬ನೆಯ ವಿಕ್ರಮಾದಿತ್ಯನ ಪ್ರಭುತ್ವ ಆಸಾಮದಿಂದ ಸಿಲೋನದ ವರೆಗೆ ಹಬ್ಬಿತ್ತು. ಅವನು ತನ್ನ ಹೆಸರಿನ ಶಕ ಆರಂಭಿಸಿದ್ದನು. ಕಾಶ್ಮೀರದ ಪ್ರಸಿದ್ಧ ಪಂಡಿತ ಬಿಲ್ಹಣನು ಕಲ್ಯಾಣನಗರ ಮತ್ತು ವಿಕ್ರಮಾದಿತ್ಯ ದೊರೆ ಎಂದೆಂದಿಗೂ ಅದ್ವಿತೀಯರು ಎಂದು ವರ್ಣಿಸಿದ್ದಾನೆ. ಆತನ ಆಶ್ರಯದಲ್ಲಿ ರಚಿತ ಕಾವ್ಯಗಳು ಅವನ ಹಿರಿಮೆಯನ್ನು ಸಾರುತ್ತಿವೆ. ಹೊಯ್ಸಳ ರಾಜವಂಶದ ಹಿರಿಮೆ ಸಾರುವ ಸುಪ್ರಸಿದ್ಧ ಬೇಲೂರು ಹಳೇಬೀಡುಗಳಲ್ಲಿಯ ವಾಸ್ತು ಹಾಗೂ ಮೂರ್ತಿಶಿಲ್ಪಗಳು ಕಲೆಯ ಬಲೆಯಾಗಿವೆ. ಐಹೊಳೆ, ಪಟ್ಟದಕಲ್ಲು ಜಗತ್ಪ್ರಸಿದ್ಧವಾಗಿವೆ. ವಿಷ್ಣುವರ್ಧನನ ಕಲೆ, ಸಾಹಿತ್ಯಪೋಷಣೆ, ಶೌರ್ಯ, ಸಹಿಷ್ಣುತೆ ಹಾಗೂ ಧರ್ಮಪ್ರೋತ್ಸಾಹ ಚಿರಸ್ಮರಣೀಯ. ವಿಜಯನಗರ ರಾಜ್ಯಸ್ಥಾಪನೆಗೆ ಹೊಯ್ಸಳ ರಾಜ ಮನೆತನವು ದಾರಿ ಮಾಡಿಕೊಟ್ಟಿತೆನ್ನಬಹುದು. ವಿಜಯನಗರವು ಹಿಂದೂ ಧರ್ಮ, ಸಂಸ್ಕೃತಿಗಳ ಸಂರಕ್ಷಣೆ ಎಂದೇ ಸ್ಥಾಪಿತವಾಗಿ ಹೆಸರಾಯಿತೆಂದೂ ಅದು ಅದ್ವಿತೀಯವೆಂದೂ ಫಾದರ್ ಹೆರಾಸ್ ವರ್ಣಿಸಿದ್ದಾರೆ. ೩೦೦ ವರ್ಷ ಸಂಪತ್ತು, ಸಮೃದ್ಧಿ, ಅರಸರ ಉದಾರ ಧಾರ್ಮಿಕ ಮನೋಭಾವ, ಜನತೆಯ ಉತ್ತಮ ಸಾಂಸ್ಕೃತಿಕ ಮಟ್ಟ, ಕಲೆ ಕುಶಲತೆಗೆ ಪ್ರೋತ್ಸಾಹ, ಐಹಿಕ ವೈಭವ, ನೈತಿಕ ಪ್ರಭಾವ ಎಲ್ಲ ದೃಷ್ಟಿಗಳಿಂದ ಎಂದೂ ಮರೆಯಲಾರದ ಸಾಮ್ರಾಜ್ಯವಾಗಿತ್ತು. ಪ್ರೌಢದೇವರಾಯ, ಕೃಷ್ಣದೇವರಾಯರನ್ನು ವಿಶೇಷವಾಗಿ ಉಲ್ಲೇಖಿಸಲೇಬೇಕು.

ಶರಣರು, ದಾಸರು ಧಾರ್ಮಿಕ ರಂಗದಲ್ಲಿ ಪ್ರಭಾವ ಬೀರಿದರು. ಸಾಹಿತ್ಯ ರಚಿಸಿದರು. ನೀತಿವಂತರಾಗಿ ಬಾಳಿದರು. ದಕ್ಷಿಣ ಭಾರತದ ಭಾಷೆಗಳ ಬೆಳವಣಿಗೆಗೆ ವಿಶೇಷ ಉತ್ತೇಜನ ಕೊಟ್ಟ ರಾಜರು ಮುಸ್ಲಿಮ್, ಕ್ರಿಶ್ಚನ್, ಧರ್ಮಪ್ರಚಾರಕ ಪ್ರತಿನಿಧಿಗಳಿಗೆ ಸ್ವಾಗತವಿತ್ತರು. ಎಲ್ಲ ಧರ್ಮಗಳಿಗೂ ಸಮಾನ ಮನ್ನಣೆ ಕೊಟ್ಟರು.

ಮಹಮ್ಮದೀಯ ದೊರೆಗಳೂ ಕನ್ನಡ ಸಂಸ್ಕೃತಿಗೆ ತಮ್ಮ ಕಾಣಿಕೆ ಅರ್ಪಿಸಿದ್ದಾರೆ. ಬೀದರ್ ದೊರೆಗಳ ವಿದ್ಯಾಕೇಂದ್ರ, ವಿಜಾಪುರ ಆದಿಲ್‌ಶಾಹನ ಗೋಳಗುಮ್ಮಟ ನಿರ್ಮಾಣ, ಟಿಪ್ಪುವಿನ ದರಿಯಾ ದೌಲತ್ ಹಾಗೂ ಮಂದಿರಗಳ ಕಾಣಿಕೆ ಕೊಡುಗೆ ಮಹತ್ವದ್ದಾಗಿದೆ.

ಭಾರತೀಯ ಸಂಸ್ಕೃತಿಯ ಉಪ ಸಂಸ್ಕೃತಿಯಾಗಿ ಕನ್ನಡ ಸಂಸ್ಕೃತಿ ಇದ್ದರೂ ಅದು ತನ್ನ ವೈಶಿಷ್ಟ್ಯಗಳಿಂದ ಮೆರೆದು, ಉತ್ತಮ ಸ್ಥಾನ ಗಳಿಸಿದೆ.

ಇನ್ನೊಂದು ಮಹತ್ವದ ಅಂಶವೆಂದರೆ ಶೌರ್ಯ. ದೇಶ-ಅರಸ-ಧರ್ಮ-ದೇವರು ಗ್ರಾಮ ರಕ್ಷಣೆ ಮೊದಲಾದವುಗಳಿಗಾಗಿ ಪ್ರಾಣಾರ್ಪಣೆ ಮಾಡುವುದು ಕನ್ನಡಿಗರ ಸ್ವಭಾವ ವಿಶೇಷ. ಇವುಗಳಿಗೆ ವೀರಗಲ್ಲು, ಮಾಸ್ತಿಗಲ್ಲು, ನಿಸದಿಗಲ್ಲುಗಳು ಸಾಕ್ಷ್ಯ ಒದಗಿಸುತ್ತವೆ.

ನಾವೇನು ಮಾಡಬೇಕು? : ಹಿಂದಿನ ಕನ್ನಡ ಸಂಸ್ಕೃತಿಯ ಹಿರಿಮೆಯನ್ನು ಸ್ಮರಿಸಿ, ಇಂದು ಹಲವಾರು ತೊಂದರೆಗಳನ್ನು ಎದುರಿಸಿ, ಅದನ್ನು ಉಳಿಸಿ ಬೆಳೆಸಬೇಕಾಗಿದೆ. ಕೇವಲ ಮಾತಿನಿಂದ, ಬರವಣಿಗೆಯಿಂದ ಇಲ್ಲವೆ ಬೋಧನೆಯಿಂದ ಸಂಸ್ಕೃತಿಯನ್ನು ಉಳಿಸಿ ಬೆಳೆಸಲು ಸಾಧ್ಯವಿಲ್ಲ. ತಮಿಳರಂತೆ, ಮರಾಠಿಗರಂತೆ, ತೆಲುಗರಂತೆ ನಮ್ಮ ಸಂಸ್ಕೃತಿ ಬಗ್ಗೆ ಅಭಿಮಾನ ತಾಳಬೇಕು, ಬೆಳೆಸಿಕೊಳ್ಳಬೇಕು. ಆ ದಿಕ್ಕಿನಲ್ಲಿ ನಾವು ಕಾಯಾ ವಾಚಾ ಮನಸಾ ಸದಾ ಕಾರ್ಯಪ್ರವೃತ್ತರಾಗಬೇಕು. ಕನ್ನಡ ಅಭಿಮಾನವನ್ನು ಬೆಳೆಸಿಕೊಳ್ಳಿರಿ ಎಂದು ಹೇಳುವದಕ್ಕಿಂತ ನಾವೇ ಬೆಳೆಸಿಕೊಂಡು ಮುಂದಿನ ಪೀಳಿಗೆಗೆ ಅದನ್ನು ಸಮೃದ್ಧವಾಗಿ ಕೊಡುವುದು ನಮ್ಮ ಕರ್ತವ್ಯ. ಕನ್ನಡ ಸಾಹಿತ್ಯ ಪರಿಷತ್ತು, ಕರ್ನಾಟಕ ವಿದ್ಯಾವರ್ಧಕ ಸಂಘ ಈ ದಿಶೆಯಲ್ಲಿ ಉತ್ತಮ ಕಾರ್ಯ ಮಾಡುತ್ತಿವೆ. ಕನ್ನಡಿಗರು ಕನ್ನಡವನ್ನು ಮನೆಯ ಒಳಗೆ, ಹೊರಗೆ ಇತರರೊಡನೆ ಮಾತನಾಡುವುದಲ್ಲದೆ ಅದನ್ನು ಭಾಷೆಯನ್ನಾಗಿ ಅಭ್ಯಾಸ ಮಾಡಿ, ಅದರ ಸಾಹಿತ್ಯದ ಮುಖಾಂತರ ಸಂಸ್ಕೃತಿಯ ಸವಿಯನ್ನು ಅನುಭವಿಸಬೇಕು. ನೃತ್ಯ, ಸಂಗೀತ, ಕಲೆಗಳಿಗೆ ಪ್ರೋತ್ಸಾಹ ನೀಡಬೇಕು. ಇತರರೂ ನೀಡುವಂತೆ ಮಾಡಬೇಕು. ಕನ್ನಡ ಸಂಸ್ಕೃತಿಯ ತೇರನ್ನು ಎಳೆಯಲು ನಾವು ಮುಂದಾಗಬೇಕು. ಜೊತೆಗೆ ಇತರರನ್ನು ಕರೆದೊಯ್ಯಬೇಕು. ಆಗ ಮಾತ್ರ ನಾವು ಕನ್ನಡ ಸಂಸ್ಕೃತಿದೀಪ ಹಚ್ಚಲು, ಹೆಚ್ಚು ಜಾಜ್ವಲ್ಯಮಾನವಾಗುವಂತೆ ಮಾಡಲು ಸಾಧ್ಯ. ಕನ್ನಡ ನಾಡು, ನುಡಿ, ಜಲ, ಪರಿಸರ, ನಿಸರ್ಗ, ಸಾಹಿತ್ಯ, ಸಂಗೀತ, ನೃತ್ಯ ಮೊದಲಾದ ಕಲೆಗಳನ್ನು ಸಂರಕ್ಷಿಸಿ ಬೆಳೆಸಲು ನಾವು ಮುಂದಾಗಬೇಕಾಗಿದೆ. ಕೆಲವರು ಇತರರಿಗೆ ಬೋಧನೆ ಮಾಡಿ, ತಾವು ಇಂಗ್ಲಿಷ್ ಸಂಸ್ಕೃತಿಯ ಆರಾಧಕರಾಗಿರುತ್ತಾರೆ. ಇಲ್ಲವೆ ಬೇರೆ ಭಾಷಾ–ಸಂಸ್ಕೃತಿಗಳನ್ನು ಮೆಚ್ಚಿಕೊಂಡಿರುತ್ತಾರೆ. ಆಚಾರ ಹೇಳುತ್ತಾರೆ, ಬದನೆಕಾಯಿ ತಿನ್ನುತ್ತಾರೆ. ನಿಜವಾಗಿ ಇಂಥ ಕನ್ನಡಿಗರಿಂದಲೇ ಕನ್ನಡ ಸಂಸ್ಕೃತಿಗೆ ಕೇಡು. ಆಡದೇ ಮಾಡುವವನು ರೂಢಿಯೊಳಗುತ್ತಮನು. ನಾವು ಕನ್ನಡಕ್ಕಾಗಿ ಕಟಿಬದ್ಧರಾಗಿರೋಣ. ಕನ್ನಡತನ ಉಳಿಸಿ, ಬೆಳೆಸಿಕೊಳ್ಳೋಣ.

ಹೆಸರಾಯ್ತು ಕರ್ನಾಟಕ, ಇನ್ನು ಉಸಿರಾಗಲಿ ಕನ್ನಡ.

❖ **ಡಾ. ಜಿ. ಡಿ. ಜೋಶಿ :** #೭೨/೨೪೩೩, ನೆಹರೂನಗರ

೬೦ ಕೋಆಪರೇಟಿವ್ ಹೌಸಿಂಗ್ ಸೊಸಾಯಿಟಿ, [illegible]

ಐದು ಗಜಲ್‌ಗಳು

ವೈ. ಬಿ. ಹಾಲಬಾವಿ

ಒಂದು

ನೀನಿಲ್ಲದೆ ಒಂದೇ ಸಮನೆ ಬಿಡದೆ ಕಾಡುತ್ತಿದೆ ಒಂಟಿತನ
ಎದೆಭಾರ ನಿಟ್ಟುಸಿರು ಎಡೆಬಿಡದೆ ಚಡಪಡಿಸುತ್ತಿದೆ ಒಂಟಿತನ
ಜಿಟಿ ಜಿಟಿ ಹಿಡಿದ ಮಳೆ ಹನಿಯಂತೆ ನಿನ್ನ ನೆನಪ ಯಾನ
ಹೃದಯಶೂನ್ಯತೆ ಬಿಟ್ಟೂ ಬಿಡದೆ ಖಿನ್ನತೆ ಆವರಿಸುತ್ತಿದೆ ಒಂಟಿತನ
ಅಗಲಿಕೆಯ ಆ ಕ್ಷಣದ ವಿರಹ ವೇದನೆಗೆ ರೋದಿಸುತ್ತಿದೆ ಮನ
ಗಳಿಗೆ ಗಳಿಗೆಗೂ ನಿನ್ನ ಬರುವಿಕೆಗೆ ತವಕಿಸುತ್ತಿದೆ ಒಂಟಿತನ
ನೀನಿಲ್ಲದ ಮನೆ ಮೌನ ಅಸಹನೀಯ ನೂರು ನೋವಿನ ತಾನ
ಏಕೋ ಏನೋ ಭಾರವಾಗಿದೆ ಮನಸು ಕಳವಳಿಸುತ್ತಿದೆ ಒಂಟಿತನ
ಇಲ್ಲ ಒಂದಿನಿತು ಸಮಾಧಾನ ಹಗಲಿರುಳು ನಿನ್ನದೇ ಧ್ಯಾನ
ಮಾತು ಮುನಿಸು ಬೇಡ ಬಿಗುಮಾನ ಕನವರಿಸುತ್ತಿದೆ ಒಂಟಿತನ
ನೀನಿಲ್ಲದೆ ರಸ ರುಚಿಯಿಲ್ಲ ಜೀವ ಮಿಡಿಯುತ್ತಿದೆ ಶ್ರುತಿಯಿಲ್ಲದ ಗಾನ
ಬಾ ಮನ ಮಾಡು ಪ್ರೇಮದುನ್ಮೀಲನಕೆ ಹಂಬಲಿಸುತ್ತಿದೆ ಒಂಟಿತನ
ಏನಿತ್ತು ಏನಿಲ್ಲ ಕತ್ತಲೆಗೆ ಮುಖ ಮಾಡಿ ಸಾಗಿತ್ತು ಬದುಕಿನ ಕಾರವಾನ
ಬಾ ಹಚ್ಚು ದೀಪ ಒಳ ಹೊರಗೆ ಬೆಳಗಲಿ ಜ್ಞಾನ ಕಾತರಿಸುತ್ತಿದೆ ಒಂಟಿತನ

ಎರಡು

ಮಾತು ಬೇಡ ಬಿಡು ಅಂತರಂಗದ ತುಮುಲಗಳೇ ನಮ್ಮ ಜೊತೆಗಿರಲು
ಮೌನದಲ್ಲೇ ಸಾಗೋಣ ಬಿಸಿಲು ಬೆಳದಿಂಗಳೇ ನಮ್ಮ ಜೊತೆಗಿರಲು
ಇರುಳು ಕಳೆದು ಹಗಲು ಬರಲು ನೀನೇ ನನ್ನ ಜೊತೆಗಿರಲು
ಬಾಳ ಪಥದಲ್ಲಿ ಸಾಗೋಣ ಮಧುರ ನೆನಪುಗಳೇ ನಮ್ಮ ಜೊತೆಗಿರಲು
ನೋವು-ನಲಿವು ಏನೇ ಇರಲಿ, ನೀನೇ ನನ್ನ ಜೊತೆಗಿರಲು
ಜೋಡಿ ಪಯಣ ಬೆಳೆಸೋಣ ಶಿಶಿರ ವಸಂತಗಳೇ ನಮ್ಮ ಜೊತೆಗಿರಲು
ಕಳೆದ ದಿನಗಳು ಕಳೆದೇ ಹೋದವು ನೀನೇ ನನ್ನ ಜೊತೆಗಿರಲು
ಕೂಡಿ ಬಾಳೋಣ ನಾಳೆಯ ಕನಸುಗಳೇ ನಮ್ಮ ಜೊತೆಗಿರಲು
ಸ್ವರ್ಗ ಸುಖ ಬೇಡ ಬಿಡು ನೀನೇ ನನ್ನ ಜೊತೆಗಿರಲು
ಹೊಂದಿಕೊಂಡೇ ಬದುಕೋಣ ಕಷ್ಟ-ಕಾರ್ಪಣ್ಯಗಳೇ ನಮ್ಮ ಜೊತೆಗಿರಲು

ಮೂರು

ಕಷ್ಟವೋ ನಷ್ಟವೋ ಹೊಂದಿಕೊಂಡು ಹೋಗಬೇಕು ಬೇರೆ ದಾರಿಯಿಲ್ಲ
ಕಲ್ಲೋ ಮುಳ್ಳೋ ಬಾಳ ಹಾದಿ ತುಳಿಯಬೇಕು ಬೇರೆ ದಾರಿಯಿಲ್ಲ
ಕತ್ತಲೋ ಬೆಳಕೋ ಬದುಕಿಗೊಂದು ಹೊಸ ನೆಲೆ ಹುಡುಕಬೇಕು
ನೋವೋ ನಲಿವೋ ಕೂಡಿಕೊಂಡು ಬಾಳಬೇಕು ಬೇರೆ ದಾರಿಯಿಲ್ಲ

ಸಿಟ್ಟೋ ಸೆಡವೋ ಮರೆತು ಮಾತು ಆಡಬೇಕು ಕಲೆತು ಪ್ರೀತಿ ಮಾಡಬೇಕು
ಸಿಹಿಯೋ ಕಹಿಯೋ ನೆನಪ ಬುತ್ತಿ ಬಿಚ್ಚಿ ಉಣ್ಣಬೇಕು ಬೇರೆ ದಾರಿಯಿಲ್ಲ
ನಿನಗೆ ನಾನು ನನಗೆ ನೀನು ಒಲಿಯಬೇಕು ಒಂದಾಗಿ ನಲಿಯಬೇಕು
ಸರಸವೋ ವಿರಸವೋ ಸಮರಸದಿ ಸೇರಬೇಕು ಬೇರೆ ದಾರಿಯಿಲ್ಲ
ಬೇವು-ಬೆಲ್ಲದಂತೆ ಬೆರೆತು ನಾವು ಬದುಕ ಬಂಡಿ ಹೂಡಬೇಕು
ಬಡತನವೋ ಸಿರಿತನವೋ ದಾಂಪತ್ಯ ಸುಖ ಸವಿಯಬೇಕು ಬೇರೆ ದಾರಿಯಿಲ್ಲ

ನಾಲ್ಕು

ಪ್ರೀತಿ ಹುಡುಕುತ್ತಾ ಹೊರಟೆ ಬರೀ ನೋವಿನ ತಾಣಗಳೇ ಎದುರಾದವು
ನೀತಿ ನಿಯತ್ತು ಎಲ್ಲಿದೆ? ಬರೀ ಕುಟಿಲ ಕಾರಸ್ಥಾನಗಳೇ ಎದುರಾದವು
ಎಲ್ಲಾ ನಮ್ಮ ನಮ್ಮವರೇ ಇಹರು ಗುಮಾನಿಗಣ್ಣಿನ ವಂಚಕರು
ಯಾರು ಯಾರನ್ನು ದೂರುವುದು? ಬರೀ ಸಂಶಯಗಳೇ ಎದುರಾದವು
ನಿನ್ನೆ ಮೊನ್ನೆಯ ವರೆಗೆ ಗೆಳೆಯರಾಗಿದ್ದವರು ಈಗ ಅಪರಿಚಿತರ ಹಾಗೆ ಸೋಗು
ಯಾರು ಯಾರನ್ನು ನಂಬುವುದು? ಬರೀ ಅಪನಂಬಿಕೆಗಳೇ ಎದುರಾದವು
ಎಲ್ಲಾ ಬೆನ್ನಹಿಂದಿನ ಮಾತು ಮುಂದೆ ಗೋಮುಖ ಹೊತ್ತ ಮುಖವಾಡಗಳು
ಯಾರು ಹಿತವರು ಯಾರು ಶತ್ರುಗಳು? ಬರೀ ಪಿತೂರಿಗಳೇ ಎದುರಾದವು
ಬಹಿರಂಗದ ಬದುಕು ಬಲು ಥಳಕು ಬಳುಕು ಅಂತರಂಗ ಬರಿ ಕೊಳಕು
ಇವರೊಂದಿಗೆ ಬಾಳುವುದು ಹೇಗೆ? ಬರೀ ಪ್ರಶ್ನೆಗಳೇ ಎದುರಾದವು
ಎಲ್ಲಾ ಸರಿಯಾಗಿದೆ ಎನ್ನುವಾಗಲೇ ಹುಡುಕಿಕೊಂಡು ಬರುತ್ತವೆ ಕಷ್ಟಗಳು
ಓ 'ಹಾಲ' ಬಿಡಿಸಿಕೊಳ್ಳುವುದು ಹೇಗೆ? ಬರೀ ಜೀವಂತ ಸವಾಲುಗಳೇ ಎದುರಾದವು

ಐದು

ನೋವು ಬಂದರೇನು ನೀಗಲೇಬೇಕು ಬೇರೆ ದಾರಿಯಿಲ್ಲ
ಸಾವು ಬಂದರೇನು ಎದುರಿಸಲೇಬೇಕು ಬೇರೆ ದಾರಿಯಿಲ್ಲ
ನೋವಿಲ್ಲದೆಡೆಯಿಲ್ಲ ಸಾವಿಲ್ಲದೆಡೆಯಿಲ್ಲ ಬುದ್ಧ ಹೇಳಿದ ಮಾತು
ಸುಖ ದುಃಖಗಳಿಗೆ ಬದ್ಧರಾಗಲೇಬೇಕು ಬೇರೆ ದಾರಿಯಿಲ್ಲ
ಅಸೂಯೆ, ಅಹಂಕಾರ ಆರೋಗ್ಯಕ್ಕೆ ಒಳ್ಳೆಯದಲ್ಲ
ಎದೆಯಲಿ ಸದಾ ಪ್ರೀತಿಯ ಹಣತೆ ಬೆಳಗಲೇಬೇಕು ಬೇರೆ ದಾರಿಯಿಲ್ಲ
ಹಿಂಸೆ, ಕ್ರೌರ್ಯದಿಂದಲೇ ಏನನ್ನೂ ಸಾಧಿಸಲಾಗುವುದಿಲ್ಲ ಓ 'ಹಾಲ'
ಕರುಣಪೂರಿತ ದೃಷ್ಟಿ, ಬೀರಲೇಬೇಕು ಬೇರೆ ದಾರಿಯಿಲ್ಲ

✤ ವೈ. ಬಿ. ಹಾಲಬಾವಿ :
ಟಿ-೫-೨೫೮, ಆರ್.ಟಿ.ಪಿ.ಎಸ್. ಕಾಲೊನಿ, ಶಕ್ತಿನಗರ-೫೮೪ ೧೭೦ (ರಾಯಚೂರು) ✤

ಭೈರಪ್ಪನವರ ಅವಿದ್ಯೆಯ 'ಆವರಣ'

ಆರ್. ತಾರಿಣಿ ಶುಭದಾಯಿನಿ

ಒತ್ತಿ ಹಣ್ಣು ಮಾಡಿದೊಡೆ
ಅದೆತ್ತಣ ರುಚಿಯಪ್ಪುದೋ —ಅಲ್ಲಮ

'ಆವರಣ' ಕಾದಂಬರಿ ಬರುತ್ತಿರುವುದು ಗ್ರಾಹಕ ಸಂಸ್ಕೃತಿಯ ಕಾಲದಲ್ಲಿ. ಅದರ ಮಾರಾಟ, ಮರುಮುದ್ರಣಗಳೆಲ್ಲ ಭರದಿಂದ ಸಾಗುತ್ತಿದ್ದು, ಅದರ ಮೇಲಿನ ಚರ್ಚೆಗಳು ಖಂಡನೆಗಳು, ಭಜನೆಗಳು— ಎಲ್ಲವೂ ಕೃತಿಯ ಮಾರಾಟಕ್ಕೆ ಅನುಕೂಲಕರವಾಗಿ ಪರಿಣಮಿಸುತ್ತಿವೆ. ಇದು ಪ್ರಚಾರತಂತ್ರದ ಕಾಲವೂ ಹೌದು; ಪ್ರಚಾರವಿಲ್ಲದೆ ಯಾವೊಂದು ವಸ್ತುವೂ ಗಮನ ಸೆಳೆಯದೆಂದು ಇಂದಿನ ಗ್ರಾಹಕ ಸಮಾಜದ ನಂಬಿಕೆ. ಇದು ಮಾಯೆ, ಭ್ರಾಂತಿಯ ಸ್ವರೂಪ.

ಹಾಗೆ ನೋಡಿದರೆ ಭೈರಪ್ಪನವರ ಸಾಹಿತ್ಯ ಜನಪ್ರಿಯತೆಯ ಶೈಲಿಯಲ್ಲೇ ಸಾಗುವ ತರ್ಕ ಮತ್ತು ತತ್ತ್ವಗಳನ್ನೊಳಗೊಂಡಿದೆ. ಭೈರಪ್ಪನವರ ತರ್ಕ ಶೈಲಿಯನ್ನು ಮೆಚ್ಚುವ ಎಷ್ಟೋ ಓದುಗರಿದ್ದಾರೆ. ಅವರ ಬಹಳ ಕೃತಿಗಳು ಮರುಮುದ್ರಣಗೊಂಡಿವೆ. ಈ ಬಾರಿಯೂ ಒಂದು ತರ್ಕವನ್ನು ರೂಪಿಸುವ ಭೈರಪ್ಪ, ಅದನ್ನು ರೋಚಕವಾಗಿ ನಿರೂಪಿಸುವ ಪ್ರಯತ್ನ ಮಾಡಿದ್ದಾರೆ. ಆ ಕಾರಣಕ್ಕಾಗಿ 'ಆವರಣ' ಬಿಡುಗಡೆಯಾಗಿ ಅಲ್ಪ ದಿನಗಳ ಅಂತರದಲ್ಲೇ ನಾಲ್ಕೈದು ಮರುಮುದ್ರಣಗಳನ್ನು ಕಂಡಿದೆ.

ಕಾದಂಬರಿಯ ಆರಂಭದಲ್ಲಿ "ಅವಿದ್ಯೆಯು ತಮೋರೂಪಿ. ಆವರಿಸುವಂಥದ್ದು. ಸತ್ಯವನ್ನು ತಪ್ಪಿರುದ್ಧವಾಗಿ ತಿಳಿಸುವುದಲ್ಲದೆ ಸಂದೇಹಕಾರಿ ರೂಪ. ಇದು ವಸ್ತುಸ್ಥಿತಿಯನ್ನು ಗ್ರಹಿಸಲಾರದು", (ಶಂಕರಗೀತಾಭಾಷ್ಯ) ಎನ್ನುವ ಉಲ್ಲೇಖವನ್ನು ಮಾಡಲಾಗಿದೆ. ಇತಿಹಾಸ ಮತ್ತು ಸತ್ಯದ ಶೋಧಗಳು ವಸ್ತುನಿಷ್ಠತೆಯಿಂದ ಕೂಡಿರಬೇಕೆನ್ನುವ ನಿಲುವಿನಿಂದ ಹೊರಡುವ ಕಾದಂಬರಿ ಸ್ವಯಂ ಅವಿದ್ಯೆಗೆ ತುತ್ತಾಗಿ, ಆವರಣಗಳನ್ನು ದಾಟಲಾರದೆ ಹೋಗುವುದು ಒಂದು ಸಾಂದರ್ಭಿಕ ವ್ಯಂಗ್ಯ.

ಭೈರಪ್ಪನವರ ಪ್ರಕಾರ ಇತಿಹಾಸದ ಸುತ್ತ ಮಾಯೆಯ ಜಾಲ ಹರಡಿದೆ. ಮುಸ್ಲಿಮರನ್ನು ಅನಾವಶ್ಯಕವಾಗಿ 'ದಾಳಿಕೋರ' ಎಂಬ ಪಟ್ಟಿಯಿಂದ ತೆಗೆಯಲಾಗಿದ್ದು, ಹಿಂದೂ ಧರ್ಮವನ್ನು ಛೇದನೆ ಮಾಡುವ ಗುಂಪು ತನ್ನನ್ನು ತಾನು 'ಪ್ರಗತಿಶೀಲ' ಎಂದು ಹಣೆಪಟ್ಟಿ ಹಚ್ಚಿಕೊಳ್ಳುತ್ತಿದೆ— ಎಂಬುದು ಅವರ ಆರೋಪ. ಇದನ್ನು ಆಕ್ರಮಣಕಾರಿಯಾಗಿ ನಿರೂಪಿಸುತ್ತಾ 'ಧರ್ಮಶ್ರೀ' ಕಾದಂಬರಿಯಲ್ಲಿನ ನಿಲುವನ್ನು ಇನ್ನಷ್ಟು ಉಗ್ರವಾಗಿ ಪ್ರತಿಪಾದಿಸಲು ಯತ್ನಿಸಿದ್ದಾರೆ. 'ಧರ್ಮಶ್ರೀ' ಕಾದಂಬರಿ ಕಡೇಪಕ್ಷ ಕಥಾಹಂದರವನ್ನಾದರೂ ಹೊಂದಿತ್ತು. ಆದರೆ 'ಆವರಣ'ಕ್ಕೆ ಒಂದು ಕಥಾ ಹಂದರ ಇಲ್ಲ. ಇರುವ ನಾಲ್ಕೈದು ಪಾತ್ರಗಳು ಕಪ್ಪು ಬಿಳುಪಾಗಿ ಇತಿಹಾಸದ ಬಗ್ಗೆ ಕಾದಂಬರಿಕಾರ ತಮ್ಮ ಬಾಯಲ್ಲಿ ಹೇಳಿಸಿದುದನ್ನು ನುಡಿಯುತ್ತವೆ. ಕೋರ್ಟಿನಲ್ಲಿ ನಿಂತು ಒಬ್ಬರ ಪರವಾಗಿ ವಾದಿಸುವ ವಕೀಲರ ದನಿಗಳಂತೆ ಅವು ಕೇಳುತ್ತವೆ. ಇವೆಲ್ಲವು ಭೈರಪ್ಪನವರನ್ನು ಆವರಿಸಿರುವ ಅವಿದ್ಯೆ ಎನ್ನಿಸಿಬಿಡುತ್ತದೆ.

*

‘ಆವರಣ’ವು ಭೈರಪ್ಪನವರ ಎರಡನೆಯ ಐತಿಹಾಸಿಕ ಕಾದಂಬರಿ ಎನ್ನಲಾಗಿದೆ. ಮೊದಲನೆಯದು ‘ಸಾರ್ಥ’. ಅದಕ್ಕೂ ಇದಕ್ಕೂ ಏನಾದರೂ ವ್ಯತ್ಯಾಸವಿದೆಯೇ ಎಂದು ಹುಡುಕಿದರೆ ಏನೂ ಇಲ್ಲ! ‘ಸಾರ್ಥ’ವು ಬೌದ್ಧರನ್ನು ಹೀನಾಯವಾಗಿ ಕಾಣುವಂತೆ ಮಾಡಿದರೆ, ‘ಆವರಣ’ವು ಮುಸ್ಲಿಮರ ಮೇಲೆ ಕಿಡಿ ಕಾರಿದೆ.

‘ಸಾರ್ಥ’ದ ನಾಯಕ ಶ್ರಮಣರ ವಿಧಿವಿಧಾನಗಳನ್ನು ವಿದ್ಯೆಯನ್ನು ಕಲಿಯಲೋಸುಗ ಅವರಲ್ಲಿ ಬಂದು ಸೇರಿಕೊಳ್ಳುತ್ತಾನೆ. ಅವರ ಆಚಾರ ವಿಚಾರಗಳನ್ನೆಲ್ಲ ಕಲಿತ ಮೇಲೆ ಅವನಿಗೆ ಅವರಲ್ಲಿ ಸ್ವಾರಸ್ಯವುಂಟಾಗುವುದಿಲ್ಲ. ಹಿಂದೂ ಧರ್ಮಕ್ಕೆ ಮರಳುವ ಸೂಚನೆಯೊಂದಿಗೆ ಕಾದಂಬರಿ ಮುಗಿಯುತ್ತದೆ. ‘ಆವರಣ’ ಕಾದಂಬರಿಯಲ್ಲಿ ಲಕ್ಷ್ಮೀ ಎನ್ನುವ ಹಿಂದೂ ವಿಚಾರವಾದಿ ಹೆಣ್ಣು ಅಮೀರ ಎಂಬ ಮುಸ್ಲಿಮನನ್ನು ಮದುವೆಯಾಗಿ ರಜಿಯಾ ಕುರೈಶಿ ಆಗುತ್ತಾಳೆ. ಇಸ್ಲಾಮಿನ ರೀತಿ, ರಿವಾಜು ಎಲ್ಲ ಕಂಡ ಮೇಲೆ ಅವಳಿಗೆ ಆ ಧರ್ಮ ಬೇಸರ ಬರುತ್ತದೆ. ಅಷ್ಟು ಹೊತ್ತಿಗೆ ಗಾಂಧೀವಾದಿ ತಂದೆ (ಗಾಂಧೀವಾದಿಯೆಂದರೂ ಅವರು ಹಿಂದೂ ವಾದಕ್ಕೆ ಹೆಚ್ಚು ಹತ್ತಿರವಿದ್ದುದು ತಿಳಿಯುತ್ತದೆ) ಸತ್ತು, ಅವರು ಮಾಡಿಕೊಂಡ ಇತಿಹಾಸದ ಪುಸ್ತಕಗಳ ಬಗೆಗಿನ ಟಿಪ್ಪಣಿಗಳು, ಸಂಗ್ರಹಿಸಿದ ಪುಸ್ತಕಗಳಿಗೆ ಮಾರುಹೋದ ರಜಿಯಾ ಅಪ್ಪನ ಮನೆಯಲ್ಲೇ ಉಳಿದು ಹಿಂದೂ ಧರ್ಮದಲ್ಲಿ ಉಳಿಯುವ ಮನಸು ಮಾಡುತ್ತಾಳೆ. ಮತ್ತು ಹಿಂದೂ ಧರ್ಮದ ಪರವಾಗಿ ದನಿಯೆತ್ತುವ ವಿಚಾರವಂತೆಯಾಗುತ್ತಾಳೆ. ‘ಸಾರ್ಥ’ದಲ್ಲಿ ಶಂಕರಾಚಾರ್ಯರ ಕಥೆ ಉಪಕಥೆಯಾಗಿ ಬಂದರೆ, ಇಲ್ಲಿ ಹಿಂದೂ ರಾಜ ಮುಸ್ಲಿಮರ ಕೈಗೆ ಸೆರೆ ಸಿಕ್ಕು ನಪುಂಸಕನಾಗುವ ಕಥೆ ಉಪಕಥೆಯಾಗಿ ಬಳಕೆಯಾಗಿದೆ.

ಕಥಾಹಂದರ, ಪಾತ್ರಸೃಷ್ಟಿ, ತತ್ತ್ವ ಎಲ್ಲದರಲ್ಲೂ ಒಂದೇ ಎನಿಸುವ ಈ ಎರಡು ಕಾದಂಬರಿಗಳು ಇತಿಹಾಸದ ಕಾಣ್ಕೆಗಿಂತ, ಕೃತಿಯ ಕರ್ತೃವಿನ ದೃಷ್ಟಿಕೋನವನ್ನೇ ಬಯಲು ಮಾಡುವಂತಿವೆ.

*

ಐತಿಹಾಸಿಕ ಕಾದಂಬರಿಗಳಲ್ಲಿ ವಿಶದಪಡಿಸಬೇಕಾದ ಸತ್ಯದ ಬಗ್ಗೆ ಭೈರಪ್ಪನವರು ದನಿ ಎತ್ತಿದ್ದಾರೆ. ಸತ್ಯವು, ಅವರ ಪ್ರಕಾರ, ಮಾಯೆ ಕವಿದ ಕಣ್ಣಿಗೆ ಗೋಚರಿಸುವುದಿಲ್ಲ: ‘ಸಿದ್ಧಾಂತ, ಚಳವಳಿ, ಆದರ್ಶಗಳಿಂದ ಬಿಡಿಸಿಕೊಂಡು ಭೂತದ ಘಟನೆಗಳನ್ನು ವಸ್ತುನಿಷ್ಠವಾಗಿ ನೋಡುವುದೇ ಇತಿಹಾಸವೆಂದು ಈಗ ಅನ್ನಿಸುತ್ತಿದೆ. ವರ್ತಮಾನದ ಆಲೋಚನೆಗಳು ಸೃಷ್ಟಿಸಿರುವ ಭ್ರಾಂತಿಗಳಿಂದ ಬಿಡಿಸಿಕೊಳ್ಳದೆ ಭೂತವು ಅರ್ಥವಾಗುವುದು ಹೇಗೆ? ಭೂತವು ತನ್ನ ಸತ್ಯವನ್ನು ಅದೆಷ್ಟು ಆಕರಗಳಲ್ಲಿ, ಗ್ರಂಥಗಳಲ್ಲಿ, ಕುರುಹುಗಳಲ್ಲಿ, ಭಗ್ನಾವಶೇಷಗಳಲ್ಲಿ ಸ್ಪಷ್ಟವಾಗಿ ತೋರಿಸುತ್ತಿದೆ! ಆದರೆ ವರ್ತಮಾನವು ನಮ್ಮ ಕಣ್ಣುಗಳಿಗೆ ಕಾಮಾಲೆ ಬಡಿಸಿರುವಾಗ ಅದೆಲ್ಲ ತಿರುಚಿಕೊಂಡುಬಿಡುತ್ತದೆ. ಪ್ರಸಕ್ತ ಕಾಲದಲ್ಲಂತೂ ಇತಿಹಾಸಕಾರರು ಇತಿಹಾಸದ ವಸ್ತುವಿಗಿಂತ ಹೆಚ್ಚಾಗಿ ಪ್ರತಿಸ್ಪರ್ಧಿ ಇತಿಹಾಸಕಾರರೊಂದಿಗೆ ಹೋರಾಡಬೇಕಾಗಿದೆ.” (ಪು. ೭೧-೭೨).

ಈ ಮಾತುಗಳನ್ನು ಸರಿಯಾಗಿ ಗಮನಿಸಬೇಕು. ಇಲ್ಲಿ ವಸ್ತುನಿಷ್ಠತೆಯ ಬಗ್ಗೆ, ಆಕರಗಳ ಬಗ್ಗೆ ಮಾತನಾಡುತ್ತಾರೆ. ಸತ್ಯ ಎನ್ನುವುದು ಆಧ್ಯಾತ್ಮಿಕ ನೆಲೆಗಟ್ಟಿನಲ್ಲಿ ನೋಡಲಾಗಿದ್ದು,

ಭೌತವಾದೀ ದೃಷ್ಟಿಕೋನವನ್ನೂ ಪ್ರಸ್ತಾಪಿಸುತ್ತ ಆಕರಗಳ ಬಗ್ಗೆ ಹೇಳುವುದು ಗೊಂದಲ ಮೂಡಿಸುತ್ತದೆ. ಭೌತ ನಿಯಮಗಳ ಪ್ರಕಾರ ಸತ್ಯ ಸಾಪೇಕ್ಷವಾದುದು. ಕಾಲ ದೇಶಗಳಿಗೆ ತಕ್ಕುದಾಗಿ ಪುನರ್ ನಿರ್ಧರಣಗೊಳ್ಳುವ ಸಾಧ್ಯತೆಗಳಿರುವಂತಹದ್ದು. ಇತಿಹಾಸಕಾರ ಪ್ರೊ. ಎಸ್. ಶೆಟ್ಟರ್ ಅವರು ಒಂದೆಡೆ ಹೇಳಿದಂತೆ, "ದಾಖಲೆಗಳೇ ಚರಿತ್ರೆಯಲ್ಲ, ವ್ಯಾಖ್ಯಾನಿಸಿದಾಗ ಮಾತ್ರ ಇತಿಹಾಸ ರೂಪುಗೊಳ್ಳುವುದು. ಅಂದರೆ **ದಾಖಲೆ ಮತ್ತು ಇತಿಹಾಸದ ನಡುವೆ ವ್ಯಾಖ್ಯಾನಕಾರನೊಬ್ಬನಿರುವನು** ಎಂದರ್ಥ. ಇವನ ಮನಮೂಸೆಯಿಂದ ಹೊರಹೊಮ್ಮುವ ದಾಖಲೆಯು ಇತಿಹಾಸ ದಲ್ಲಿ ಹೊಸ ಸ್ವರೂಪವನ್ನು ಪಡೆದುಕೊಳ್ಳುವುದು. ಇದರಿಂದಾಗಿ ಇತಿಹಾಸದ ನಿರ್ಣಯಗಳು ವಿವಾದಾತ್ಮಕವಾಗುವುವು". ಹೀಗಿರುವಾಗ ಇತಿಹಾಸ ಏಕರೂಪ ಶಿಲೆಯಲ್ಲ, ಅದಕ್ಕೆ ಬೇರೆ ಬೇರೆ ವ್ಯಾಖ್ಯಾನಗಳು ಸಾಧ್ಯವಿದೆ ಎಂದಾಗುತ್ತದೆ. ಅದು ತಾಳೆಗರಿ, ಶಾಸನ, ಪುಸ್ತಕಗಳಲ್ಲಿ ಅಡಗಿರುವ ದಾಖಲೆಗಳ ವಿವರ ಮಾತ್ರ ಅಲ್ಲ. ಅವೆಲ್ಲವನ್ನು ಓದುವವನ ಕಾಲ ದೇಶಗಳ ಪರಿಮಿತಿಗೆ, ಪ್ರಭಾವಕ್ಕೆ ಒಳಪಡುವ ಸಾಧ್ಯತೆಗಳಿವೆ. ಹೀಗಾಗಿ ಚರಿತ್ರೆ ಎನ್ನುವುದು 'ಕಟ್ಟುವಿಕೆ'; ರಚನೆಯಾಗುತ್ತಲೇ ಇರುವ ಸಂಗತಿ. ಇದನ್ನು 'ಸತ್ಯ' ಎನ್ನುವುದು ಅತ್ಯಂತಿಕ ದರ್ಶನ ಎನ್ನಲಾಗದು. ವೈಜ್ಞಾನಿಕ ದೃಷ್ಟಿಕೋನದ ಸಾಧ್ಯತೆಯೇ ಇಲ್ಲಿ ಇಲ್ಲವಾಗುತ್ತದೆ. ಭೈರಪ್ಪನವರಿಗೆ ಇತಿಹಾಸ ಅನಾದಿಯಾಗಿ ತೋರುತ್ತದೆಯೇ ಹೊರತು, ಅದರ ಗತಿಶೀಲತೆ ಕಾಣುವುದಿಲ್ಲ.

*

ಭಾರತದ ಚರಿತ್ರೆಯನ್ನು ಅವಲೋಕಿಸಿದಾಗ ಬ್ರಿಟಿಷ್ ವಸಾಹತುಶಾಹಿಯ ದೃಷ್ಟಿಕೋನದಿಂದ ಚರಿತ್ರೆಯ ರಚನೆಯಾಗಿದ್ದು ಎಂದು ತಿಳಿಯುತ್ತದೆ. ನಂತರ ಇತಿಹಾಸದ ಪುನರ್ರಚನೆಯ ಸಂದರ್ಭವೂ ಬಂದಿತು. ವಸಾಹತುಶಾಹೀ ದೃಷ್ಟಿಕೋನಗಳಿಂದ ಬಿಡಿಸಿಕೊಂಡು ಚರಿತ್ರೆಯನ್ನು ಕಟ್ಟಬೇಕಾದ ತುರ್ತು ಸಮಕಾಲೀನ ಸಮಾಜಕ್ಕೆ ಅಗತ್ಯವೆನಿಸಿತು. ವಸಾಹತುಶಾಹಿ ನೋಡುವ ಕ್ರಮದಲ್ಲಿ ತೆಗಳಿಕೆ, ಹೊಗಳಿಕೆಗೆ ಅಂತಹ ವ್ಯತ್ಯಾಸಗಳೇನು ಇಲ್ಲ. ಇದರಿಂದ ಮುಕ್ತವಾಗಿ ಚರಿತ್ರೆ ಕಟ್ಟಬೇಕಾದ ಜವಾಬ್ದಾರಿ ಇದ್ದಿತು. ಅಂಬೇಡ್ಕರ್‌ರಂತಹ ಚಿಂತಕರು ಇತಿಹಾಸದ ಆಕರಗಳನ್ನು ಶೋಧಿಸಿ ಸಂವಿಧಾನದ ಚೌಕಟ್ಟುಗಳನ್ನು ರೂಪಿಸಬೇಕಾಯಿತು. ಆದರೆ ಹಿಂದೂವಾದವು ಉತ್ಕರ್ಷಗೊಳ್ಳುತ್ತ ಬಂದಂತೆಲ್ಲ ಅಕಾಡೆಮಿಕ್ ದೃಷ್ಟಿಕೋನವನ್ನು ಬದಿಗೊತ್ತಿ ಹಿಂದುತ್ವದ ಆಧಾರದ ಮೇಲೆ ಚರಿತ್ರೆಯನ್ನು ಕಟ್ಟಬಯಸಿತು. ಅದರಲ್ಲೂ ಗಾಂಧೀ ಪತನಾನಂತರ ಬೆಳೆಯುತ್ತ ಬಂದ ಹಿಂದುತ್ವವಾದವು ಇತ್ತೀಚಿನ ದಿನಗಳಲ್ಲಿ ಜನಮಾನ್ಯತೆಯನ್ನು ಪಡೆಯುವಲ್ಲಿ ಇತಿಹಾಸದ ನೆರವು ಅಗತ್ಯವೆಂದು ಮನಗಂಡಿತ್ತು. 'ಅನ್ಯಗೊಳಿಸಿಕೊಳ್ಳುವಿಕೆ'ಯಿಂದ ಇತಿಹಾಸದ ರಚನೆ ಮಾಡತೊಡಗಿತು. ಜನಾಂಗೀಯವಾದವನ್ನು ಪ್ರತಿಪಾದಿಸುತ್ತ, ದ್ವೇಷವನ್ನು ತತ್ತ್ವವಾಗಿಸಿಕೊಂಡ ಹಿಟ್ಲರ್‌ನ ನಾಜೀ ಪಂಥದಂತೆ ರಾಜಕೀಯ ಸ್ವರೂಪವೂ ಹಿಂದುತ್ವಕ್ಕೆ ಲಭಿಸತೊಡಗಿದಾಗ, ಇತಿಹಾಸವೇ ಪ್ರಭುತ್ವದ ನಿರ್ಮಾಣ ಶಕ್ತಿಯಾಯಿತು. ಆರ್ಯರು ಆಕ್ರಮಣಕಾರರು ಎಂಬುದನ್ನು ಮರೆಸಿ, ಹತ್ತನೆಯ ಶತಮಾನದ ನಂತರ ಬಂದ ಮುಸ್ಲಿಮರು ಮಾತ್ರ ಆಕ್ರಮಣಕಾರರು ಎಂಬಂತೆ ಅನ್ಯಗೊಳಿಸಿಕೊಳ್ಳುವ ಪ್ರಕ್ರಿಯೆ ಶುರುವಾಯಿತು. ಭೈರಪ್ಪನವರ 'ಆವರಣ'ವು ಚರ್ಚಿಸುವುದು ಇದನ್ನೇ : "ತಮ್ಮ

ಸಾಮ್ರಾಜ್ಯವನ್ನು ಸಮರ್ಥಿಸಿಕೊಳ್ಳಲು ಆರ್ಯರೂ ವಾಳಿಕೋರರೇ ಎಂಬ ಸಿದ್ಧಾಂತವನ್ನು ಬ್ರಿಟಿಷರು ಆರಂಭಿಸಿದರು. ಆರ್ಯರದು ದ್ರಾವಿಡರದು ಎಂದು ಪ್ರತ್ಯೇಕವಾಗಿ ವಿಂಗಡಿಸಬಹುದಾದ ನಾಗರಿಕತೆಯು ಭಾರತದಲ್ಲಿಲ್ಲ" (ಪು. ೨೩೫). "......ಧರ್ಮಶಾಸ್ತ್ರಕಾರರನ್ನು ಅತಿ ಪ್ರಾಚೀನ ಕಾಲದ ವೇದೋಪನಿಷತ್ತುಗಳನ್ನು ಬೈಯುವ ಸುಳ್ಳು ಇತಿಹಾಸವನ್ನು ಪ್ರಚಾರ ಮಾಡುವ ಬದಲು ಒಂದು ಸಾವಿರ ವರ್ಷದಿಂದ ಈ ದೇಶವನ್ನು ನಿರ್ವೀರ್ಯಗೊಳಿಸುತ್ತ ಬಂದವರನ್ನೇಕೆ ಹೆಸರಿಸುವುದಿಲ್ಲ?" (ಪು. ೨೩೪). ಇವನ್ನು ಇಲ್ಲಿ ಗಮನಿಸಬಹುದು.

*

ಇಲ್ಲಿ ರಾಜಾರಾಂ ಹೆಗಡೆಯವರು 'ಹಿಸ್ಟರಿ'ಯ ಬಗ್ಗೆ ಕೊಡುವ ವ್ಯಾಖ್ಯಾನವನ್ನು ಗಮನಿಸುವುದಾದರೆ, "ವಸಾಹತುಶಾಹಿಯ ನಂತರ ನಾವು ಅಳವಡಿಸಿಕೊಂಡ ಪಾಶ್ಚಾತ್ಯ 'ಹಿಸ್ಟರಿ' ಸಂಪ್ರದಾಯದಲ್ಲಿ 'ಹಿಸ್ಟರಿ' ಎನ್ನುವುದು ವರ್ತಮಾನದ ಕಾರ್ಯಕ್ರಮವಾಗಿ ವಸಾಹತುಗಳಲ್ಲಿ ಅಸ್ತಿತ್ವಕ್ಕೆ ಬಂದಿದೆ. ಇತಿಹಾಸ ಕಾಲದಲ್ಲಿ ಮನುಷ್ಯನ ವಿಕಾಸದ ವಿಭಿನ್ನ ಹಂತಗಳಿದ್ದು ವರ್ತಮಾನದಲ್ಲಿ ನಿಂತು ನೋಡಿದಾಗ ಅವೆಲ್ಲ ತಿದ್ದುಪಡಿಯಾದ, ಆಗಬೇಕಾದ ಕಚ್ಚಾ ಪ್ರತಿಗಳು ಎಂಬ ಗ್ರಹಿಕೆ ಈ 'ಹಿಸ್ಟರಿ'ಗೆ ಇದೆ. ವಸಾಹತು ಭಾರತವೇ ಈ ರೀತಿ ತಿದ್ದುಪಡಿಗೆ ಕಾಯುತ್ತಿರುವ ಗತಕಾಲವಾಗಿ ಕೂಡ ಪಾಶ್ಚಾತ್ಯರಲ್ಲಿ ಒಂದು ಸಂಪ್ರದಾಯದ ಇತಿಹಾಸಕಾರರಿಗೆ ಕಂಡಿದೆ..... ಇವೆಲ್ಲ ಗ್ರಹಿಕೆಗಳು ರಾಜಕೀಯದ ಕಾರ್ಯಕ್ರಮಗಳಾಗುತ್ತವೆ. ಹಾಗೂ ಪ್ರಭುತ್ವವನ್ನು ನಿರ್ಮಾಣ ಮಾಡುವ ಶಕ್ತಿಯಾಗುತ್ತವೆ." ಪುನರ್‌ವಿಂಗಡಣೆಯು ಹೀಗೆ ಪ್ರಭುತ್ವದ ನಿರ್ಮಾಣದ ಹಂತದಲ್ಲಿ ಬಲವಾಗುವ ಪ್ರಕ್ರಿಯೆಯಲ್ಲಿ ತೊಡಗಿರುವುದನ್ನು ಹಿಂದುತ್ವವಾದವು ತೋರುತ್ತಿದೆ. ಆದ್ದರಿಂದಲೇ ಭೈರಪ್ಪ ಇತಿಹಾಸದ 'ದರ್ಶನ'ಕ್ಕೆ ಹಂಬಲಿಸುವುದು. ಇಲ್ಲಿ ಪ್ರಜಾಪ್ರಭುತ್ವದ ಅಂಶಗಳೇ ಕಾಣೆಯಾಗುತ್ತವೆ. ಏಕಮುಖಿ ನಿಷ್ಠೆ ತತ್ತ್ವಕ್ಕೆ ಬದ್ಧರಾಗಿರುವುದನ್ನು ಸೂಚಿಸುತ್ತ ಬೇರೆ ದೃಷ್ಟಿಕೋನಗಳ ಬಗ್ಗೆ ಕುರುಡಾಗಿ ಮಾಡುತ್ತದೆ. ಸಮಕಾಲೀನ ಉದಾಹರಣೆಯನ್ನು ತೆಗೆದುಕೊಳ್ಳುವುದಾದರೆ, ಹಳೆಯ ಮಾತೃಭೂಮಿಗೆ ಆಶಿಸಿ, ವಾಪಾಸು ಬಂದ ಇಸ್ರೇಲಿಗಳು ದೇಶ ಕಟ್ಟಿದ ಮೇಲೆ ನಡೆದ ಜನಾಂಗೀಯ ಕಲಹಗಳಲ್ಲಿ ತೊಡಗಿಕೊಂಡು ತಮ್ಮ ಹಳೆಯ 'ಭೂತ'ವನ್ನು ಸರಿಪಡಿಸಿಕೊಳ್ಳುವ ಸಾಹಸದಲ್ಲಿದ್ದಾರೆ. 'ಆವರಣ'ದಲ್ಲಿ ಭೈರಪ್ಪ ಅನುಸರಿಸಲೆತ್ನಿಸುವುದು ಇದೇ ತಂತ್ರ : ಇತಿಹಾಸವನ್ನು 'ಹಿಸ್ಟರಿ'ಯಾಗಿ ರೂಪಿಸಿಕೊಳ್ಳುವ ತಂತ್ರ. ಅಂದು ಆದ ಅನ್ಯಾಯಗಳಿಗೆ ಇಂದು ನ್ಯಾಯ ಕೇಳುವ ತೋಳ ಕುರಿಮರಿಯ ಜಾಣ್ಮೆಯ ತಂತ್ರ.

*

'ಆವರಣ'ದಲ್ಲಿ ಮುಸ್ಲಿಮರು ಈ ದೇಶಕ್ಕೆ ಮಾಡಿರುವ ಅನ್ಯಾಯಗಳನ್ನು ರೋಚಕವಾಗಿ ವಿವರಿಸಲಾಗಿದೆ. ಅವರು ವಿಗ್ರಹಭಂಜಕರು, ಕ್ರೂರಿಗಳು, ಲೈಂಗಿಕ ವಿಕೃತಿಗಳಲ್ಲಿ ನಿರತರಾದವರು ಎಂಬಂತೆ ಅವರನ್ನು ಚಿತ್ರಿಸಲಾಗಿದೆ. ಲಕ್ಷ್ಮಿ ಅಮೀರನನ್ನು ಮದುವೆಯಾಗುವುದಾಗಿ ಹೇಳಿದಾಗ, ಅವಳ ತಂದೆ ಹೇಳುವ ಮಾತು ನೋಡಬೇಕು : "......ನಿನ್ನ ಹೊಟ್ಟೇಲಿ ಹುಟ್ಟುವ ಮಗುವ್ರೋ ಅವರ ಮಗುವ್ರೋ ಯಾವುದೋ ಒಂದು ತಲೆಮಾರಿನ ಮಗುವು ನಮ್ಮ ದೇವಸ್ಥಾನಗಳನ್ನು

ಒಡೆದು ನಾಶ ಮಾಡುತ್ತೆ. ಅದರ ಪಾಪ ನಿನಗ ತಟ್ಟುತ್ತೆ..... [illegible] ಅವರ ಧರ್ಮವೇ ಹೇಳುವಾಗ ಅವರು ಅವರಂತೆ ನಡೆಯಬೇಕಾಗಿಲ್ಲವೆ? ಆ ಧರ್ಮ ಇವತ್ತಿಗೂ ಬದಲಾಗಿಲ್ಲ.....” (ಪು. ೧೯).

ಇನ್ನು ಲಕ್ಷ್ಮಿ ತನ್ನ ಅಪ್ಪ ಮಾಡಿಕೊಂಡ ಇತಿಹಾಸದ ಟಿಪ್ಪಣಿಗಳನ್ನು ನೋಡಿ, ಅವರು ಸಂಗ್ರಹಿಸಿದ ಇತಿಹಾಸದ ಪುಸ್ತಕಗಳನ್ನು ಓದಿ ಅಧ್ಯಯನ ಮಾಡುತ್ತ ಅದೇ ಸತ್ಯ ಎನ್ನುವ ತೀರ್ಮಾನಕ್ಕೆ ಬರುತ್ತಾಳೆ. ಕಾಶಿಗೆ ಬಂದಾಗ ಇಡೀ ಇತಿಹಾಸವೇ ಛಿನ್ನವಾಗಿದ್ದಂತೆ ಕಾಣುತ್ತದೆ. ಒಬ್ಬ ಬ್ರಾಹ್ಮಣನನ್ನು ಮಾತನಾಡಿಸಿದರೆ, ಅವನು ಮುಸ್ಲಿಮರು ಬಾಯಲ್ಲಿ ಎಂಜಲು ಹಾಕಿ ಜಾತಿ ಕೆಡಿಸುತ್ತಿದ್ದ ಸಂಗತಿ ಹೇಳುತ್ತಾನೆ. ಇಂತಹ ದನಿಗಳನ್ನು ಗುರುತಿಸುವ ಪ್ರಮೇಯವೂ ಇತಿಹಾಸಕ್ಕಿದೆ ಎಂದು ಅವಳು ತೀರ್ಮಾನಿಸುತ್ತಾಳೆ.

ಬೇರೆ ಎಲ್ಲ ರಾಜರಂತೆ ಮುಸ್ಲಿಂ ದೊರೆಗಳಿಗೂ ಧರ್ಮವು ರಾಜಕಾರಣದ ಭಾಗವಾಗಿರ ಬಹುದು. ಗೆದ್ದ ರಾಜರ ಧರ್ಮವು ತನ್ನಿಂತಾನೇ ಸೋತವರ ಮೇಲೆ ಹೇರಲ್ಪಡುತ್ತಿದ್ದುದು ಇತಿಹಾಸದಲ್ಲಿ ಕಾಣುತ್ತೇವೆ. ಇದು ಲೌಕಿಕ ಅನುಕೂಲಗಳ ಪ್ರಶ್ನೆಯೇ ಹೊರತಾಗಿ ಅಲೌಕಿಕ ಧರ್ಮದ್ದಲ್ಲ. ರಾಜಾರಾಂ ಹೆಗಡೆ ಪ್ರತಿಪಾದಿಸುವ ಲೌಕಿಕ ರಾಜಕಾರಣದ ನಿಯಮ ಇದೇ ಆಗಿದೆ. ಮತಧರ್ಮಗಳ ‘ಥಿಯೋಕ್ರಾಟಿಕ್’ ಪ್ರಭುತ್ವ ಭಾರತದಂತಹ ಧಾರ್ಮಿಕ ಬಹುತ್ವ, ಜಾತಿ ಪದ್ಧತಿಗಳೆಲ್ಲ ಒಟ್ಟಾಗಿ ಕೆಲಸ ಮಾಡುವ ದೇಶಕ್ಕೆ ಸಾಧ್ಯವಿಲ್ಲ. ಒಮ್ಮತದ ಧಾರ್ಮಿಕ ನೀತಿ ಸಾಧ್ಯವಿಲ್ಲದ ಕಾರಣ, ಆಯಾ ಸಂದರ್ಭಕ್ಕನುಗುಣವಾಗಿ ರಾಜಕಾರಣದ ನೀತಿಯಾಗಿ ಅದು ಕಾಣಿಸಿಕೊಳ್ಳುತ್ತಿತ್ತು. ರಾಣಿ ಎಲಿಜಬೆತ್ ಕಾಲದ ಇಂಗ್ಲೆಂಡಿನಲ್ಲಿ ಕ್ಯಾಥೊಲಿಕ್ ಮತ್ತು ಪ್ರಾಟಸ್ಟಂಟ್‌ರಿಗು ಅಂತರ್‌ಕಲಹ ಇತ್ತು. ರಾಣಿ ಯಾರ ಪರವನ್ನೂ ವಹಿಸದೆ, ಯಾರ ವಿರೋಧವನ್ನೂ ಕಟ್ಟಿಕೊಳ್ಳದೆ ಉಳಿದಿದ್ದರಿಂದ ಸುಭಿಕ್ಷವಾಗಿ ದೇಶ ಆಳಿದಳು. ಇಲ್ಲಿ ಮಾಸ್ತಿಯವರ ‘ಪಂಡಿತನ ಮರಣಶಾಸನ’ ಕತೆಯನ್ನು ನೆನಪು ಮಾಡಿಕೊಳ್ಳುವುದಾದರೆ, ಒಡೆಯರ್ ಕಾಲದಲ್ಲಿ ನಡೆದ ವ್ಯಾಜ್ಯವೊಂದನ್ನು ಮಾಸ್ತಿ ಬಗೆಹರಿಸುವ ರೀತಿ ಪ್ರಜ್ಞಾವಂತಿಕೆ ಯಿಂದ ಕೂಡಿದೆ ಎನ್ನಬಹುದು. ಘೋರಿ, ಘಜ್ನಿಗಳ ಕಾಲದಲ್ಲಿ ಲೂಟಿಯ ಉದ್ದೇಶವಿತ್ತು. ಆನಂತರ ಇಲ್ಲೇ ನೆಲೆಯೂರಿದ ಮುಸ್ಲಿಂ ದೊರೆಗಳು ತಮ್ಮ ಲೌಕಿಕ ರಾಜಕಾರಣದ ಜೊತೆಗೆ ಧರ್ಮದ ಪ್ರಚಾರವನ್ನೂ ಮಾಡಿಕೊಂಡಿದ್ದರು. ಮುಂದೆ ಈ ರೀತಿಯನ್ನೇ, ಬ್ರಿಟಿಷ್ ಸಾಮ್ರಾಜ್ಯಶಾಹಿಯೂ ಅನುಸರಿಸಿತು.

*

ಕಾದಂಬರಿಯಲ್ಲಿ ಮುಸ್ಲಿಮ್ ಸೈನಿಕರ ಲೈಂಗಿಕ ವಿಕೃತಿಗಳ ಬಗ್ಗೆ ಬೆಳಕು ಚೆಲ್ಲಲು ಹಿಂದೂ ರಾಜಕುಮಾರನ ಉಪಕಥೆಯನ್ನು ಪೋಣಿಸಲಾಗಿದೆ. ಸಲಿಂಗಕಾಮ, ಲೈಂಗಿಕ ವಿಕೃತಿಗಳು, ಹಿಂದೂ ರಾಜರನ್ನು ನಪುಂಸಕರನ್ನಾಗಿಸುವ ಕ್ರಿಯೆಗಳು ಇವೆಲ್ಲವನ್ನು ವಿವರವಾಗಿ ಬರೆಯಲಾಗಿದೆ. ಆದರೆ ಚರಿತ್ರೆಯ ಅವಲೋಕನ ಮಾಡಿದರೆ ಸೈನಿಕರ ಲೈಂಗಿಕ ವಿಕೃತಿಗಳು ಸರ್ವೇಸಾಮಾನ್ಯ ಎನ್ನುವಂತಿವೆ. ಲೋಹಿಯಾ ಸೆರಮನೆಯಲ್ಲಿದ್ದಾಗ ಕಾಣುವಂತೆ, ಸೈನಿಕರು ಎಳೆಜಿಂಕೆಗಳನ್ನು ಲೈಂಗಿಕ ತೃಷೆಗೆ ಬಳಸಿಕೊಳ್ಳುತ್ತಿದ್ದರಂತೆ. ಇತ್ತೀಚಿನ ಸಂಗತಿಗಳನ್ನು ಇಲ್ಲಿ

ಪ್ರಸ್ತಾಪಿಸುವುದಾದರೆ, ಮಣಿಪುರಿ ಹುಡುಗಿಯರ ಮೇಲಿನ ಸಾಲು ಅತ್ಯಾಚಾರ, ವೀರಪ್ಪನ್ ಹಿಡಿಯಲು ಬಂದ ಸೈನಿಕರು ನಡೆಸಿದ ಅತ್ಯಾಚಾರಗಳು ಲೈಂಗಿಕ ವಿಕೃತಿಗೆ ಉದಾಹರಣೆಗಳು. ಭೈರಪ್ಪನವರು ನೋಡುವಂತೆ ಅದು ಒಂದು ಸಮುದಾಯದ ಸೈನಿಕರ ಕೃತ್ಯಗಳು ಮಾತ್ರವಲ್ಲ.

*

ಪ್ರಗತಿಪರತೆಯೆನ್ನುವುದು ಏನು ಎಂಬುದನ್ನು ಭೈರಪ್ಪ ಪ್ರಶ್ನಿಸುವ ಮೂಲಕ ಒಂದು ಗುಂಪಿನ ದೃಷ್ಟಿಕೋನವನ್ನು ಇನ್ನಷ್ಟು ಪ್ರಜ್ವಲಿಸುವಂತೆ ಮಾಡುತ್ತಾರೆ. ಇದೂ ಒಂದು ಅವಿದ್ಯೆಯೆನ್ನಬಹುದು. ಪಾತ್ರಗಳನ್ನು ಅಣಕು ಪಾತ್ರಗಳಾಗಿಸುವ ಮೂಲಕ ಪ್ರಗತಿಪರತೆ ಎನ್ನುವುದು ಸುಳ್ಳಿನ ಮೇಲೆ ನಿಂತಿದೆ ಎಂದು ತೋರಿಸಲು ಹೊರಡುತ್ತಾರೆ.

ಲಕ್ಷ್ಮೀ ಈ ಕಾದಂಬರಿಯ ನಾಯಕಿ ಅಂತರ್‌ಧರ್ಮೀಯ ಮದುವೆ ಮಾಡಿಕೊಂಡು ಸಫಲಗೊಳ್ಳದೇ ವಾಪಾಸು ಹಿಂದೂ ಧರ್ಮಕ್ಕೆ ಹೋಗುತ್ತಾಳೆ. ಶಾಸ್ತ್ರಿಯ ಪಾತ್ರವೂ ಅಷ್ಟೇ. ಅಂತರ್‌ಧರ್ಮೀಯ ಮದುವೆಯಾಗಿ ಹಿಪಾಕ್ರಸಿಯಲ್ಲಿ ಬದುಕುವ ಪಾತ್ರ ಅದು. ಶಾಸ್ತ್ರಿಯ ತಾಯಿ ಸತ್ತಾಗ ತಲೆ ಬೋಳಿಸಿಕೊಂಡು, ಅದಕ್ಕೆ ಬೇರೆ ಸುಳ್ಳು ಹೇಳುವ ಶಾಸ್ತ್ರಿ ಪೂರ್ಣ ಪ್ರಮಾಣದ ವಿಚಾರವಾದಿ ಅಲ್ಲ ಎನ್ನುವುದು ವಿಶದಗೊಳ್ಳುತ್ತದೆ. ಆದರೆ ಭೈರಪ್ಪ ಇವರನ್ನು ಹುಸಿ ಎಂದು ತೋರಿಸುವಲ್ಲಿ ಯಶಸ್ವಿಯಾದರೂ, ಅವರು ಒಪ್ಪುವ ಹಿಂದೂ ಧರ್ಮದಲ್ಲಿ ಕೆಲವು ಜಾತೀಯ ಆಚರಣೆಗಳಿವೆ. ವರ್ಣಾಶ್ರಮ, ವರ್ಗಗಳ ತರತಮದಿಂದ ಹಿಂದೂ ಧರ್ಮ ಮುಕ್ತವಾಗಿಲ್ಲ ಎನ್ನುವುದು ಲಕ್ಷ್ಮಿಯ ಮನೆಯ ಕೆಲಸದವರು ಅವಳನ್ನು ಹಿಂದೂ ಆದ ಮೇಲೆ ಸ್ವೀಕರಿಸುತ್ತಾರೆ. ಶಾಸ್ತ್ರಿಗಳ ಶುದ್ಧಿ, ಪ್ರಾಯಶ್ಚಿತ್ತ ಕಾರ್ಯಕ್ರಮಗಳನ್ನು ಅಷ್ಟು ಸುಲಭವಾಗಿ ಒಪ್ಪಿಕೊಳ್ಳಲಾಗುವುದಿಲ್ಲ. ಹೀಗೆ ಹಿಂದೂತ್ವದ ಮಾಯೆ ಭೈರಪ್ಪನವರನ್ನು ಆವರಿಸಿರುವುದರಿಂದ ಅವರು ಪ್ರಗತಿಶೀಲತೆಯನ್ನು ಅವಿದ್ಯೆ ಎಂದು ಕರೆಯುತ್ತಾರೆ ಎಂದು ತಿಳಿಯಬೇಕಾಗಿದೆ.

*

ಕಲಾಕೃತಿಯೊಂದು ಬಹುಮುಖಿಯಾದ ಚರ್ಚೆಗೆ ತೆರೆದುಕೊಳ್ಳುವಂತಿರಬೇಕು. ಅದು ನಮ್ಮನ್ನು ರಂಜಿಸುತ್ತಲೇ, ಸೂಕ್ಷ್ಮವಾಗಿ ಸಂವೇದನೆಗಳನ್ನು ಜಾಗೃತಗೊಳಿಸಬೇಕು. 'ಆವರಣ'ವು ಅಗ್ಗದ ರಂಜನೆಯನ್ನೇ ಪ್ರಧಾನವಾಗಿರಿಸಿಕೊಂಡು, ಕಲಾಸೃಷ್ಟಿಯ ತತ್ತ್ವವನ್ನೇ ಮರೆಯುತ್ತಿದೆ. ಈ ಕಾದಂಬರಿಗೊಂದು ನಿರ್ದಿಷ್ಟ 'ಪ್ಲಾಟ್' ಎಂಬುದಿಲ್ಲ. ಸಡಿಲ ನಿರೂಪಣೆ, ಉದ್ದುದ್ದ ಭಾಷಣಗಳು, ಅಣಕುಗೊಂಡ ಪಾತ್ರಗಳು, ಕಪ್ಪು ಬಿಳುಪಿನಂತೆ ಇತಿಹಾಸವನ್ನು ವಿವೇಚಿಸುವ ಕ್ರಮ, ಲೈಂಗಿಕ ವಿಕೃತಿಗಳನ್ನು ವರ್ಣಿಸುವ ಮೂಲಕ ಕೀಳು ಅಭಿರುಚಿಯ ಪುಸ್ತಕವನ್ನು ಭೈರಪ್ಪನವರಿಂದ ನಿರೀಕ್ಷಿಸಿದಂತಾಗಿದೆ. ಇದೊಂದು 'tract' (ಧಾರ್ಮಿಕ ಪ್ರಚಾರ ಕೃತಿ) ಆಗಿದ್ದು, ಸಮಕಾಲೀನ ಯುಗದಲ್ಲಿ ಅಭಿರುಚಿ ಹೀನತೆಯನ್ನು ಇನ್ನಷ್ಟು ಕೆಡಿಸುವಂಥದ್ದಾಗಿದೆ. ಅತ್ತ ಸಾಹಿತ್ಯವೂ ಅಲ್ಲ, ಇತ್ತ ಇತಿಹಾಸವೂ ಅಲ್ಲ ಎಂಬಂತಾಗಿ, ಕಲ್ಪನೆಯ ವಿಕೃತಿಯೇ ಇಲ್ಲಿ ಮೆರೆದಿದೆ.

✤ ಆರ್. ತಾರಿಣಿ ಶುಭದಾಯಿನಿ : ಇಂಗ್ಲಿಷ್ ಉಪನ್ಯಾಸಕಿ
'ಆತ್ಮೀಯ', ೨೭೦ ಎ, ಫಿಲ್ಬರ್ ಹೌಸ್ ರಸ್ತೆ, ಚಿತ್ರದುರ್ಗ-೫೭೭ ೫೦೧

✤

ಸಲಿಲದೊಂದಿಗೆ ಸಲ್ಲ ಸಲುಗೆ

ಚನ್ನಪ್ಪ ಅಂಗಡಿ ಬಮ್ಮನಹಳ್ಳಿ

೧

ತಂಬಿಗೆಯೊಳಗಿನ ನೀರು ಹಿಂಗಿಂಗೆ
ಇದೆಯೆಂದು ನಂಬಿಕೆ ಹುಟ್ಟುತ್ತಿಲ್ಲ
ಕೊಂಬು ಮೂಡಿದ ಬಾಲಹುಳು
ಲಂಬವಾಗಿ ನಿಂತಿರುವದಕೆ ಇಂಬು ಸಿಕ್ಕಿದೆ.
ನೀರು ನೀರನಷ್ಟೇ ಅಲ್ಲ ತನ್ನೊಳಗೆ
ಮುಳುಗಿಸಿಕೊಂಡಿದೆ ಬೇರೇನನ್ನೊ
ಎನ್ನುವ ಬೈರಿಗೆ ತಲೆಯ ಹೊಕ್ಕಿದೆ.
ಬುರಗ ಸೆರಗು ಹೊದ್ದು ಮೇಲಕುಕ್ಕಿದೆ.

ಕೊಳದೊಳಗಿನ ನೀರಿಗೆ ಕಳೆದವರ
ಕೊರಳಿಗೆ ತಂಪೆರೆಯುವ ಕಳಕಳಿಯಲ್ಲ
ಪಾತ್ರೆಗಾಗಿದೆ ಸವಕಳಿ- ತುಂಬಿಕೊಂಡಿದೆ ಹಳಾಹಳಿ
ತೂತಾಗಲದೆಂಥ ಕಾರಣ ಬೇಕು ಹೇಳಿ.

೨

ತಂಬಿಗೆ ಕೊಳಗಳ ಕಲರವ ಒತ್ತಟ್ಟಿಗಿರಲಿ
ಸಾಗರವ ನೋಡೋಣ ಬನ್ನಿ ಕೂತು ಮರಳಲಿ
ಭೋರ್ಗರೆವ ತೆರೆದೋರಿ ಹಾಕುತಿದೆ ಧಮಕಿ;
ಮರಳಿ ಕೊಂಡೊಯ್ಯಲು ತನ್ನೊಳಗೆ
ಕಾಲಡಿಯ ಮರಳ ಬಿಡದಂತೆ ಬಾಕಿ.

ದಿಗಂತಕಂಟಿದ ಜಲರಾಶಿಯನು ಏರಿಳಿಸಿ
ಉಯ್ಯಾಲೆಯಾಡುತಿದೆ ಒಳ ಹೊರಗೆ
ತಾಳ ಹಾಕುತ ತನ್ನ ಪಾಡಿನ ಹಾಡಿಗೆ.

ಸಮುದ್ರ ತಟದಲಿ ನೀರಡಿಕೆಯ ಬೈರಾಗಿ–
ಛಿದ್ರ ಛಿದ್ರವಾದೀತು ದಾಹ ತಣಿಸುವ ಕನಸು
ಹಿಂಡು ಜೀವಗಳ ನುಂಗಿ ನೀರು ಕುಡಿಯುವ ಮನಸು
ಹಿಂಡಿ ನೋಡುತಿದೆ ಭುಗಿಲೆದ್ದ ತೆರೆ ಬಾಗಿ.

೩

ಇಲ್ಲಿ ಹೊಳೆಯುತಿವೆಯೆಲ್ಲವೂ ಕಳೆಯುತಿರುವ
ಮೌಲ್ಯಗಳನು ಕಸದ ಬುಟ್ಟಿಗೆ ಇಳಿಬಿಟ್ಟು
ಚೆಂದದಂಗಡಿಯ ನಿಲುವುಗನ್ನಡಿಯಲಿ ಮಣ್ಣುಗಣ್ಣಿಗೂ
ಹೆಣ್ಣಿನಾಕಾರದ ಸೀಸೆಗಳ ನಿಶ್ಶೇಷ ಗುಟ್ಟು!

ಫ್ರಿಜ್ಜಿನಲಿ ವಿರಮಿಸುತಿವೆ ಗೋಡೆಗೊರಗಿ ತಣ್ಣಗೆ
ಮಿನರಲ್ ವಾಟರ್‌ನ ಬಾಟಲಿಗಳು; ಮೃದು ಪಾನೀಯ ಸೀಸೆಗಳು.
ಲೀಟರ್‌ಗೆ ಹನ್ನೆರಡು ರೂಪಾಯಿ ತಲೆ ಬೋಳಿಸಲು ನುಣ್ಣಗೆ.
ಹತ್ತಿರ ಹೋಗಿ ನೋಡುತ್ತೇನೆ ಸಖಿ. ಸಖೇದ ಆಶ್ಚರ್ಯ!
ಅದೇ ಚರಿಗೆಯೊಳಗಿನ ನೀರು ನಿಂತಿದೆ ತಿರುಗಿ
ಕೊಂಬು-ಬಾಲ ನಂಬಿದ ಹುಳು ನೋಡುತಿದೆ
ನೀರು ಹುಡುಕುವ ನನ್ನ ಸ್ಥಿತಿಗೆ ಮರುಗಿ.
ಕೊಳದೊಳಗಿನ ನೀರೆಗಿಲ್ಲಿ ಕಳಕಳ ಕುಣಿತ
ರೊಕ್ಕವಿದ್ದವನ ಗಕ್ಕನೆ ಹಿಡಿಯಲು
ತುಡಿತವೋ ತುಡಿತ....

ಸಾಗರದ ನೀರಾಗಿಲ್ಲ ಮೇಲೋಗರ
ಉಪ್ಪಂತೂ ನಾಪತ್ತೆ, ಚಿನ್ನದುಂಗುರ ತೊಟ್ಟ
ಅಂಗಡಿಯವನಿಗೆ ಕೇಳಿದರೆ ರೆಡಿಮೇಡ್ ಉತ್ತರ–
"ಋಣ ತೀರಿಸಲು ಹೋಗಿದೆ ಉಪ್ಪು
ತಿಂದ ತವರು ಮನೆಯ ಹತ್ತಿರ".

✤ ಚನ್ನಪ್ಪ ಅಂಗಡಿ ಬಮ್ಮನಹಳ್ಳಿ : ಕೃಷಿ ಅಧಿಕಾರಿ
ರಾಜ್ಯ ಮಣ್ಣು ಸಮೀಕ್ಷೆ ಕಛೇರಿ, ಬೆಳಗಾವಿ ರಸ್ತೆ, ಧಾರವಾಡ - ೫೮೦ ೦೦೮ ✤

ಎರಡು ಕವಿತೆಗಳು

ಹೊರೆಯಾಲ ದೊರೆಸ್ವಾಮಿ

೧. ನಡೆ

ಇನ್ನಾದರು ಏಳಬೇಕು ಜಡತೆ ಬಿಟ್ಟು, ಮೇಲಕೆ
ನಮ್ಮತನವ ಕಾಣಬೇಕು ಇಳಿದು ಬದುಕಿನಾಳಕೆ
ಶತಮಾನಗಳಿಂದ ಬೆಳೆದ
ಗತಮಾನಗಳಿಂದ ಕಳೆದ
ಅಲಸಿತನವ ಕೇರಿ ಕಳೆದು
ಅಸಲುತನವ ಹೀರಿ ಬೆಳೆದು
ತಲೆಯ ಎತ್ತಬೇಕು
ಪುರಾಣ ಪುಣ್ಯ ಕಥೆಗಳಲ್ಲಿ
ಕಳೆದುಹೋದ ಮತಿಗಳಲ್ಲೆ
ಗಿರಿಗಿರೆಂದು ಗಿರಕಿ ಹೊಡೆದು
ವೃತ್ತದಲ್ಲೆ ಸುತ್ತದೆ
ಮುಕ್ತವಾಗಿ ಮೂಡಬೇಕು
ಸತ್ಯ ಬದುಕ ಕಾಣುತ
ಜಾತಿ ಮತದ ಮೇರೆ ಮೀರಿ
ಮೇಲು ಕೀಳುಗಳನು ಏರಿ
ಭ್ರಾಂತಪಥವ ಬಿಟ್ಟು, ನಾವು
ಕ್ರಾಂತ ಪಥವ ಸಾರಿ ಸೇರಿ
ವಿಕ್ರಾಂತರಾಗಿ ಏಳಬೇಕು
ಇಷ್ಟು ದಿವಸ ನಡೆದ ಹಾದಿ
ಬಿಟ್ಟು, ಕ್ರಮಿಸು ನವ್ಯದ್ಹಾದಿ
ಪುಟಿಯುವಂಥ ಬದುಕು ನಿನಗೆ
ಹೊಸ ಕೋಶವ ತೆರೆಯಲಿ
ಹೊಸ ದೇಶವ ತೋರಲಿ

೨. ನಟಸಾರ್ವಭೌಮರು

ಬಿತ್ತಿದ್ದು ವಿಷಭರಿತ ದತ್ತೂರಿ
ಬಯಸಿದ್ದು ಘಮಘಮಿಸುವ ಕಸ್ತೂರಿ
ಎಕ್ಕದ ಹೂವಿನ ಹಾರ ಕಟ್ಟಿ
ದಕ್ಕುವುದೆ ದೇವರ ವರ
ಎಂದು ಹಂಬಲಿಸಿದವರು

ಹಸಿದು ಬಂದ ಹೈದರಿಗೆ
ಬಾಯಿತುಂಬ ಪ್ರೀತಿ ಮಾತನು ಎರೆದು
ತುಂಬಿ ತಟ್ಟೆಯ ತುಂಬ
ಹೊಟ್ಟೆ ತುಂಬ ಉಣ್ಣೆಂದು
ತಲೆ ನೇವರಿಸಿದವರು

ಸಾಲು ಕುಂತವರಲ್ಲಿ
ಮೇಲು ಕೀಳುಗಳೆಳೆದು
ಪಂಕ್ತಿಯಲಿ ವಂಚಿಸುವ
ಬೆಂತರದ ಮನದವರು

ಸುತ್ತ ಗೋಡೆಯ ಕಟ್ಟಿ
ಗೋಡೆ ಆಚೆ ಸಂಬಂಧದೆಳೆಗಳನು
ಹಿಡಿವ ತವಕದ
ಗೋಸುಂಬೆ ಮನದವರು

ಒಡಲ ಗುಡಾರದ ತುಂಬ
ಈಟಿ ಭರ್ಜಿಯ ಅವಿತಿಟ್ಟು
ನಾಲಿಗೆಯ ತುಂಬ
ನವರಸವ ಎರೆದವರು

ಪತ್ತಲ ಸೀರೆಯುಟ್ಟವಳ
ಪತ್ತು ಪತ್ತಿನಲ್ಲೂ
ರಸದ ಸೌಂದರ್ಯವನು ಅರಸಿ
ಶಾಂತಿರಸದ ಹೊಳೆಯ ಹರಿಸಿದವರು

ಕ್ಷಣ ಕ್ಷಣಕು ಉಕ್ಕಿಸುತ
ಎದೆಯ ಲಾವಾರಸವ
ಅದರಲ್ಲೆ ಹೊಳೆವ ಕಸವರವ
ಹೆಕ್ಕೆಕ್ಕಿ ತೆಗೆಯುವವರು

ಹತ್ತಿರ ಬಂದವರ ದೂರವಿಟ್ಟು
ದೂರದಿಂದಲೆ
ಎದೆ ಪ್ರೀತಿ ಹರಿಸಿ
ನಟನೆ ನಾಟ್ಯವಾಡುವ ನಟಸಾರ್ವಭೌಮರು

ದೇವರು ಧರ್ಮಗಳಿಗೆ
ತನುಮನಧನವನರ್ಪಿಸಿ
ನಿತ್ಯ ಬದುಕಿಗೆ ಭಿಕ್ಷೆ ಬೇಡುವವರು

ಪರದೇಶದಿಂದ
ಕಡ ತಂದ ಹಣದಿಂದ
ದೇಸಿ ಚಿಂತನೆ ನಡೆಸಿ
ವಿದೇಶಿ ವ್ಯಾಮೋಹವನು
ಖಂಡತುಂಡಾಗಿ ಖಂಡಿಸುವವರು

ಗಿಡಮರಗಳೆಡೆಯಲ್ಲಿ
ಫಲ ಬಿಡುವ ವನದಲ್ಲಿ
ಚೆಂದದಲಿ
ಸ್ವಚ್ಛಂದ ಹಾರಾಡುವ
ಮೋಹಕ ಗಿಳಿಗಳ ಹಿಡಿದು ತಂದು
ಕಬ್ಬಿಣದ ಪಂಜರದಲ್ಲಿ ಕೂಡಿ ಹಾಕಿ
ಪ್ರಕೃತಿಯ ಆರಾಧಿಸುವ
ನಿಸರ್ಗಪ್ರಿಯರು

ಬೆಳೆವ ಬದುಕಿಗೆ ಬಿಗಿವ
ಕುಣಿಕೆ ಹಗ್ಗವ ಬಿಗಿದು
ನಿಂತಲ್ಲೆ ಸುತ್ತುತ್ತ
ಕುಂತಲ್ಲೆ ಕೆನೆಯುತ್ತ
ಕೋಗಿಲೆಯ ದನಿ ತೆಗಳಿ
ಕಾಗೆ ಕೂಗಿಗೆ ಮರುಳಾದವರು
ನಾವು ಭಾರತೀಯರೊ
ನಾವು ಭಾರತೀಯರು

✤ ಹೊರೆಯಾಲ ದೊರೆಸ್ವಾಮಿ : # ೭, ೭ನೆಯ ಮೇನ್ (ಉತ್ತರ), ೯ನೆಯ ಕ್ರಾಸ್,
ವಿವೇಕಾನಂದ ನಗರ, ಮೈಸೂರು - ೫೭೦ ೦೨೩ ✤

ಕಲೆ : ಆಧುನಿಕ ಸಂದರ್ಭ

ಚಂದ್ರಕಾಂತ ಕುಸನೂರ

What great paintings and sculptures have in common with any form of great art is their ability to create a fresh order from the flux of life. The pleasure we are given from looking at them is primarily that of having our view clarified, distilled, detached from the distractions that condition our every day of seeing. We are able to share a perception of the world different from our own, and more penetrating. –David Piper

ನಾವು ದಿನನಿತ್ಯ ನೋಡುವ ವಿಶ್ವದಕಿಂತ ಭಿನ್ನವಾದಂತಹ, ವಿಶ್ವದ ದರ್ಶನ ಮಾಡಿಸುವದೇ ಕಲಾವಿದನ ಉದ್ದೇಶವಾಗಿರುತ್ತದೆ. ಕಲೆಯ ಅಭಿವ್ಯಕ್ತಿ ವ್ಯಾವಹಾರಿಕ ಅಭಿವ್ಯಕ್ತಿಯಾಗಿರದೆ, ಅದು ಒಂದು ರೀತಿಯಿಂದ Metaphysical ಅಭಿವ್ಯಕ್ತಿಯಾಗಿರುತ್ತದೆ. ಕಲೆಯ ಅನುಭವ, ವ್ಯಕ್ತಿಗತವಾಗಿರುತ್ತದೆ, ಈ ಅನುಭವ ಕಾಲ ಮತ್ತು ಸ್ಥಾನಕ್ಕೆ ಅನುಗುಣವಾಗಿ, ಬದಲಾಗುತ್ತಿರುತ್ತದೆ. ಇಂಥ ಅನುಭವಕ್ಕೆ ನಿಶ್ಚಿತವಾದಂತಹ ಮಾನದಂಡ ಇರುವದಿಲ್ಲ. ಪ್ರತಿಯೊಂದು ಕಲಾಕೃತಿ ತನ್ನದೇಯಾದಂತಹ ವ್ಯಾಕರಣದೊಂದಿಗೆ ಹುಟ್ಟಿಕೊಳ್ಳುತ್ತದೆ. ಆದರೆ ಸೌಂದರ್ಯದೃಷ್ಟಿ, ಭಾವನೆಗಳು, ಅಭಿವ್ಯಕ್ತಿ ಮತ್ತು ಪರಿಕಲ್ಪನೆಗಳು, ಕಲಾವಿದನಿಗೆ ಅನಿವಾರ್ಯ ವಿಷಯಗಳೆ. ಕಲೆ ಏನೆಂದು ತಿಳಿದುಕೊಳ್ಳಬೇಕಾದರೆ, ಒಂದಿಷ್ಟು ಸೌಂದರ್ಯಶಾಸ್ತ್ರದ, ಪರಿಸರ ಮತ್ತು ಪರಿಸ್ಥಿತಿಯ ಅರಿವು, ಕಲೆಯ ಶಿಸ್ತಿನಲ್ಲಿರಬೇಕಾದ ಆಂತರಿಕ ಸಂಬಂಧಗಳ ಬಗ್ಗೆ ತಿಳಿದುಕೊಂಡಿರುವದು ಆವಶ್ಯಕವಾಗಿರುತ್ತದೆ. ಯಾವ ದೇಶ ಮತ್ತು ಕಾಲದ ಕಲಾವಿದನಾಗಿರಲಿ. ಅವನು, ಆಯಾ ಕಾಲದ ಶಿಸ್ತು ಮತ್ತು ಸಂಪ್ರದಾಯಕ್ಕೆ ಬದ್ಧನಾಗಿರುವದು ಸಹಜ, ಆದರೆ ಪ್ರತಿಯೊಬ್ಬ ಕಲಾವಿದ ತನ್ನದೇಯಾದ ದೃಷ್ಟಿಯನ್ನು ಬೆಳೆಸಿಕೊಂಡಿರುತ್ತಾನೆ. ಇದರಿಂದಾಗಿ. ತನ್ನ ಅಭಿವ್ಯಕ್ತಿ ಇತರರಿಂದ ಭಿನ್ನವಾಗಿರಬೇಕೆಂದು ವಿಚಾರ ಮಾಡುತ್ತಾನೆ. ಇದರಿಂದ ತನ್ನ ಅನುಭವಕ್ಕೆ ರೂಪ ಕೊಡುವಲ್ಲಿ ಹೊಸ ಮಾರ್ಗದ ಅನುಸಂಧಾನ ಮಾಡುತ್ತಾನೆ. ಇನ್ನು ಬಾಹ್ಯ ಪ್ರಭಾವಕ್ಕೆ ಒಳಗಾಗಿ ಪರಿವರ್ತನೆ ಹೊಂದುವದು ಸ್ವಾಭಾವಿಕವಾದ ವಿಷಯವೇ ಸರಿ.

ಬ್ರಿಟಿಶರ ಆಳ್ವಿಕೆಯಲ್ಲಿ ಭಾರತದ ಕೆಲವು ಪ್ರಮುಖ ನಗರಗಳಲ್ಲಿ ಕಲಾಶಾಲೆಗಳು ಸ್ಥಾಪಿತವಾದವು. ಅಂಥ ಶಾಲೆಗಳಲ್ಲಿ ಪಾಶ್ಚಿಮಾತ್ಯ ಶೈಲಿಯ ಶಿಕ್ಷಣ ಕೊಡಲಾಗುತ್ತಿತ್ತು. ಅನೇಕ ಕಲಾಸಕ್ತರು ಇಂಥ ಶಾಲೆಗಳಲ್ಲಿ ಓದಿ ಪಾಶ್ಚಿಮಾತ್ಯ ಶೈಲಿ, ತಂತ್ರ ಇತ್ಯಾದಿಗಳನ್ನು ತಮ್ಮದಾಗಿಸಿಕೊಂಡರು. ಮುಂಬಯಿಯ ಜೆ. ಜೆ. ಸ್ಕೂಲ್ ಆಫ್ ಆರ್ಟ್‌ದಿಂದ ಅನೇಕ ಪ್ರತಿಭಾವಂತರು ಹೊರಬಂದರು. ಇದರಿಂದ ಸಂಪ್ರದಾಯಸ್ಥ ಕಲಾವಿದರಿಗೆ, ಸಿಗಬೇಕಾದಂತಹ ಸ್ಥಾನಮಾನ ಸಿಗದಂತಾಯಿತು. ಇದರಿಂದ ನಮ್ಮ ಕಲಾವಿದರು ನಿರಾಶರಾದರೆಂದೇನಿಲ್ಲ. ಸಾಂಪ್ರದಾಯಿಕ ಕಲೆ, ಇಲ್ಲಾಗಲಿ, ಅಥವಾ ಬೇರೆ ದೇಶಗಳಿಂದಾಗಲಿ, ಅದು ಮುಖ್ಯವಾಗಿ ಧರ್ಮಾಶ್ರಿತವಾಗಿತ್ತು.

ನಮ್ಮಲ್ಲಿ ಹಿಂದೂ, ಬೌದ್ಧ, ಜೈನ, ಇಸ್ಲಾಮ ಮುಂತಾದ ಧರ್ಮಗಳಿಗೆ ಸಂಬಂಧಿಸಿದ ಕಲೆ ಮೊದಲಿನಿಂದಲೂ ಇದ್ದೇ ಇತ್ತು. ಕೃಷ್ಣ ಮತ್ತು ಅವನ ಲೀಲೆಗಳು ಮಾತ್ರ ಒಂದಿಷ್ಟು

'ಸೆಕ್ಯೂಲರ್' ತರಹ ಆಗಿದ್ದರಿಂದ, ಈ ಚರಿತ್ರನಾಯಕನ ಅಸಂಖ್ಯಾತ ಚಿತ್ರಗಳು ಎಲ್ಲರ ಪ್ರೀತಿಗೆ ಪಾತ್ರವಾದವು. ರಾಜಪೂತ ಮತ್ತು ಮೊಗಲ ಕಾಲದ ಮಿನಿಯೇಚರ್‌ಗಳು, ಇತಿಹಾಸಕ್ಕೆ ಹತ್ತಿರವಾಗಿದ್ದು, ತಿಳಿದ ವಿಷಯವಾಗಿದೆ. ತಂಜಾವೂರ, ಮೈಸೂರ ಶೈಲಿಯ ಚಿತ್ರಗಳು, ಸುಲ್ತಾನರ ಆಳ್ವಿಕೆಯ ದೃಶ್ಯಾವಳಿಗಳು, ಕಾಷ್ಠಚಿತ್ರಗಳು, ಭಿತ್ತಿಚಿತ್ರಗಳು, ತಮ್ಮ ಮಹತ್ವ ಮತ್ತು ವೈಭವವನ್ನು ಕಳೆದುಕೊಳ್ಳುವದು ಸಾಧ್ಯವೇಯಿಲ್ಲ.

ಇಂಗ್ಲಿಷ್ ಭಾಷೆಯ ಪರಿಚಯದಿಂದ ಪಾಶ್ಚಿಮಾತ್ಯ ದೇಶಗಳಲ್ಲಿನ ಅನೇಕ ವಿಷಯಗಳನ್ನು ತಿಳಿದುಕೊಳ್ಳುವದು ಸಾಧ್ಯವಾಯಿತು. ಭಾರತದ ಅನೇಕ ಭಾಗಗಳಲ್ಲಿದ್ದ ಕಲಾವಿದರಂತೆ ಕರ್ನಾಟಕದ ಕಲಾವಿದರೂ, ಹೊರದೇಶದ ಹೊಸ ಪ್ರಯೋಗಗಳ ಪರಿಚಯ ಮಾಡಿಕೊಂಡರು. ತಂತ್ರ, ವರ್ಣಗಳನ್ನು ಬಳಸುವ ರೀತಿ, ಶೈಲಿ ಇತ್ಯಾದಿಗಳ ಪ್ರಯೋಗ ಇಲ್ಲಿನ ಕಲಾವಿದರೂ ಮಾಡುತ್ತ ಬಂದರು. ಧಾರ್ಮಿಕದಿಂದ ಲೌಕಿಕ ವಿಷಯ ವಸ್ತುಗಳ ಕಡೆಗೆ ಗಮನ ಹರಿಸಲಾಯಿತು. ಇದರಿಂದಾಗಿ ದೇಸಿ ಶೈಲಿಯಲ್ಲಿದ್ದ ಶಕ್ತಿ, ಒರಟುತನ, ಅಭಿವ್ಯಕ್ತಿಯಲ್ಲಿಯ ಲವಲವಿಕೆ, ಕಲ್ಪನಾಶಕ್ತಿಯ ನಿರೂಪಣೆ ಇಲ್ಲದಂತಾಗಿ, ಪಾಶ್ಚಿಮಾತ್ಯರ ಸಪಾಟತನದ, ಕಲಾಕೃತಿಗಳು ಬರಲಾರಂಭಿಸಿದವು. ಅನುಕರಣೆಯೇ ಮುಖ್ಯವಾದಂತಾಯಿತು. ಭಾರತೀಯ ಮನಃಸ್ಥಿತಿಯಿಂದ ಕಲಾವಿದರು ದೂರ ಸರಿದರು. ಆದರೆ ಮೇಜರ್ ಗಿಲ್, ಇ. ಬಿ. ಹಾವೆಲ್ ಮುಂತಾದವರ ಪ್ರೋತ್ಸಾಹದಿಂದ ಮತ್ತೆ ಅನೇಕ ಕಲಾವಿದರು ತಮ್ಮ ಸಂಪ್ರದಾಯಕ್ಕೆ ಮರಳುವಂತಾಯಿತು. ಬೆಂಗಾಲದಲ್ಲಿ ಅವನೀಂದ್ರನಾಥ್ ಠಾಕುರ್, ನಂದಲಾಲ್ ಬೋಸ್ ಮುಂತಾದವರಿಂದ ಬಂಗಾಲಿ, ಅಂದರೆ ಭಾರತೀಯತ್ವಕ್ಕೆ ಒತ್ತು ಕೊಡಲಾಯಿತು. ಇವರ ಪ್ರಯತ್ನ ಚಳವಳಿಯ ರೂಪ ತಾಳಲಿಲ್ಲ. ಕೆಲವು ವರ್ಷಗಳ ನಂತರ ಈ ವಿಚಾರಧಾರೆ ತನ್ನ ಶಕ್ತಿಯನ್ನು ಕಳೆದುಕೊಂಡಿತು. ಆದರೆ ದೇಶದ ಇತರೆಡೆ ಇರುವಂತೆ ಕರ್ನಾಟಕದ ಹಿರಿಕಿರಿಯ ಕಲಾವಿದರು ತಮ್ಮ ಸಂಪ್ರದಾಯವನ್ನು ನಿಷ್ಠೆಯಿಂದ ಉಳಿಸಿಕೊಂಡು ಬಂದರು.

ಮೈಸೂರಿನ ರಾಜಮನೆತನದ ಪ್ರೋತ್ಸಾಹದಿಂದ, ಕಲೆಗೆ ಹೆಚ್ಚಿನ ಗೌರವ ದೊರೆತಂತಾಯಿತು. ೧೯-೨೦ ನೇ ಶತಮಾನದಲ್ಲಿ ಪಾಶ್ಚಾತ್ಯ ದೇಶಗಳಲ್ಲಿ ಅನೇಕ 'ಇಸ್‌ಂ'ಗಳು ಹುಟ್ಟಿಕೊಂಡವು. ಇಂಪ್ರೆಶನಿಸ್‌ಂ, ಎಕ್ಸ್‌ಪ್ರೆಶನಿಸ್‌ಂ, ರಿಯಾಲಿಸ್‌ಂ, ಸರ್‌ರಿಯಾಲಿಸ್‌ಂ, ಡಾಡಾಇಸ್‌ಂ, ಕ್ಯೂಬಿಸ್‌ಂ ಹೀಗೆ ತರತರದ ಇಸ್‌ಂಗಳ ಗಾಳಿ ಭಾರತದ ಕಡೆಗೂ ಬೀಸತೊಡಗಿತು. ಹೊಸ ವಿಚಾರ, ವಿದ್ರೋಹ, ಪರಂಪರೆಯ ನಿರಾಕರಣೆ, ಶೈಲಿ, ತಂತ್ರ, ವಿಷಯವಸ್ತು, ಅಭಿವ್ಯಕ್ತಿ ಹೀಗೆ ಎಲ್ಲದರಲ್ಲಿ ಆಕ್ರೋಶದ ದನಿ ಎದ್ದಿತು. ಜಗತ್ತಿನ ಎಲ್ಲಾ ದೇಶಗಳಲ್ಲಿಯೂ ಬದಲಾವಣೆಗಳು ಆಗತೊಡಗಿದವು. ಫ್ರಾನ್ಸ್, ಇಂಗ್ಲಂಡ್, ಸ್ಪೇನ್, ಅಮೆರಿಕಾ, ರಶಿಯಾ, ಜರ್ಮನಿ ಮುಂತಾದ ದೇಶಗಳಲ್ಲಿನ ಯುವಕರು, ಇಂಥ ಅಸಾಂಪ್ರದಾಯಿಕ ಬದಲಾವಣೆಯನ್ನು ತಮ್ಮದಾಗಿಸಿಕೊಂಡರು. ನಮ್ಮ ದೇಶದಲ್ಲಿನ ಕಲಾವಿದರೂ ಇದರಿಂದ ಪ್ರಭಾವಿತರಾದರೂ ಯಾರೂ ಅಲ್ಲಿನ ಇಸ್‌ಂಗಳಿಗೇ ಶರಣಾದಂತೆ, ನಮ್ಮ ಕಲಾವಿದರು ಆಗಲಿಲ್ಲ. ಇದೊಂದು ತುಂಬ ಆರೋಗ್ಯಕರ ಸಂಗತಿಯೆಂದೇ ಹೇಳಬಹುದು.

ರಾಜಾ ರವಿವರ್ಮಾ ಅವರ ತಾಂತ್ರಿಕ ಶೈಲಿ ಪಾಶ್ಚಿಮಾತ್ಯದಂತಿದ್ದರೂ, ಅವರ ಎಲ್ಲ ಕಲಾಕೃತಿಗಳು ಶುದ್ಧ ಭಾರತೀಯ ಸಂಸ್ಕೃತಿಗೇ ಮೀಸಲಾಗಿದ್ದು ಗಮನಾರ್ಹ. ಅರಮನೆಯ

ಪ್ರೋತ್ಸಾಹದಿಂದ ರಚಿತವಾದ ಅನೇಕ ಕಲಾಕೃತಿಗಳು. ಮತ್ತು ಕಲಾವಿದರು ತಮ್ಮ ಧಾರ್ಮಿಕ ಮತ್ತು ಸಾಂಸ್ಕೃತಿಕ ಪರಂಪರೆಯನ್ನು ಕಾಪಾಡಿಕೊಂಡು ಬಂದಿದ್ದಾರೆ.

ಕಲಾ ಶಿಕ್ಷಣ ಮತ್ತು ಕಲಾ ಶಾಲೆಗಳು, ಮುಖ್ಯವಾಗಿ ಹಿಂದಿನ ಮೈಸೂರು ಸಂಸ್ಥಾನದಲ್ಲಿನ ಚಿತ್ರಶಾಲೆಗಳಾಗಲಿ, ಗ್ಯಾಲರಿಗಳಾಗಲಿ, ಕಲಾವಿದರಾಗಲಿ, ಆಧುನಿಕತೆಯಿಂದ ಬಂದ ಬದಲಾವಣೆಯನ್ನು ಸ್ವೀಕರಿಸುತ್ತಲೇ, ಭಾರತೀಯತೆಯನ್ನು ಕಾಪಾಡಿಕೊಂಡು ಬಂದಿದ್ದಾರೆ. ಹಿರಿಯ ಕಲಾವಿದರಾಗಲಿ, ಯುವ ಕಲಾವಿದರಾಗಲಿ, ಇಸ್ಂಗಳನ್ನು ಬೆನ್ನು ಹತ್ತಿ ಹೋಗಲಿಲ್ಲ. ಆಧುನಿಕ ವಸ್ತುಸ್ಥಿತಿಗೆ ಸ್ಪಂದಿಸುತ್ತಲೇ, ಮೂಲದ ಬಗ್ಗೆ ಆಸಕ್ತಿಯನ್ನು ಇಟ್ಟುಕೊಂಡಿದ್ದಾರೆ. ಹೊಸ ವಿಚಾರಧಾರೆ, ರಾಜಕೀಯ ಮತ್ತು ಸಾಮಾಜಿಕ ಪರಿವರ್ತನೆ, ಇವುಗಳ ಪ್ರಭಾವ ಜನಮಾನಸದ ಮೇಲೆ ಆದಂತೆ, ಅಭಿವ್ಯಕ್ತಿಯ ಮಾಧ್ಯಮದಲ್ಲಿಯೂ ಬದಲಾವಣೆಗಳು ಆಗುವದು ಸಹಜ. ಇದರಿಂದ ನವ್ಯ ಪಂಥ, ಕಾಣಿಸಿಕೊಂಡಿತು. ಬ್ರಿಟಿಶರ ಜಲವರ್ಣಗಳು, ಫ್ರೆಂಚ್ ಇಂಪ್ರೆಶನಿಸ್ಂ ಮತ್ತು ಇಂಥ ಪಾಶ್ಚಿಮಾತ್ಯ ಶೈಲಿಗಳು, ಚಿತ್ರ ಕಲಾವಿದರಲ್ಲಿ 'ಹೊಸತನ' ತಂದುಕೊಟ್ಟವು. ದಕ್ಷಿಣ ಭಾರತದ, ಅದರಲ್ಲಿಯೂ ಮುಖ್ಯವಾಗಿ ಕರ್ನಾಟಕ, ತಮಿಳುನಾಡು ಮುಂತಾದ ಕಡೆಯ ಕಲಾವಿದರೂ ತಮ್ಮ ಶೈಲಿಯಲ್ಲಿ ಹೊಸತನವನ್ನು ತಂದುಕೊಂಡರು. ದೇವೀಪ್ರಸಾದ್ ರಾಯ್ ಚೌಧರಿ, ಕೆ. ಸಿ. ಎಸ್. ಪಣಿಕ್ಕರ್ ಮುಂತಾದವರ ಮುಂದಾಳತ್ವದಿಂದ, ನವ್ಯ ಕಲೆಯಲ್ಲಿಯೂ ಭಾರತೀಯ ಸಂವೇದನೆ, ತಾಂತ್ರಿಕ ಕಲಾವಿಧಾನ, ಕ್ಯಾಲಿಗ್ರಾಫಿ ಮುಂತಾದ ವಿಷಯಗಳು ಇರುವಂತಾದವು. ಈ ಹಿರಿಯರ ಪರಂಪರೆಯನ್ನು ಮುಂದುವರಿಸಿಕೊಂಡ ಅನೇಕ ಕಲಾವಿದರು, ರಾಷ್ಟ್ರೀಯ ಮತ್ತು ಅಂತರ್‌ರಾಷ್ಟ್ರೀಯ ಖ್ಯಾತಿಯನ್ನು ಪಡೆದಿದ್ದಾರೆ. ಎಲ್ಲರಿಗೂ ಅಂಥವರ್‍ಯಾರೆಂದು ಗೊತ್ತಿದೆ. ಕೆಲವರ ಹೆಸರುಗಳನ್ನು ಪ್ರಸ್ತಾಪಿಸಿ, ಇನ್ನೂ ಕೆಲವರ ಪ್ರಸ್ತಾಪವನ್ನು ಮಾಡದಿರುವದು ತುಂಬಾ ಅಪಾಯಕಾರಿ ವಿಷಯವೆಂದು ತಿಳಿದೇ, ನಾನು ಯಾರ ಹೆಸರನ್ನೂ ಹೇಳುವ ಗೊಡವಿಗೆ ಹೋಗುವದಿಲ್ಲ.

ಕರ್ನಾಟಕದ ಅನೇಕ ಪ್ರತಿಭಾವಂತರು ಕಲಾ ಪ್ರಚಾರದ ಗೀಳಿಗೆ ಇಳಿಯದೆ ತುಂಬ ಸುಂದರ ಕಲಾಕೃತಿಗಳನ್ನು ನಿರ್ಮಿಸುತ್ತಿದ್ದಾರೆ. ದೇಶದ ಹಲವಾರು ಕಡೆಗೆ ಪ್ರದರ್ಶನಗಳನ್ನು ಆಯೋಜಿಸುತ್ತಿದ್ದಾರೆ. ದೇಶದ ಹಲವಾರು ಕಡೆಗೆ ಪ್ರದರ್ಶನಗಳನ್ನು ಮಾಡುತ್ತಿದ್ದಾರೆ. ಕಲಾರಸಿಕರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ. ಅಂಥವರನ್ನು ಗುರುತಿಸುವ ಕೆಲಸ ನಮ್ಮ ಅಕಾಡೆಮಿ ಮತ್ತು ಸರಕಾರ ಮಾಡಬೇಕಾಗಿದೆ. ಸಾಮಾಜಿಕ, ರಾಜಕೀಯ, ಮಾನಸಿಕ, ಆಧ್ಯಾತ್ಮಿಕ, ಬದುಕಿನ ಸಮಸ್ಯೆಗಳ, ಸೌಂದರ್ಯದ ಹೊಸ ಕಲ್ಪನೆಗಳ, ಚಿತ್ರೀಕರಣ ನಮ್ಮ ಅನೇಕ ಕಲಾವಿದರಲ್ಲಿ ನೋಡಬಹುದಾಗಿದೆ. ಜನಸಾಮಾನ್ಯರ ಹತ್ತಿರಕ್ಕೆ ತಮ್ಮ ಕಲೆಯನ್ನು ಕೊಂಡೊಯ್ಯುವ ಜಿಜ್ಞಾಸೆ ನಮ್ಮ ಇಂದಿನ ಕಲಾವಿದರಲ್ಲಿ ನೋಡಬಹುದಾಗಿದೆ.

ಒಂದು ವಿಚಿತ್ರ ಸಂಗತಿಯೆಂದರೆ, ಕಲಾಶಾಲೆಯಿಂದ ಅದೇ ತಾನೇ ಹೊರಬಂದ ಕಲಾವಿದರು ದುಡ್ಡು ಮಾಡಿಕೊಳ್ಳುವ ಆತುರದಲ್ಲಿದ್ದಂತೆ ಕಾಣಿಸುತ್ತದೆ. ಹೆಸರು ಮತ್ತು ಹಣದ ಆಸೆಯಿಂದ ಕಲೆಯ ಮೂಲಭೂತ ಉದ್ದೇಶವನ್ನೇ ಮರೆಯುತ್ತಿದ್ದಾರೆ. ನಮ್ಮ ರಾಜ್ಯದ ಎಲ್ಲ ಭಾಗಗಳಲ್ಲಿಯೂ, ಅನೇಕ ಯುವಕರು ಕಲಾರಂಗದಲ್ಲಿ ಪ್ರವೇಶ ಮಾಡಿದ್ದಾರೆ. ಇದೊಂದು ಶುಭ ಸಂಕೇತವಾಗಿದ್ದರೂ, ಪರಂಪರೆ, ಇತಿಹಾಸ, ಶಾಸ್ತ್ರ, ನಿಷ್ಠೆ, ಪರಿಶ್ರಮ, ಅಭ್ಯಾಸ ಇವುಗಳ

ಕಡೆಗೆ ಅಷ್ಟೊಂದು ಗಮನ ಕೊಡುವಂತೆ ಕಾಣಿಸುವದಿಲ್ಲ. ಹಿಂದಿನ ಪೀಳಿಗೆಯ ಕೊಡುಗೆ ಏನೆಂದು ತಿಳಿದುಕೊಳ್ಳುವ ಗೋಜಿಗೇ ಹೋಗುವದಿಲ್ಲ. ಆಧುನಿಕತೆಯ ಹೆಸರಿನಲ್ಲಿ 'ಏಸ್ತೆಟಿಕ್ಸ್' ದೃಷ್ಟಿಯಿಂದಲೇ ವಂಚಿತರಾಗಿದ್ದಾರೆ. ಆಧುನಿಕತೆ, ಇದು ಸಮಕಾಲೀನ ಸಂವೇದನೆಗೆ ಸಂವಾದಿಯಾಗಬೇಕು. ವಿರೋಧ, ವಿದ್ರೋಹ ಮತ್ತು ಬಂಡಾಯದಲ್ಲಿಯೂ ಒಂದು ನೈತಿಕ ಜವಾಬ್ದಾರಿಯೂ ಇರಲೇಬೇಕು. ಈ ವಿಷಯದ ಕಡೆಗೆ ಯಾರೂ 'ಲಕ್ಷ್ಯ' ಕೊಡುವಂತೆ ಕಾಣಿಸುವದಿಲ್ಲ. ಕಲಾ ಪ್ರಪಂಚದಲ್ಲಿ 'ಮಾಸ್ಟರ್' ಎಂದೆನಿಸಿಕೊಂಡಂಥವರ ಕಲಾಕೃತಿಗಳನ್ನು ನೋಡುವ, ಅವರ ಜೀವನಸಾಧನೆ ಎಂಥದೆಂದು ತಿಳಿದುಕೊಳ್ಳುವ ಆಸಕ್ತಿಯೇ ನಮ್ಮ ಯುವ ಕಲಾವಿದರಲ್ಲಿ ಕಾಣಿಸುವದಿಲ್ಲ. ಅತ್ಯಂತ ಪ್ರಸಿದ್ಧ ಕಲಾಶಾಲೆಯಿಂದ ಸ್ನಾತಕೋತ್ತರ ಪದವಿಯನ್ನು ಪಡೆದ ಅನೇಕ ಕಲಾವಿದರು ಸಹ, ಅಜ್ಞಾನಿಗಳಂತೆಯೇ ಇರುತ್ತಾರೆ. ಇದರ ಕಾರಣವೇನೆಂದು, ಗಂಭೀರವಾಗಿ ಚಿಂತಿಸಬೇಕಾಗಿದೆ.

ಆಂಧ್ರ, ತಮಿಳುನಾಡು, ಕೇರಳ ಮತ್ತು ಕರ್ನಾಟಕದ ಕಲಾವಿದರು ಭಾರತೀಯ ಆಧುನಿಕ ಚಿತ್ರಕಲೆಗೆ ತುಂಬ ಮಹತ್ವದ ಕಾಣಿಕೆಯನ್ನು ನೀಡುತ್ತ ಬಂದಿದ್ದಾರೆ. ಪ್ರಯೋಗಶೀಲತೆ, ಚಿಂತನೆಯ ಪ್ರಖರತೆ, ಅಭಿವ್ಯಕ್ತಿಯ ನಿಖರತೆ, ಇವೆಲ್ಲದರಲ್ಲಿಯೂ ಅದ್ಭುತವಾದಂತಹ ಕೆಲಸ ಮಾಡುವ ಕಲಾವಿದರು ನಮ್ಮಲ್ಲಿದ್ದಾರೆ.

ಕಲೆ ಮಾನಸಿಕ ಸ್ಥಿತಿಯನ್ನು ಉದ್ಘಾಟಿಸುವ ಪ್ರಕ್ರಿಯೆಯೇ, ಆ ಸ್ಥಿತಿಯನ್ನು ಒಪ್ಪಿಕೊಳ್ಳುವ ರೀತಿ ಇದಾಗಿದೆ. ಸೌಂದರ್ಯದ ಪರಿಕಲ್ಪನೆಯ ಚೌಕಟ್ಟಿನಲ್ಲಿ ಇಟ್ಟು ನೋಡುವ ಪದ್ಧತಿ ಇದಾಗಿದೆ. ಸ್ವಚ್ಛ ಸುಂದರ ರೇಖೆಗಳ, ಮತ್ತು ಬಣ್ಣಗಳ ಸಾಂಗತ್ಯದಿಂದ ಅನುಭವದ ಆಳಕ್ಕೆ ಇಳಿದು, ಸತ್ಯವನ್ನು ಅರ್ಥ ಮಾಡಿಕೊಳ್ಳುವ ಪ್ರಕ್ರಿಯೆಯೇ ಇದಾಗಿದೆ. Visual language ಮತ್ತು Vocabularies ಗಳ ನಿರ್ಮಿತಿಯು ಅವುಗಳನ್ನು ಓದುವದಕ್ಕೆ, ತಿಳಿದುಕೊಳ್ಳುವದಕ್ಕೆ ಆಗಿರುತ್ತದೆ.

ಕಲೆ ಬದುಕು ಹಾಕಿದ ಸವಾಲುಗಳಿಗೆ ಉತ್ತರ ನೀಡುವಂತಾಗಬೇಕು. ಈ ನಿಟ್ಟಿನಲ್ಲಿ ನಮ್ಮ ಕಲಾವಿದರು ಕೆಲಸ ಮಾಡಬೇಕು.

ಒಂದು ಕಾಲದಲ್ಲಿ ನಮ್ಮ ದೇಶದ ಕಲೆ (ಯಾವುದೇ ಕಲೆಯ ಪ್ರಕಾರವಾಗಿರಲಿ) ಜನಸಾಮಾನ್ಯರ ಹತ್ತಿರವಾಗಿತ್ತು. ಕ್ರಮೇಣ, ಜನರಿಂದ ದೂರ ಆಗುತ್ತ ಹೋಯಿತು. ದೊಡ್ಡ ಶ್ರೀಮಂತರ, ಕಾರ್ಪೋರೇಟ್ ಹೌಸ್‌ಗಳ, ಶ್ರೀಮಂತ ಗ್ಯಾಲರಿಗಳ ಆಟಕ್ಕೆ ಕಲೆ ಮರುಳಾದಂತೆ ಕಾಣಿಸುತ್ತದೆ. ದೊಡ್ಡ ನಗರಗಳಲ್ಲಿನ ಗಲ್ಲಿಗಲ್ಲಿಗಳಲ್ಲಿ ಗ್ಯಾಲರಿಗಳು ಹುಟ್ಟಿಕೊಂಡಿವೆ. ಒಬ್ಬ ಪ್ರಸಿದ್ಧ ತತ್ತ್ವಜ್ಞಾನಿ ಮತ್ತು ಕಲಾವಿಮರ್ಶಕ Max Raphael ಈ ಆರ್ಟ್ ಗ್ಯಾಲರಿಗಳ ಬಗ್ಗೆ ಹೇಳಿದ್ದು ಗಮನಾರ್ಹವಾಗಿದೆ : "Using art to decorate private houses, to display the owners' wealth or so called culture is a barbarism... Museums are morgues for the storage of works of art embalmed and shrouded with historical and national prejudices."

ಗಾಯತ್ರಿ ಸಿಂಹ ಹೇಳಿದಂತೆ "The practising artist is sealed off from public gaze in his own cell of isolation."

ಪ್ರದರ್ಶನ, ಪ್ರಚಾರ ಮತ್ತು ಗ್ಯಾಲರಿಗಳಿಂದ ಹೊರಬರುವ ಪ್ರಯತ್ನ. ಶಾಂತಿನಿಕೇತನ ಮತ್ತು ಚೋಲಮಂಡಲದಲ್ಲಿ ನಡೆಯಿತು. ಇತ್ತೀಚೆಗಷ್ಟೆ, ಬೆಂಗಳೂರಿನಲ್ಲಿ ವರ್ಷಕ್ಕೆ ಒಂದು ಸಲ ಸೇರುವ 'ಚಿತ್ರ ಸಂತೆ' ಕಲೆಯನ್ನು ಸಾಮಾನ್ಯ ಜನರ ಹತ್ತಿರಕ್ಕೆ ತರುವ ಪ್ರಯತ್ನವೆಂದೇ ಹೇಳಬೇಕು– ಪ್ರಚಾರ ಮಾಧ್ಯಮ, ಗ್ಯಾಲರಿ ಮಾಲೀಕರು, ಮಧ್ಯವರ್ತಿಗಳು ಇವೆಲ್ಲದರ ಕೈವಾಡ ಚಿತ್ರ ಪ್ರಪಂಚದಲ್ಲಿ ಇದ್ದೇಯಿದೆ. ಇದರಿಂದ ಎಷ್ಟು ಕಲಾವಿದರಿಗೆ ಅನುಕೂಲ ವಾಗಿದೆಯೆಂದು ತಿಳಿದುಕೊಳ್ಳಬೇಕಾಗಿದೆ. ಸದ್ಯ ವೆಬ್‌ಸೈಟ್‌ಗಳೂ ಈ ಕ್ಷೇತ್ರದಲ್ಲಿ ಪ್ರವೇಶ ಮಾಡಿವೆ. ಇದು ಕಲೆಯ ವ್ಯಾಪಾರೀಕರಣದ ಒಂದು ವಿಧಾನ. ಇವೆಲ್ಲದರ ನಡುವೆಯೂ ಕಲೆ ಬೆಳೆಯಬೇಕಾದರೆ, ಕಲಾವಿದನಲ್ಲಿ ಇರಬೇಕಾದುದು ಜಾಗೃತಪ್ರಜ್ಞೆ ಮತ್ತು ಆತ್ಯಂತಿಕ ಕಲಾಸಕ್ತಿ. ಮಾನವನ ಸುಂದರವಾದ ಭಾವನೆಗಳ ಅಭಿವ್ಯಕ್ತಿಯೇ ಕಲೆ. ಅದು ಇದೇ ತರಹದ್ದಿರಬೇಕೆಂಬ ನಿಯಮವೇನಿಲ್ಲ. ಒಂದು ಬಲಿಷ್ಠವಾದ ಆನಂದದ ಅಭಿವ್ಯಕ್ತಿ ಅನೇಕ ಮಾಧ್ಯಮಗಳಿಂದ ಪ್ರಕಟವಾಗಬಹುದು– ಸಂಗೀತಗಾರ, ನೃತ್ಯ ಕಲಾವಿದ, ಅಭಿನೇತಾ ಅಥವಾ ಅತ್ಯಂತ ಸಾಮಾನ್ಯ ಮನುಷ್ಯನಾದರೂ ಸರಿಯೇ, ಅವನು ತನ್ನ ಸಂತೋಷವನ್ನು ಬೇರೆ ಬೇರೆ ರೀತಿಯಿಂದ ತೋರಿಸುವುದು ಸಾಧ್ಯ. ಮನುಷ್ಯನ ಅತ್ಯಂತ ಸುಂದರವಾದಂತಹ, ನಿರ್ಮಿತಿಯ ಕ್ಷಣಗಳು ಅವನು ನಿಶ್ಚಿಂತನಾಗಿದ್ದಾಗ ಮಾತ್ರವೆಂದು ಹೇಳಬಹುದು. ಲೌಕಿಕ ಶ್ರೀಮಂತಿಕೆಯಿಂದ ಒಂದಿಷ್ಟು ನೆಮ್ಮದಿಯಿಂದಿರಲು ಸಾಧ್ಯ. ಇಂಥ ನೆಮ್ಮದಿ, ಕಲೆಯ ಕಡೆಗೆ ಬರಲು ಅನುವು ಮಾಡಿಕೊಡುತ್ತದೆ. ಆದರೆ ಆಸಕ್ತಿ ಇರಬೇಕಾದದ್ದು ಅನಿವಾರ್ಯ. ಸದ್ಯದ ಪರಿಸ್ಥಿತಿಯನ್ನು ಅವಲೋಕಿಸಿದರೆ 'ಕಲೆ' ಶ್ರೀಮಂತರ ಸ್ವತ್ತಾಗಿಬಿಟ್ಟಂತಿದೆ. ದೊಡ್ಡ ದೊಡ್ಡ ಗ್ಯಾಲರಿಗಳು, ಕ್ರಿಸ್ಟೀ, ಸೌತಬೆಗಳಂಥ 'ಆಕ್ಶನ್' ಸಂಸ್ಥೆಗಳು ಕೆಲವೇ ಕೆಲವರಿಗೆ ನಿಲುಕುವಂತಿವೆ. ಮೇಲೆ ಹೇಳಿದಂತೆ ಪ್ರಚಾರ ಮಾಧ್ಯಮಗಳೂ ಶ್ರೀಮಂತ ಕಲಾವಿದರಿಗೇ ಮೀಸಲಿಟ್ಟಂತಿವೆ. ಅನೇಕ ಪ್ರತಿಭಾವಂತ ಕಲಾವಿದರು ಅವಕಾಶಕ್ಕಾಗಿ ಒದ್ದಾಡುತ್ತಿದ್ದಾರೆ. ಮಹಾನಗರಗಳಲ್ಲಿ ಮಾತ್ರ ಅವಕಾಶಗಳು ಇರುತ್ತವೆ. ಆದರೆ, ಅಲ್ಲಿ ಹೋಗಿ ತಮ್ಮ ಕಲಾಕೃತಿಗಳನ್ನು ಪ್ರದರ್ಶಿಸುವ ಆರ್ಥಿಕ ಸಾಮರ್ಥ್ಯ ಇಂಥವರಲ್ಲಿ ಇರುವದೇಯಿಲ್ಲ. ಕಲ್ಪನೆಯ ಲೋಕ ಮತ್ತು ವಾಸ್ತವ ಜಗತ್ತಿನಲ್ಲಿ, ಆಕಾಶ ಪಾತಾಳದ ಅಂತರವಿದೆ. ಕೆಲವೇ ಕೆಲವರ ಯಶಸ್ಸು ಸಮುದಾಯದ ಯಶಸ್ಸೆಂದು ಹೇಳಲಿಕ್ಕಾಗುವದಿಲ್ಲ. ಎಷ್ಟು ಜನ ಬರೀ ನೋಡಲಿಕ್ಕಾದರೂ ಗ್ಯಾಲರಿಗಳಿಗೆ ಹೋಗುತ್ತಾರೆ? ಭವಿಷ್ಯದ ಪ್ರತಿಭಾವಂತರನ್ನು ಗುರುತಿಸುವ ಕೆಲಸ ಎಲ್ಲಿ ನಡೆದಿದೆ? ಮಾಧ್ಯಮದ ಸಹಕಾರ ಎಲ್ಲಿದೆ? ಪಾಶ್ಚಿಮಾತ್ಯ ದೇಶದಲ್ಲಿ ಕಲಾವಿದರಿಗೆ ಸಿಗುವಂತಹ ಪ್ರಚಾರ ನಮ್ಮ ಕಲಾವಿದರಿಗೆ ಸಿಗುವದೇಯಿಲ್ಲ. ನಮ್ಮ ದೇಶದ ಪ್ರಿಂಟ್ ಮಿಡಿಯಾ ಮತ್ತು ಎಲೆಕ್ಟ್ರಾನಿಕ್ ಮಿಡಿಯಾ ಅಶ್ಲೀಲ ರಾಜಕೀಯ, ಅಸಹ್ಯ ಮದುವೆ, ಕೊಲೆ ಸುಲಿಗೆ, ವ್ಯಭಿಚಾರ, ಹಿಂಸೆಯ ವೈಭವೀಕರಣದಲ್ಲಿಯೇ ತಮ್ಮ ಅಸ್ತಿತ್ವವನ್ನು ಸಾರ್ಥಕಗೊಳಿಸುತ್ತಿವೆ. ಕರೋಡಪತಿಯ ಮೋಸದ ಆಟದ ಪ್ರಚಾರದಲ್ಲಿ ತೊಡಗಿವೆ. ಸಮಾಧಾನ ಮತ್ತು ಸಂತೋಷದ ಬದುಕನ್ನು ಪ್ರಯತ್ನದಿಂದ ಪಡೆದುಕೊಳ್ಳಬೇಕಾಗಿದೆ. ಸಂತೋಷ ತನ್ನಷ್ಟಕ್ಕೆ ತಾನೇ ಬರುವ ವರಪ್ರಸಾದವಲ್ಲ. ವಿಶ್ವವನ್ನು ಹಿಂಸೆಯಿಂದ ಮುಕ್ತಗೊಳಿಸಬೇಕಾದರೆ, ಕಲೆಯ ಆಶ್ರಯಕ್ಕೆ ಹೋಗಲೇಬೇಕು. ವರ್ತಮಾನ ಟ್ರ್ಯಾಜಡಿಯನ್ನೆ ಗರ್ಭದಲ್ಲಿ ಧ್ವಂಸಿಕೊಂಡಿದೆ.

The crucial tragedy of human existence is not the suffering imposed upon man by fate or fortune, over which he has no control, but the horror of madness of those monstrous evils he wilfully inflicts upon himsef ....Man is now the sole remaining enemy of mankind.

(The Creative Idea in Art)

ಕಲೆ ಎಂದರೆ, ಒಂದು ಅನುಸಂಧಾನ. ಸತ್ಯದ ತೀವ್ರತರ ಅನುಸಂಧಾನದಿಂದ ನಿರ್ಮಿತವಾದ ಕಲಾಕೃತಿ, ದೇಶ ಮತ್ತು ಕಾಲದ ಹೊರಗೆ ನಿಲ್ಲುತ್ತದೆ. ಕಲೆ ಏಕಾಕಿತನದಿಂದ ಮುಕ್ತವಾಗಿರುತ್ತದೆ, ಅದು ಸೃಷ್ಟಿಯ ಜೊತೆಗೇ ಸದಾ ಕಾಲ ಸಂವಾದದಲ್ಲಿರುತ್ತದೆ, ಇಂಥ ಸಂವಾದವೇ ಹೊಸ ವಿಶ್ವದ ನೀಲಿನಕ್ಷೆಗೆ ಮೂಲ ಪ್ರೇರಕ ಶಕ್ತಿಯಾಗುತ್ತದೆ. ಕಲೆಯಿಂದ ಅಪೇಕ್ಷಿತ ಮಾನಸಿಕ ಸ್ವಾತಂತ್ರ್ಯ ಲಭ್ಯವಾದರೆ ಮಾತ್ರ, ಕಲಾಕೃತಿಯ ಮೌಲ್ಯ ಹೆಚ್ಚಾಗುತ್ತದೆ.

If each individual and his conscience were to be free, so inevitably was the artist, and his function came increasingly, to consist primarily in the truthful expression of his own self. There in lay authenticity.

ಇಂದಿನ ಸಮಾಜ ಸುಮಾರು ಪತ್ತಾರು ಆಕರ್ಷಣೆಗಳಿಗೆ ಬಲಿಯಾಗಿದೆ. ಅಧಿಕಾರ ಮತ್ತು ಹಣದ ಪ್ರಾಬಲ್ಯ ಹೆಚ್ಚಾಗಿದೆ. ಎಲ್ಲ ಕ್ಷೇತ್ರಗಳಲ್ಲಿಯೂ ಸ್ಪರ್ಧೆ ಏರ್ಪಟ್ಟಿದೆ. ಕೇವಲ, ಸಿದ್ಧ ಕಲೆಯ ಪರಂಪರೆಯನ್ನೇ ಮುಂದುವರಿಸಿಕೊಂಡು ಹೋದರೆ ಸಾಲದು. ಜನರ ಬೇಡಿಕೆಯಂತೆ ಕಲೆಯನ್ನು ಮಡಿಸಿಕೊಳ್ಳುವದೂ ಅನೈತಿಕ. ಇಂಥ ವಾತಾವರಣದಲ್ಲಿ ಕಲಾವಿದ ಕೆಲಸ ಮಾಡಬೇಕು. ಹೊಟ್ಟೆಪಾಡಿಗಾಗಿ ಸೈನ್ ಬೋರ್ಡ್, ಪೇಂಟ್ ಮಾಡಬೇಕು, ಬ್ಯಾನರ್‌ಗಳನ್ನು ಬರೆಯಬೇಕು. ಅಥವಾ ಖಾಸಗಿ ಇಲ್ಲವೆ ಸರಕಾರಿ ಸಂಸ್ಥೆಗಳಲ್ಲಿ ಚಾಕರಿ ಮಾಡಬೇಕು. ಇಂಥ ಪರಿಸ್ಥಿತಿಯಲ್ಲಿ ಕಲಾವಿದ ತನ್ನ ಆತ್ಮಸಂತೋಷಕ್ಕೆ ಕೃತಿಗಳನ್ನು ರಚಿಸುವದು ಹೇಗೆ? ತೋರಿಸುವದು ಹೇಗೆ? ಮಾರಾಟ ಮಾಡುವದು ಹೇಗೆ? ಕಲೆಯನ್ನು ಕುರಿತು ತಾತ್ತ್ವಿಕ ಚಿಂತನೆ ಮಾಡಬಹುದು, ವ್ಯವಹಾರದಲ್ಲಿ ಇಂಥ ಚಿಂತನೆಗೆ ಎಂಥ ಬೆಲೆ?

'ಜ್ಞಾನ' ಲಾಭದ ವಸ್ತುವೆಂದು ಭಾವಿಸಬಾರದು. ನಮ್ಮ ಇಂದಿನ ಸ್ಥಿತಿ (ಮುಖ್ಯವಾಗಿ ಕಲೆಗೆ ಸಂಬಂಧಿಸಿದಂತೆ) ಚಿಂತಾಜನಕವಾಗಿದೆ, ಆದರೂ ಕಲಾವಿದ Mervyn Levy ಯ ಈ ಕೆಳಗಿನ, ಮಾತುಗಳು ತುಂಬ ಮಹತ್ವಪೂರ್ಣವಾಗಿವೆ– ತಮ್ಮ ಗ್ರಂಥ The Creative Idea in Art ನಲ್ಲಿ ಹೀಗೆ ಬರೆಯುತ್ತಾರೆ : To those of you who pickup this book for the first time, whether in a bookshop, a library, or perhaps from the bookshelf of a friend– from whom you should borrow it at once– I would say simply this; if you are not yet painting for pleasure, start now. The initiates among you will require no bolstering from me, no reassuring that painting is the most rewarding and fruitful of all hobbies. **To have taken up painting, no matter at what age, or point in one's life, is to have entered in to a new, and deeper awareness of the whole meaning of existence, to have tasted spiritual refreshment, and to have found the perfect form of creative relaxation.**

(ಇದು ವಿವಿಧ ಸಂದರ್ಭಗಳಲ್ಲಿ ಚಂದ್ರಕಾಂತ ಕುಸನೂರ ಅವರು
ವ್ಯಕ್ತಪಡಿಸಿದ ವಿಚಾರಗಳ ಸಂಗ್ರಹ ಲೇಖನ. –ಸಂ.)

✣ ಚಂದ್ರಕಾಂತ ಕುಸನೂರ : # ೫೩೪, ರಾಣಿ ಚೆನ್ನಮ್ಮನಗರ, ೨ನೇ ಹಂತ, ಬೆಳಗಾವಿ - ೬ ✣

ಕುರುಡುಗಣ್ಣು

— ದಮಯಂತಿ ನರೇಗಲ್ಲ

ಪಾತ್ರಗಳು :

ಕುರುಡಿ, ಭ್ರಮರ, ಪಾತರಗಿತ್ತಿ, ಕೋಗಿಲೆ, ಮನುಷ್ಯರು

ದೃಶ್ಯ-೧

ಬೆಳಗಿನ ಹೊತ್ತು. ಎಳೆಬಿಸಿಲು ಹರಡಿದೆ. ಭ್ರಮರ ಮತ್ತು ಪಾತರಗಿತ್ತಿ ಗಿಡದಿಂದ ಗಿಡಕ್ಕೆ ಹಾರುತ್ತಲಿವೆ. ರಂಗದ ತುಂಬ ಸಣ್ಣ-ದೊಡ್ಡ ಗಿಡಗಳಿವೆ. ಭ್ರಮರ - ಪಾತರಗಿತ್ತಿ ಆನಂದದಿಂದ ಹಾರಾಡುತ್ತಲಿವೆ.

ಹಾಡು : ಆ ಗಿಡಾ, ಈ ಗಿಡಾ
ಒಂದೊಂದೂ ಚೇಂಗೊಡಾ;
ಬಾಂದೇವಿಗೆ / ನೆಲದಾಯಿಯು
ಹೂಗೊಂಡೆಯ ಹೊಂಗೊಡಾ...
ಹೂ ಹೂವಿಗೆ ದುಂದುಂಬಿಯ
ಮೈ ಕೈಗಳ ಸ್ಪರ್ಶನಾ;
ಅಪರಂಜಿಯ / ಅನುರಾಗದ
ಮಾಧುರ್ಯದ ಬಂಧನಾ. (ಚೆ.ಕಣವಿಯವರ 'ಕಾವ್ಯಾಕ್ಷಿ'ಯಿಂದ)

ಒಂದು ದೊಡ್ಡ ಗಿಡದ ಕೆಳಗೆ ಕುಳಿತು ಕುರುಡಿ ಅದೇ ಹಾಡನ್ನು ಗುಣುಗುಣಿಸುತ್ತಿದ್ದಾಳೆ. ಸ್ವಲ್ಪ ಹೊತ್ತಿನ ವರೆಗೆ ಭ್ರಮರದ ದನಿ ಕೇಳಿ

ಕುರುಡಿ : ಯಾರದು? ಭರಮಣ್ಣೇನ? ಏ ಭರಮಣ್ಣಾ... ಭರಮಣ್ಣಾ, ಬಾರೋ ಇಲ್ಲೇ ಹಂತ್ಯಾಕ.

ಭ್ರಮರ : (ಹತ್ತಿರ ಬಂದು) ಏ ಏನಬೇ, ಎಷ್ಟ ಸಲಾ ಹೇಳಬೇಕ ನಿನಗ? ನನ್ನ ಹೆಸರು ಭರಮಣ್ಣ ಅಲ್ಲಾ ಅಂತ... ಮತ್ತ-ಮತ್ತ ಭರಮಣ್ಣಾ ಅಂತs ಕರೀತಿಯಲ್ಲಬೇ...

ಕುರುಡಿ : ಅಯ್ಯs... ಮತ್ತೇನಂತ ಕರೀಬೇಕೋ ತಮ್ಮಾ ನಿನ್ನs...?

ಭ್ರಮರ : ಭ್ರಮರಾ... ಭ್ರಮರಾ ಅಂತ ನನ್ನ ಹೆಸರು... ಭರಮಾ ಅಲ್ಲಾ... ಭ್ರ-ಮ-ರಾ...

ಕುರುಡಿ : ಅಯ್ಯs ಶಿವನs ನಾನು ಅದs ಅಂತೀನಲ್ಲೋ ತಮ್ಮಾ... ಭ-ರ-ಮ-ರಾ... ಭ-ರ-ಮ-ರಾ-...

ಭ್ರಮರ : ಭರಮರಾ ಅಲ್ಲಬೇ... ಭ್ರಮರಾ... ಭ್ರಮರಾ...

ಕುರುಡಿ : ನಾನೂ ಹಾಗs ಅಂದೀನಲ್ಲೋ ಹುಡಗಾ... ಮತ್ತ ಚಂದಾಗಿ ಭರಮಣ್ಣಾ ಅಂತ ಕರದಿನಪ್ಪಾ...

ಭ್ರಮರ : ಛೆ, ನಿನಗೇನ ಬರಂಗಿಲ್ಲ ತಗೀ, ನೀ ಸುಮ್ಮನs ತಮ್ಮಾ ಅಂತೀ ಅಲ್ಲಾ ಹಾಂಗs ಅನ್ನು, ಹ್ಞೂ. ಹೇಳು, ಯಾಕ ಕರದಿ ನನ್ನs?

ಕುರುಡಿ : ಅಲ್ಲಾ, ನಿನ್ನ ದನೀ ಕೇಳಿದರ ಯಾಕೋ ಬಾಳ ಸಂತೋಸದಾಗ [illegible] ಅನಿಸಿತs, ಅದಕ್ಕ ನನಗsಟ ಹೇಳಪಾ ಅಂತ ಕರದೆ.

ಭ್ರಮರ : ಅದಕ್ಕಽ... ಹೌದ ನೋಡ ಕುರುಡವ್ವಾ, ಇವತ್ತ ಭಾರೀ ಸಂತೋಷಾಗೇದ. ಏನ ಛಂದ ಬೆಳಗಾಗೇದ ಅಂದೀ, ಸ್ವಚ್ಛ ನೀಲಿ ಆಕಾಶಾ, ಮೈ ಮ್ಯಾಲ ಪುಳಕಾ ಎಬ್ಬಸೂ ಹಾಂಗ ಹೂಬಿಸಿಲು, ಎಲ್ಲಾ ಗಿಡಾ-ಮರಾ ಸಂತೋಷದಿಂದ ಕುಣೇಲಿಕ್ಕೆ ಹತ್ಯಾವ ನೋಡು.

ಕುರುಡಿ : ಹೌದಽ... ಅಽಽಟ ಚಂದದಽನಽ? ಮತ್ತ ನಿನ್ನ ಮೂಕ ತಂಗೀನೂ ಬಂದಾಳೇನ ನಿನ್ನ ಜತೀ ಆಡಾಕ?

ಭ್ರಮರ : ಮೂಕ ತಂಗಿ...? ಯಾರು, ಪಾತರಗಿತ್ತೀನಽ? ಬಂದಾಳಲ್ಲಾ... ಕುರುಡವ್ವಾ, ಆಕೀಗೆ ಮೂಕಿ ಅಂತ ಯಾಕ ಅಂತೀಯಬೇ, ಮೂಕಿ ಏನ ಇಲ್ಲ ಬಿಡು ಆಕೀ.

ಕುರುಡಿ : ನನ್ನ ಕಿವೀಗಂತೂ ಒಂದ ದಿನಾ ಆಕೀ ದನೀ ಕೇಳಿಲ್ಲಾ ನೋಡು. ದನೀನಽ ಕೇಳದಿದ್ದರಽ ನಾ ಗುರುತರಽ ಹ್ಯಾಂಗ ಹಿಡೀಬೇಕು, ನೀನಽ ಹೇಳು?

ಭ್ರಮರ : ನೀವು ಮನಶ್ಯಾರು ಹೀಂಗಽ... ಜಗತ್ತಿನ್ಯಾಗಿನ ಅರ್ಧಾಕ್ಕರ್ಧಾ ದನೀ ಕೇಳೂದಽ ಇಲ್ಲಾ ನಿಮಗ, ಕೇಳಿದ್ದರಾಗೂ ಎಲ್ಲಾ ತಿಳ್ಯೂದುಲ್ಲಾ. ನನಗ ನೋಡು, ಆಕೀ ದನೀನೂ ಕೇಳತಽದ, ಆಕೀ ಹೇಳಿದ್ದೂ ತಿಳೀತದ. (ಅಷ್ಟರಲ್ಲಿ ಹಾರಿ ಹೋಗಿ ಪಾತರಗಿತ್ತಿಯ ಜೊತೆಗೆ ಕೂಡಿಕೊಳ್ಳುವನು.)

ಕುರುಡಿ : ಏ ಭರಮಣ್ಣಾ, ಬಾರೋ, ಹೋಗೇ ಬಿಡಬ್ಯಾಡಾ, ಬಾರೋ ತಮ್ಮಾ.

ಭ್ರಮರ : (ಮತ್ತೆ ಬಂದು) ಏನಬೇ, ಆಡಲಿಕ್ಕೆ ಬಿಡವಲ್ಲಿ ಅಲ್ಲಾ. ಮತ್ತೇನು ನೆನಪಾತು ನಿನಗ?

ಕುರುಡಿ : ಅಲ್ಲೋ ಭರಮಣ್ಣಾ...

ಭ್ರಮರ : ಮತ್ತ ಹಾಂಗಽ ಕರೀತೀಯಾ... ನಾ ಮಾತಾಡೂದುಲ್ಲಾ ನೋಡು ನಿನ್ನ ಜತೀ... ಇನ್ನೊಮ್ಮೆ ಭರಮಣ್ಣಾ ಅಂದರಽ...

ಕುರುಡಿ : ಅಯ್ಯಽ ತಮ್ಮಾ, ಸಿಟ್ಟಿಗೇಳಬ್ಯಾಡೋ. ಅಲ್ಲಾ, ಆಗಲೇ ನೀ ಅಂದೀ... ಗಿಡಾ-ಮರಾ ಕುಣೇಲಿಕ್ಕೆ ಹತ್ಯಾವ ಅಂತ... ಅವು ಹ್ಯಾಗ ಇರ್ತಾವೋ... ಹ್ಯಾಗ ಕುಣೇತಾವ? (ಅತ್ಯಂತ ಕುತೂಹಲದಿಂದ ಕೇಳುವಳು.)

ಭ್ರಮರ : ಅವು ಹ್ಯಾಂಗ ಇರ್ತಾವ... (ಚಿಂತೆಯಲ್ಲಿ ಬಿದ್ದವನಂತೆ) ಅವು ಹ್ಯಾಂಗ ಇರ್ತಾವ... ಇನ್ನ ಈ ಕುರುಡವ್ವಗ ಹ್ಯಾಂಗ ತಿಳಿಸಿ ಹೇಳೂದಪಾ? ಹ್ಞಾ, ಕುರುಡವ್ವಾ. ಹೇಳ್ತೀನಿ ನೋಡು. ನೀ ಮೊದಲ ಸ್ವಲ್ಪ ಎದ್ದ ನಿಂದ್ರು... ಹ್ಞೂ, ಕೈ ಎರಡೂ ಕಡೆ ಹಿಂಗ ಅಗಲ ಚಾಚು...

ಕುರುಡಿ : (ಅವನು ಹೇಳಿದಂತೆ ಮಾಡಿ) ಅಯ್ಯಽ ತಮ್ಮಾ, ಇದೇನೋ. ಕುರುಡವ್ವಾ ಅಂತ ಕುಚ್ಯಾಷ್ಟೀ ಮಾಡತೀ ಏನೋ...

ಭ್ರಮರ : ಇಲ್ಲಬೇ, ನಿನಗ ಗಿಡಾ ಅಂದರ ಹ್ಯಾಂಗಿರತಽದ ತಿಳಿಸಿಕೊಡ್ತೀನಿ ನೋಡು. ಈಗ ನೋಡು, ನಿನಗ ಈ ಎರಡೂ ಕೈಗೆ ಈ ಎರಡೂ ಅಂಗೈ ಅವಽ ಅಲ್ಲಾ... ಅವಕ್ಕ ಐದೈದು ಬಟ್ಟು ಅವಽ ಅಲ್ಲಾ... ಹಾಂಗಽ ಎರಡೂ ಕಡೇ ಇನ್ನೊಂದು ನಾಲ್ಕೆಂಟು ಕೈ ಇದ್ದವು ಅಂತ ತಿಳಕೋ ನಿನಗ.

ಕುರುಡಿ : ಅಯ್ಯs ಶಿವನs, ಬ್ಯಾಡೋ ನಮ್ಮಪ್ಪಾ, ನಾಲ್ಕೆಂಟ ಕೈನs... ಬ್ಯಾಡೋ ನಮ್ಮಪ್ಪಾ... ನಾಲ್ಕೆಂಟು ಕೈ ಜತೀ ನಾಲ್ಕೆಂಟು ಹೊಟ್ಟೀನೂ ಬಂದರs ಅವನ್ನೆಲ್ಲೆ ತುಂಬಸಲ್ಯೋ ಮಾರಾಯಾ? ಒಂದ ಹೊಟ್ಟೀ ತುಂಬಸೂವರಾಗs ಸಾಕ ಸಾಕಾಗೇತಿ.

ಭ್ರಮರ : ಏ ಕುರುಡವ್ವಾ... ನೀನೂ ಒಬ್ಬಾಕೀ... ನಾಲ್ಕೆಂಟು ಹೊಟ್ಟೀನೂ ಬರೂದಲ್ಲಾ, ಕೈನೂ ಬರೂದುಲ್ಲಾ... ಹಾಂಗs ಕಲ್ಪನಾ ಮಾಡು ಅಂದೆ... ಇನ್ನೂ ನಾಲ್ಕೆಂಟು ಕೈ ಇದ್ದೂ ಅಂತ ತಿಳಕೋ ನಿನಗ.. ಅಷ್ಟs ಅಲ್ಲಾ... ಆ ಕೈಗೋಳಿಗೆಲ್ಲಾ ಒಂದೊಂದs ಅಂಗ್ಯೆ ಅಲ್ಲಾ... ಭುಜದಿಂದ ಮುಂಗೈ ತನಕಾ ಸಾಲಕ ಅಂಗ್ಯೆ ಇದ್ದೂ ಅಂತ ತಿಳಕೋ... ಆಗ ನಿನಗ ಹ್ಯಾಂಗ ಕಾಣಸತಿತ್ತು...?

ಕುರುಡಿ : ನನಗೇನು ಕಾಣತsದೋ, ತಮ್ಮಾ, ಏನೇನೂ ಕಾಣೂದುಲ್ಲಾ.

ಭ್ರಮರ : (ನಾಲಿಗ ಕಚ್ಚಿ) ತಪ್ಪಾತಬೇ... ಆಗ ನಿನಗ ಹ್ಯಾಂಗ ಅನಸತಿತ್ತು ಹೇಳು... ಹಾಂಗs ಇರತಾವ ನೋಡು ಗಿಡಾ-ಮರಾ ಅಂದರs... ಈಗ ಅವು ಹ್ಯಾಂಗ ಕುಣೀತಾವ... ತೋರಸ್ತೀನಿ ನೋಡು. ಈಗ ನೀ ಈ ಕೈ ಮ್ಯಾಲೆತ್ತು... ಗೋಣು ಈ ಕಡೆ ಮಾಡು... ಈಗ ಈ ಕೈ ಮ್ಯಾಲೆತ್ತು. ಗೋಣು ಆ ಕಡೆ ಮಾಡು... ಹ್ಞಾ, ಹಾಂಗs... ಈ ಕೈ ಮ್ಯಾಲೆ ಮಾಡು, ಗೋಣು ಈ ಕಡೆ ಮಾಡು... ಹ್ಞಾ... ಹಾಂಗs ಕೈ ಎತ್ತಿ ಆ ಕಡೇ, ಈ ಕಡೇ ತೂಗಾಡು... ಹ್ಞಾ... ಹಿಂಗs ಕುಣೀತಾವ ನೋಡು, ಗಿಡಾ-ಮರಾ ಗಾಳೀ ವಳಗ.

ಕುರುಡಿ : (ಅವನು ಹೇಳಿದಂತೆ ತೂಗಾಡುತ್ತ ಆನಂದಪಡುತ್ತಿರುವಳು.) ಗಿಡಾ ಹೀಗ ಕುಣೀತಾವ, ನೀ ಹಾಡ ಹಾಡತೀ... ನೀ ಹಾಡ ಹಾಡತೀ, ಅವು ಕುಣೀತಾವ... ನಿನ್ನ ಹಾಡ ಕೇಳಿದ ಕೂಡಲೇ ನಾನೂ ಇನಮ್ಯಾಗ ಹೀಗs ಕುಣೀತೀನ ನೋಡ ತಮ್ಮಾ... ಮತ್ತ ನಿನ್ನ ತಂಗಿ ಏನು ಮಾಡತಾಳ?

ಭ್ರಮರ : ನನ್ನ ತಂಗೀನs...? ನನ್ನ ತಂಗಿ ಭಾರೀ ಚೆಲವೀ ನೋಡ ಕುರುಡವ್ವಾ, ಆಕೀ ಒನಪು-ವೈಯಾರಾ ಏನ ಹೇಳ್ಲಿ ನಿನಗ... ಆಕೀ ಕುಣತಾ ಅಂತೂ ವರ್ಣನಾ ಮಾಡಲಿಕ್ಕೆ ಶಕ್ಯ ಇಲ್ಲಾ ಬಿಡು. ಭಾರೀ ಛಂದ ಇರತsದ.

ಕುರುಡಿ : ಏನ ದುರ್ದೈವಿ ನೋಡ ನಾನು... ಇಷ್ಟೆಲ್ಲಾ ಚಂದ ನನ್ನ ಆಸ-ಪಾಸದಾಗ ಇದ್ದರೂ ನನಗ ನೋಡಾಕಾಗಾಕಿಲ್ಲಾ ನೋಡು.

ಅದೇ ಹೊತ್ತಿಗೆ ಇಬ್ಬರು ಪುರುಷರು, ಅವರ ಹಿಂದೆ ಸ್ವಲ್ಪ ದೂರದಲ್ಲಿ ಒಬ್ಬ ಹೆಣ್ಣುಮಗಳು ಆಫೀಸಿಗೆ ಹೋಗುವ ಉಡುಪಿನಲ್ಲಿ ಬರುವರು.

ಭ್ರಮರ : (ಕೂಡಲೇ ಅವರಡೆಗ ಹಾರಿ. ಅವರ ಸುತ್ತಲೂ `ಗುಯ್ಞ್... ಗುಯ್ಞ್' ಅನ್ನುತ್ತ ತಿರುಗುತ್ತ) ಅಣ್ಣಂದಿರಾ, ಅಕ್ಕಂದಿರಾ, ನೋಡ್ರಿ... ಎಷ್ಟ ಛಂದದ ಇವತ್ತಿನ ಬೆಳಗು... ನೋಡ್ರಿ, ಎಷ್ಟ ಛಂದದ ಹೂಗಳು ಎಲ್ಲಾ ಕಡೇ...

ಪುರುಷ - ೧ : ಛೆ ಸರಿಯೋ ಆ ಕಡೆ. ಮುಂಜಾನೆದ್ದು ಏನ ಕಿರಿಕಿರಿ ಮಾಡ್ತೀ...

ಭ್ರಮರ : ನೋಡೆರ ನೋಡ್ರಿ, ಏನು ಸುಂದರ ನೀಲಿ ಆಕಾಶಾ, ಎಷ್ಟು ಆನಂದದಿಂದ ಹಕ್ಕಿ ಹಾರ್‍ಯಾಡಲಿಕ್ಕೆ ಹತ್ಯಾವ.

ಪುರುಷ - ೨ : ಅರೇ ಇವನs, ಇವ್ನಾ ಏನ ಬೆನ್ನ ಹತ್ಯಾನ ನಮಗ! ಮೊದಲs ಆಫೀಸಿಗೆ ಹೊತ್ತಾಗೇದ.

ಪುರುಷ - ೧ : ಅದs ಮತ್ತ. ಮುಂಜಾನೆದ್ದು ಆಫೀಸಿಗೆ ಹೋಗೂದು, ಕೆಲಸಾ ಬೊಗಸೀ ಎಲ್ಲಾ ಬಿಟ್ಟು ಇನ್ನೇನು ಆಕಾಶಾ ನೋಡಕೋತ ಕೂಡೋಣs? ಹುಚ್ಚ ಮುಂಡೇದ್ದು...

ಭ್ರಮರ ಅವರನ್ನು ಬಿಟ್ಟು ಹಿಂದೆ ಬರುತ್ತಿದ್ದ ಮಹಿಳೆಯ ಹತ್ತಿರ ಹೋಗಿ ಸುತ್ತುವರಿಯುತ್ತ

ಭ್ರಮರ : ಅಕ್ಕಾ, ಅಲ್ಲೆ ನೋಡ್ರಿ, ನನ್ನ ತಂಗಿ ಪಾತರಗಿತ್ತಿ, ಎಷ್ಟ ಛಂದ ಇದ್ದಾಳ, ನಿಮಗಿಂತಾ ಛಂದ ಡ್ರೆಸ್ ಹಾಕ್ಕೊಂಡಾಳ ನೋಡ್ರಿ...

ಪಾತರಗಿತ್ತಿ ಪಕ್ಕಾ, ನೋಡೀದೇನs ಅಕ್ಕಾ (ಹಾಡುವದು.)

ಮಹಿಳೆ : ಬಿಡೋ ಮಹಾರಾಯಾ, ನಾಳೆ ನೋಡ್ತೀನಂತ ನಿನ್ನ ತಂಗೀನ್ನ, ಇವತ್ತ ಹೊತ್ತಾಗೇದ ಹಾದೀ ಬಿಡು. ಮತ್ತ ಹೆಡಮಾಸ್ತರ ಕಡೇ ಬೈಸಿಗೋಬೇಕಾಗತೈದ.

ಅವರೆಲ್ಲ ಸಸರನೆ ನಡೆದು ಮರೆಯಾಗುವರು. ಹಿಂದಿನಿಂದ ಇಬ್ಬರು ಶಾಲೆಯ ಮಕ್ಕಳು ಬ್ಯಾಗ್‌ಗಳನ್ನು ಹೊತ್ತುಕೊಂಡು ಬರುವರು. ಅವರನ್ನು ನೋಡಿ ಹಿಗ್ಗಿನಿಂದ ಭ್ರಮರ-ಪಾತರಗಿತ್ತಿ ಎರಡೂ ಅವರ ಕೈ ಹಿಡಿದು ಆಟಕ್ಕೆಳೆಯಲು ಯತ್ನಿಸುವವು.

ಪಾತರಗಿತ್ತಿ : ಏ ಬಾರs, ಆಟಾ ಆಡೂಣು, ಎಂಥಾ ಆರಾಮ ಗಾಳಿ ಅದ... ಗಿಡಾ ಹ್ಯಾಂಗ ಮಸ್ತ ಆಗಿ ತೂಗ್ಯಾಡಲಿಕ್ಕೆ ಹತ್ಯಾವ ನೋಡಲ್ಲೆ... ಬಾರs...

ಭ್ರಮರ : ಬಾರೋ, ಎಳೀ ಬಿಸಲದ, ಗಿಡಾ ಹತ್ತೋ ಆಟಾ ಆಡೂಣು ಬಾರೋ...

ಹುಡುಗ : ಬ್ಯಾಡಪ್ಪಾ, ಈಗ ಇಲ್ಲೆ ಆಡಕೋತ ನಿಂತರs ಸಾಲಿಗೆ ಹೊತ್ತಾಗತೈದ. ಹೊತ್ತಾಗಿ ಹೋದರ ಮಾಸ್ತರು ಬಯ್ಯತಾರ.

ಹುಡುಗಿ : ಹೌದಪಾ, ನಡಿಯೋ ಅಣ್ಣಾ, ಲಗೂ ಲಗೂ ಹೋಗೂಣು. ಮತ್ತ ಸ್ಕೂಲ ಡೈರೀ ವಳಗ ರೆಡ್‌ಮಾರ್ಕ್ ಹಾಕಿದರ ಅಮ್ಮಾನ ಕಡೇನೂ ಬೈಸಿಗೋಬೇಕಾಗತೈದ.

ಅವರೂ ಹೊರಟು ಹೋಗುವರು. ಹಿಂದಿನಿಂದ ಒಬ್ಬ ಹೆಣ್ಣುಮಗಳು ನೀರಿನ ಕೊಡವನ್ನು ಹೊತ್ತು ಬರುವಳು. ಭ್ರಮರ-ಪಾತರಗಿತ್ತಿ ತಮ್ಮಷ್ಟಕ್ಕೆ ತಾವು ಹಾಡುತ್ತ ಆಡುತ್ತಿರುವವು.

ಹೆಣ್ಣುಮಗಳು : ಅವ್ವಯ್ಯಾ, ಎಷ್ಟೊತ್ತಾಗಿ ಹೋತs...! ಸೂರ್ಯಾ ನೆತ್ತೀ ಮ್ಯಾಲ ಬರಲಿಕ್ಕೆ ಹತ್ತಿದಾ... ದೇಶಪಾಂಡೇರ ಮನೀಗೆ ಅಡಿಗಿಗೆ ಹೋಗಬೇಕಿವತ್ತ... ಕೂಸಿಗೆ ಹೆಸರಿಡ್ತಾರ ಅಂತ ಅಡಿಗಿಗೆ ಕರದಾರ... ಇನ್ನ ಅಡಿಗಿ ಯಾವಾಗ ಆಗಬೇಕು, ಏನ ತಾನಾ! ನೀರು ತುಂಬೂದs ಆತು ಇಷ್ಟೊತ್ತನಕಾ...

ಗಡಿಬಿಡಿಯಿಂದ ಆಚೆ-ಈಚೆ ನೋಡದೇ ಸಾಗಿ ಹೋಗುವಳು.

ಆಮೇಲೆ ಊರ ಜನರ ಒಂದು ಗುಂಪು ಬರುವುದು.

ಆಸಾಮಿ - ೧ : ಏ ನಡೀರೆಲೇ, ಹೊತ್ತಾತು, ದೇಶಪಾಂಡೇರು ದಾರೀ ನೋಡ್ತಿರತಾರ. ಗಂಡಸ ಮಗಾ ಹುಟ್ಯಾನ, ತಯಾರೀ ಜೋರದಾರ ಆಗಬೇಕು ಅಂತ ಮೊದಲs ಹೇಳ್ಯಾರ.

ಅವರಿಗೆ ಕಾಣಿಸಲೆಂದು ಭ್ರಮರ-ಪಾತರಗಿತ್ತಿ ಎರಡೂ ಮತ್ತೆ ಮತ್ತೆ ದಾರಿಯಲ್ಲಿ ಬಂದು ನಿಲ್ಲುವವು.

ಆಸಾಮಿ - ೨ : ಹೌದೋ, ನಡೀರಿ ಲಗೂ-ಲಗೂ, ಪೆಂಡಾಲ್ ಹಾಕಬೇಕು...(ಮುಂದೆ ನಿಂತ ಭ್ರಮರ-ಪಾತರಗಿತ್ತಿಗಳ ಕಡೆಗೆ ಕಣ್ಣೆತ್ತಿಯೂ ನೋಡದೆ ಅವನ್ನು ಬದಿಗೆ ಸರಿಸುತ್ತ) ತೋರಣಾ ಕಟ್ಟಬೇಕು, ಲೈಟು ಹಾಕಬೇಕು, ನಡೀರಿ, ಗುಡ್ಡದಷ್ಟ ಕೆಲಸ ಬಿದ್ದsದ... (ಹೊರಟುಹೋಗುವರು.)

ಭ್ರಮರ : ನೋಡಿದ್ಯಾ ಕುರುಡವ್ವಾ, ಯಾರಿಗೂ ಒಂದ ಕ್ಷಣಾ ನಿಂತು ನೋಡಲಿಕ್ಕೆ ವ್ಯಾಳ್ಯಾನs ಇಲ್ಲಾ.

ಪಾತರಗಿತ್ತಿ : ನಾವs ಮುಂದ ಹೋಗಿ ನಿಂತರ ಸುದ್ಧಾ ನೋಡಲಿಲ್ಲಾ.

ಭ್ರಮರ : ಹಿಂದಕs ಕವಿಗಳು ನಮ್ಮನ್ನ ನೋಡಿ ಆನಂದದಿಂದ ಕವಿತಾ ಬರೀತಿದ್ರು.

ಪಾತರಗಿತ್ತಿ : ಈಗs ಕವಿಗಳು ಅಣುಬಾಂಬು, ಜಾರ್ಜ್ ಬುಶ್‌ನ ಮ್ಯಾಲ ಕವಿತಾ ಬರೀತಾರ.

ಕುರುಡಿ : ಹೋಗಲಿ ಬಿಡs ಮಗಳs, ಯಾರ ಯಾಕ ನೋಡವಲ್ಲರ‍್ಯಾಕ, ಬಿಡವಲ್ಲರ‍್ಯಾಕ, ನಾವs ನೋಡೂಣಂತ, ನಾವs ಕುಣಿಯೂಣಂತ.

ಎಲ್ಲರೂ ಹಾಡುತ್ತ ಕುಣಿಯುತೊಡಗುವರು.

ಹಕ್ಕಿ ಜೋಡಿ ಒಂದುಗೂಡಿ
ಉಲಿಯುತಿರುವ ಹುಮ್ಮಸಾ;
ಬನದೈಸಿರಿ
ಕುಶಲ ಕುಂಚ
ಚಿತ್ರದಂತೆ ಹೊಸಹೊಸಾ ('ಕಾವ್ಯಾಕ್ಷಿ'ಯಿಂದ)

ದೃಶ್ಯ-೨

ಭ್ರಮರ-ಪಾತರಗಿತ್ತಿ-ಕೋಗಿಲೆ ರಂಗಮಂಚದ ಮೇಲೆ.

ವಸಂತಮಾಸ ಬಂದಿದೆ. ಎಲ್ಲೆಲ್ಲೂ ಹಸಿರು ಹಬ್ಬಿದೆ. ಹೂಗಳು ಅರಳಿವೆ. ಕೋಗಿಲೆ 'ಕುಹೂ... ಕುಹೂ' ಎಂದು ಹಾಡುತ್ತಿದೆ. ಕುರುಡವ್ವ ಎಂದಿನಂತೆ ತನ್ನ ಸ್ಥಾನದಲ್ಲಿ ಕುಳಿತಿದ್ದಾಳೆ. ಎಲ್ಲರೂ ಕೂಡಿ ಹಾಡುತ್ತಾರೆ.

ಗಿಡದ ರೆಂಬೆ ಕೊಂಬೆಗಳಲಿ ಚಿಗುರು ಕಣ್ಣ ತೆರೆದಿದೆ
ಎಲ್ಲಿ ನೋಡಿದಲ್ಲಿ ಚೆಲುವು ಗೆಲ್ಲುಗಂಬ ನಿಲಿಸಿದೆ!

ಹೊಸತು ಆಸೆ ಮೂಡಿದೆ
ಹರುಷ ಲಾಸ್ಯವಾಡಿದೆ
ಓ! ವಸಂತ, ನಿನಗನಂತ ಆಲಿಂಗನ ಸಂದಿದೆ
ಸೃಷ್ಟಿ ನೋಂತು ನಿಂದಿದೆ!...

ಬನದ ಬಯಕೆ ಮಾಗಿದೆ
ಚೈತ್ರೋದಯವಾಗಿದೆ
ಬಾ ವಸಂತ ನಿನಗನಂತ ಆಲಿಂಗನ ಸಂದಿದೆ!
ಸೃಷ್ಟಿ ನೋಂತು ನಿಂತಿದೆ!

(ಕಣವಿಯವರ 'ಸೃಷ್ಟಿ ನೋಂತು ನಿಂತಿದೆ' ಕವಿತೆಯಿಂದ)

ಕುರುಡಿ : ಯಾಕ್ರೋ, ಎಲ್ಲಾರೂ ಭಾರೀ ಸಂತೋಸದಾಗಿದ್ದಂಗ ಕಾಣತೈತೀ?

ಭ್ರಮರ : ಕುರುಡವ್ವಾ, ನಾವು ಯಾವಾಗಲೂ ಸಂತೋಷದಾಗs ಇರತೀವಿ. ಎಂದರs ನಾವು ಬ್ಯಾಸತ್ತು ಹಾಡೂದು ನಿಲ್ಲಿಸೀವಿ ಏನು, ನೀನs ಹೇಳು.

ಕುರುಡಿ : ಇಲ್ಲಪಾ ಇಲ್ಲಾ, ಸುಳ್ಯಾಕ ಹೇಳಬೇಕು? ನೀವೆಲ್ಲಾ ಹೀಗ ಅದೀರಿ ಅಂತs ನಾ ಜೀವಾ ಹಿಡಕೊಂಡು ಅದೀನಿ ನೋಡ. ಇಲ್ಲಾಂದರ ಈ ಕುರಡೀ ಬಾಳೇ ನರಕ ಆಗತಿತ್ತು. ಅಲ್ಲೋ, ಮತ್ಯಾರು ಹಾಡಾಕ ಹತ್ಯಾರು, ಏನ ಚಂದ ದನೀ ಐತೀ?

ಭ್ರಮರ : ಕೋಗಿಲಾ, ಕುರುಡವ್ವಾ, ಕೋಗಿಲಾ. ಈ ವಸಂತರಾಜಾನ ಆಸ್ಥಾನದ ಗಾಯಕಾ ನೋಡವ್ವಾ... ವಸಂತರಾಜಾ ಬಂದಕೂಡಲೇ ಎಲ್ಲಿದ್ದಲ್ಲಿಂದ ಓಡಿಬರ್ತಾನ. ಖರೇನs ಏನ ಛಂದ ಹಾಡ್ತಾನಲ್ಲs...!

ಕೋಗಿಲ ಹಾಡುತ್ತಿದೆ– 'ಕುಹೂ... ಕುಹೂ...' ಒಮ್ಮೆಲೇ ತೆರೆಯ ಹಿಂದಿನಿಂದ ಬ್ಯಾಂಡ್, ಬಜಂತ್ರಿ, ಪಟಾಕಿಗಳ ಸದ್ದು, ಜನರ ಕೂಗಾಟ ಕೇಳಿಬರುತ್ತಿದೆ.

ಕುರುಡಿ : (ಗಾಬರಿಯಾಗಿ) ಏನೋ ಅದು ಭರಮಣ್ಣಾ, ಏನದು ಗಲಾಟೀ? ಎಂಥಾ ಚಂದ ಹಾಡ ಕೇಳತಿದ್ದಿವಿ, ಕೇಳಧಂಗ ಆತಲ್ಲೋ...

ಭ್ರಮರ : ಅದು ಮೆರವಣಿಗೀ ಗದ್ದಲಾ, ಲಗ್ನದ ಮೆರವಣಿಗಿ ಬರಲಿಕ್ಕೆ ಹತ್ತೇದ ಕುರುಡವ್ವಾ. ಇವತ್ತs ನಮ್ಮ ದೇಶಪಾಂಡೇರ ಮಗನ ಲಗ್ನಾತೇನವಾ... ತೊಗೋ, ಇತ್ಲಾಗs ಬಂತ ನೋಡು.

ಮೆರವಣಿಗೆ ರಂಗಮಂಚದ ಮೇಲೆ ಬರುವದು. ಕಿವಿ ಗಡಚಿಕ್ಕುವಂತೆ ಸದ್ದು. ದಾರಿಯಲ್ಲಿ ಕುಳಿತ ಕುರುಡವ್ವನನ್ನು ಕಂಡು

ಆಸಾಮಿ - ೧ : ಏ ಮುದುಕೀ ಸರೀ ಬಾಜುಕ ಸರೀ, ಹಾದೀ ವಳಗs ಕೂತಬಿಡೂದೇನು? ಸರೀರ್‍ಯೋ, ನೀವೂ ಸರೀರಿ ಆ ಕಡೇ... ಮಕ್ಕಳ ತಂದು, ಎಲ್ಲಾರು ರಸ್ತೆ ತಮ್ಮದs ಅಂತs ತಿಳಕೊಂಡಾರ... ಸರೀರಿ...

ಮೆರವಣಿಗೆ ಮುಂದೆ ಹೋಗುವದು.

ಕುರುಡಿ : ಹೋದರೇನಪಾ ಅವರೆಲ್ಲಾ? ಛಿ, ಛಿ, ಏನ ಸಪ್ಪಳಾ, ಏನ ಗಲಾಟೀ... ಕಿವಿ ಪಡದೇ ಹರದ ಹೋದ್ವು...

ಭ್ರಮರ : ಅಷ್ಟs ಅಲ್ಲಾ ಕುರುಡವ್ವಾ, ನೋಡಿಲ್ಲೆ ಎಷ್ಟು ಧೂಳಾ ಎಬ್ಬಿಸಿ ಹೋದರು... ಕೋಗಿಲಣ್ಣಾ ಸಹಿತ ಕೆಮ್ಮಲಿಕ್ಕೆ ಹತ್ಯಾನ.

ಕುರುಡಿ : ಅವರು ಅಂತವರs ಬಿಡ ತಮ್ಮಾ, ಬ್ಯಾರೇ ಅವರ ಖಬರ ಎಲ್ಲೆ ಅದ ಅವರಿಗೆ... ಮಕ್ಕಳ ತಂದ, ಜಗತ್ತ ಎಲ್ಲಾ ತಮ್ಮದs ಅಂತ ತಿಳಕೊಂಡಾರು...

ಮತ್ತೆ ಭ್ರಮರ, ಪಾತರಗಿತ್ತಿ ಕುಣಿಯತೊಡಗುವವು. ಕೋಗಿಲ ಗಿಡದ ಹಿಂದೆ ನಿಂತು ಹಾಡತೊಡಗುವದು. ಒಬ್ಬ ಟೈ-ಧಾರೀ ಯುವಕ ಕೈಯಲ್ಲಿ ಬ್ರೀಫ್‌ಕೇಸ್ ಹಿಡಿದು ಗಡಿಬಿಡಿಯಲ್ಲಿ ಪ್ರವೇಶಿಸುವನು. ಅವನಿಗೆ ಸುತ್ತಲೂ ಏನು ನಡೆದಿದೆಯೆಂಬುದರ ಅರಿವಿದ್ದಂತಿಲ್ಲ.

ಯುವಕ : (ದಾರಿಯ ಬದಿಯಲ್ಲಿ ನಿಂತು ಏನೋ ಬೆರಳಿನಿಂದ ಎಣಿಸಿ ಲೆಕ್ಕ ಹಾಕುತ್ತಿರುವಂತೆ) ಹ್ಞಾ, ಅಂದರs ಎಲ್ಲಾ ಕೂಡಿ ಸಾಧಾರಣ ಹತ್ತು ಲಕ್ಷದಷ್ಟಾದರೂ ಬೇಕು... ಇನ್ನ ನಾಲ್ಕು ವರ್ಷದೊಳಗs... ಛೆ, ಛೆ, ತಪ್ಪಿತು... ಪತ್ತಲ್ಲಾ, ಇನ್‌ಫ್ಲೇಶನ್ನು ಇತ್ಯಾದಿ ಲೆಕ್ಕಾ ಹಾಕಿದರ ಹದಿನೈದು ಅಂತ ಹಿಡ್ಯೂದs ಒಳ್ಳೇದು.

ಭ್ರಮರ : ತಂಗೀ, ಅಲ್ಲೆ ನೋಡು, ಕುರುಡವ್ವಾ, ನೋಡಲ್ಲೆ...

ಕುರುಡಿ : ಏನೋ ತಮ್ಮಾ, ನಾ ಹ್ಯಾಗ ನೋಡಲ್ಯೋ...

ಭ್ರಮರ : ಮೊನ್ನಿನ್ನs ಲಗ್ನಾ ಮಾಡಕೊಂಡನಲ್ಲಬೇ... ಮೆರವಣಿಗ್ಯಾಗ ಹೋದನಲ್ಲಾ... ಆ ದೇಶಪಾಂಡೇರ ಮಗಾ... ಅವ್ನಾ ಗಡಿಬಿಡೀಲೇ ಎಲ್ಲೋ ಹೊಂಟಾನ... ತಂಗೀ, ನಡೀ, ಹೊಸದಾಗಿ ಲಗ್ನಾದ ಹುಡಗಾ, ನಡೀ, ಅವ್ನಗ ವಸಂತಗಾನಾ ಹಾಡಿ ತೋರಸೂಣು.

ಎರಡೂ ಬಂದು ಅವನ ಸುತ್ತ ಹಾರಾಡುತ್ತ ಹಾಡತೊಡಗುವವು. ಹಿನ್ನೆಲೆಯಲ್ಲಿ ಕೋಗಿಲೆ ಕೂಗುತ್ತದೆ.

೧. ಈಗ ತಾನೆ / ಬಂದಿತೇನೆ
ಮಧುರ ಕಂಠ ಕೋಗಿಲೇ
ಜಗದ ಬಿನದ / ನಿನ್ನ ಮುದದ
ಗಾನವಾಯ್ತೆ ಒಮ್ಮೆಲೇ?

೨. ಕೆಂಪು ತಳಿರು / ಕಂಪಿನಲರು
ಸೂಸುತಿಹುದು ಮಾಮರಾ
ಅಲ್ಲಿ ಕುಳಿತು / ಎಲ್ಲ ಮರೆತು
ಉಲಿಯುತಿರುವೆ ಸುಮಧುರಾ

೩. ರಸದ ಚಿಲುಮೆ / ಹರಿಸಿ, ಒಲುಮೆ
ಸುಧೆಯ ನೀಡು ಕೋಗಿಲೇ
ಮೌನ ಧ್ಯಾನ / ನಿನಗೆ ಊನ
ಕುಕಿಲು ಜಾಣ ಕೋಗಿಲೆ. (ಕಣವಿಯವರ 'ಕೋಗಿಲೆ'ಯಿಂದ)

ಯುವಕ : ಛೆ, ಇವು ಏನು ಗುಯ್ಯ್ಞ್, ಗುಯ್ಯ್ಞ್ ಅಂತ ತ್ರಾಸ ಕೊಡಲಿಕ್ಕೆ ಹತ್ಯಾವ ಒಂದs ಸವನs... (ಕೈ ಬೀಸಿ ಅವನ್ನು ದೂರ ಓಡಿಸುತ್ತ) ನಂದs ಚಿಂತಿ ನನಗ ಹಾಸಿ ಹೊದ್ದುಕೊಳ್ಳೊ ಅಷ್ಟದ, ಸರೀರಿ, ಧೂರ ಸರೀರಿ...

ಭ್ರಮರ : (ಕುರುಡವ್ವನ ಹತ್ತಿರ ಹೋಗಿ) ನೋಡವಾ ಕುರುಡವ್ವಾ, ಏನ ಹೇಳ್ತಾರ ಇವರು! ಇಂಥಾ ದೊಡ್ಡ ದೇಶಪಾಂಡೇರ ಮಗಾ. ಹೊಸಾ ಹೇಣ್ತಿ ಬಂದಾಳ... ಎಂಥಾ

ಚಂದ ವಸಂತ ಮಾಸ ಬಂದsದ... ಏನsರs ಆನಂದ ಅದs ಏನ ನೋಡು ಇವರಿಗೆ? ಇವರಿಗೆ ಇವರದs ಚಿಂತಿ ರಗsಡ ಅದs ಅಂತ!

ಕುರುಡಿ : (ದೇಶಪಾಂಡೆಯವರ ಮಗನನ್ನು ಕುರಿತು) ಯಾಕೋ ತಮ್ಮಾ, ಅಂಥಾದೇನ ಚಿಂತಿ ಮತ್ತ ನಿನಗ? ಕೂಡಿಲ್ಲೆ ಒಂದ ಗಳಿಗೀ... ಮಾತಾಡ ಈ ಕುರುಡೀ ಜತಿ ಒಂದೆರಡು.

ಯುವಕ : ಛೆ, ಕೂಡಲಿಕ್ಕೆ ಎಲ್ಲೆ ಹೊತ್ತದನs ಕುರುಡವ್ವಾ, ಈಗ? ಲಗ್ನಾ ಮಾಡಿಕೊಂಡೇನಿ... ಅಂದಮ್ಯಾಲೆ ಜಂಜಾಟ ಹತ್ತಿತs ನೋಡು... ಮನೀ ಮಾಡಬೇಕು, ನಾಳೆ ಹುಟ್ಟೊ ಮಕ್ಕಳ ಸಾಲೀ ಆ್ಯಡ್ಮಿಶನ್ನು–ಡೊನೇಶನ್ನು ಎಲ್ಲಾ ವ್ಯವಸ್ಥಾ ಆಗಬೇಕು... ಅದಕ್ಕ ದೊಡ್ಡ ಪಗಾರದ ನೌಕರೀ ಎಲ್ಲೆ ಸಿಕ್ಕೀತು ಅಂತ ಹುಡುಕಬೇಕಾಗೇದ ಮೊದಲು ನನಗ, ಅಮೇರಿಕಾ, ಆಸ್ಟ್ರೇಲಿಯಾ, ದುಬಾಯಿ...(ಹೊರಡುವನು.)

ಕುರುಡಿ : ಅಯ್ಯs, ಹಾಗ್ಯಾಕ ಓಡಿ ಹೋಗ್ತೀಯೋ, ನಿಲ್ಲ ಒಂದೀಟು, ನಮ್ಮ ಭರಮಣ್ಣಾ, ಅವನ ತಂಗಿ ನಿನ್ನ ಸಲವಾಗಿ ವಸಂತ ಋತುದ ಹಾಡ ಹಾಡಬೇಕ ಅಂತಾರು, ಕೇಳಿ ಹೋಗ...

ಯುವಕ : ವಸಂತಋತು...? ಅದು ಯಾವ ದೇಶಾ? ಎಲ್ಲಿದs ಅದು? ಅಲ್ಲೆ ಜಾಸ್ತೀ ಪಗಾರಾ ಕೊಡ್ತಾರs? ಅಮೇರಿಕಾದಕಿಂತ ಅಲ್ಲೆ ಹೆಚಿಗೀ ಸಿಗತಿದ್ದರs ಅಲ್ಲೇ ಹೋಗ್ತೀನಿ.

ಕುರುಡಿ : ಅಯ್ಯs, ನನ್ನ ಸಿವನs... (ಹಣೆಗೆ ಕೈಹಚ್ಚಿ ಕೂಡುವಳು.)

ಯುವಕ : ಕುರುಡವ್ವಾ, ನೀ ಗಾಬರಿ ಆಗಬ್ಯಾಡಾ, ಬೇಕಾದಷ್ಟು ದೂರ ಇರವಲ್ಲದ್ಯಾಕ, ನಾ ಹೋಗಲಿಕ್ಕೆ ತಯಾರಿದ್ದೀನಿ. ಭಕ್ಕಂ ಪಗಾರ ಒಂದು ಸಿಕ್ಕರಾತು, ನೋಡು, ನನಗ ಇನ್ನೊಂದು ನಾಲ್ಕ ವರ್ಷದಾಗ ಹದಿನೈದು ಲಕ್ಷರs ಗಳಿಸಬೇಕಾಗೇದ.

ಅವನ ಮಾತಿನ ಕಡೆಗ ಲಕ್ಷ್ಯಗೊಡದ ಕೋಗಿಲೆ-ಭ್ರಮರ-ಪಾತರಗಿತ್ತಿ ಹಾಡುತ್ತ ಹಾರಾಡತೊಡಗುವವು.

ಯುವಕ : (ಏನೂ ತಿಳಿಯದೇ ತಲೆ ಅಲ್ಲಾಡಿಸುತ್ತ) ಏ, ಏನ ವಿಚಿತ್ರ ಜನಾ ಇದ್ದಾರ ಇವರು? ನಾ ಏನೋ ಕೇಳಿದರ ಏನೋ ಹಾಡು ಸುರು ಮಾಡಿದರು! ಬ್ಯಾರೇ ಉದ್ಯೋಗ ಇಲ್ಲದ ಮಂದೀ... ಇವರ ಜೋಡಿ ನಾ ಕೂತರs ನಡೀತದs...? ಮುಂದಿನ ಕೆಲಸಕ್ಕ ಹತ್ತಬೇಕು... ಆ ಏಜೆಂಟನ ಕಡೇ ಹೋಗಬೇಕು ಮೊದಲ... ಆದಷ್ಟ ಲಗೂ ಕೆಲಸಾ ಮಾಡಿಕೊಡಪಾ ಅಂತ ಹೇಳಬೇಕು.

ಗಡಿಬಿಡಿಯಿಂದ ಹೊರಟು ಹೋಗುವನು.

ಭ್ರಮರ : ಹೋಗೇ ಬಿಟ್ರು, ಕುರುಡವ್ವಾ, ಯಾರೂ ಇಲ್ಲಾ ನಮ್ಮ ಹಾಡ ಕೇಳ್ಳಿಕ್ಕೆ...

ಕುರುಡಿ : ಹೋಗೊಲ್ಲರ್ಯಾಕ ಬಿಡೋ... ಕೆಲಸ ಇದ್ದವರೆಲ್ಲಾ ತಮ್ಮ-ತಮ್ಮ ಕೆಲಸಕ್ಕ ಹೋಗಲಿ, ನಾ ಅದೀನಲ್ಲಾ, ನಾ ಕೇಳತೀನಿ. ನೀವು ಹಾಡ್ರಿ, ನಿಮ್ಮ ಹಾಡ

ಕೇಳತಿದ್ವರs ನನಗ ಎಲ್ಲಾ ಕಾಣಿಸಿದಂಗ ಆಕ್ಕೈತಿ ನೋಡು... ನೀವು ಹಾಡ್ರಿ, ನಾ ಕೇಳತೀನಿ, ಇಡೀ ದಿನಾ ಕೇಳತೀನಿ.

ಅವು ಹಾಡುವವು, ಆವಳು ಆನಂದದಿಂದ ತಲೆದೂಗುತ್ತ ಕೇಳುವಳು.

ದೃಶ್ಯ- ೩

ಅದೇ ಹಿನ್ನಲೆ. ಚಳಿಗಾಲ. ಹಕ್ಕಿಗಳ ಚಿಲಿಪಿಲಿ. ಭ್ರಮರ, ಪಾತರಗಿತ್ತಿ ಎಂದಿನಂತೆ ಗಿಡದಿಂದ ಗಿಡಕ್ಕೆ ಹಾರುತ್ತಿವೆ.

ಕುರುಡವ್ವ ಮುದುಕಿಯಾಗಿದ್ದಾಳೆ.

ದೂರದಿಂದ `ರಾಮ- ರಾಮ, ಹರೇ ರಾಮ` ಮಂತ್ರ ಕೇಳಿಬರುತ್ತದೆ.

ಕುರುಡಿ : ಏನೋ ಇದು ತಮ್ಮಾ? ರಾಮ-ರಾಮ ಯಾಕ ಸುರು ಆಗ್ಯೆತೋ?

ಭ್ರಮರ : ತಡೀ, ಕುರುಡವ್ವಾ, ನೋಡಿ ಬರ್ತೀನಿ.? (ಹಾರಿ ಹೋಗಿ ತಿರುಗಿ ಬಂದು) ಘಾತ ಆತಬೇ ಅಜ್ಜೀ, ನಮ್ಮ ದೇಶಪಾಂಡೇರು ಹೋಗಿಬಿಟ್ಟರಂತ ಮುಂಜಾಲೇ... ಒಮ್ಮಿಂದೊಮ್ಮಿಗಿಲೇ... ಸ್ಮಶಾನಕ್ಕ ತೊಗೊಂಡ ಹೊಂಟಾರ.

ಕುರುಡಿ : ಯಾರೋ, ದೊಡ್ಡ ದೇಸಪಾಂಡ್ಯಾರೇನೋ?

ಭ್ರಮರ : ಛೆ, ನೀನೂ ಎಲ್ಲೆ ಇದ್ದೀಯಬೇ, ದೊಡ್ಡ ದೇಶಪಾಂಡೇರು ಹೋಗಿ ಯಾವ ದಿನಾ ಆತು. ಸಣ್ಣ ದೇಶಪಾಂಡೇರು ಹೋದರಂತs ಅಜ್ಜೀ, ಇವತ್ತ... ಭಾಳ ಕೆಟ್ಟಾತು ನೋಡು...

ಕುರುಡಿ : ಅಯ್ಯs, ನನ್ನ ಶಿವನs... ಈಟ ಬ್ಯಾಗ ಹೋಗಿಬಿಟ್ಟನs ಮಾರಾಯಾ... ನನಕಿಂತಾ ಸಣ್ಣಾವ್ನಾ ನೋಡು... ಈಟ ಬ್ಯಾಗ ಹೋಗಿಬಿಟ್ಟನs... ಪಾಪ... ಹ್ಯಾಗ ಹೋದನಂತೋ... ಏನಾತಂತs...?

ಭ್ರಮರ : ಏನೋ, ಹಾರ್ಟ್ ಅಟ್ಯಾಕ್ ಅಂತ ಅಂತಿದ್ವರಬೇ. ನನಗೇನ ತಿಳೀಲಿಲ್ಲಾ ಹಂಗಂದರೇನಂತ...

ಕುರುಡಿ : ಏನರs ಬ್ಯಾನಿ ಇದ್ದೀತೇಳ... ನನಗರs ಏನ ತಿಳೀತೈತೀ...? ಎಷ್ಟ ಚಾಲವರಿದ ಹೇಳಿದೆ ನೋಡ ಅವ್ನಗ... ಒಂದ ಕ್ಷಣಾ ಕುಂಡ್ರೋ ಇಲ್ಲೇ, ಆರಾಮ ತೊಗೋ, ಹಾಡ ಕೇಳು ಅಂತ... ಹೋಗೋ ಹೊತ್ನಾಗ ಹೇಳಿದೆ– ಬರೋ ಹೊತ್ನಾಗೂ ಹೇಳಿದೆ. ಕೇಳಲಿಲ್ಲಾ ನೋಡು... ಧಾವ-ಧಾವಂತ ಒಂದs ಸಮಾ ಓಡೇ ಓಡಿದಾ... ಓಡೇ ಓಡಿದಾ... ಕಡಿಗೂ ಯಾವ ಹಾಡೂ ಕೇಳದs ಹೋಗೇಬಿಟ್ಟನs... ಸಿವ-ಸಿವಾ... ಎಂದ ತಿಳವಳಿಕೀ ಕೊಡ್ತೀಯಪ್ಪಾ ಇವರಿಗೆ.

ಭ್ರಮರ : ಹೆಣಾ ಹೊತಗೊಂಡು ಈ ಕಡೇನs ಬರಲಿಕ್ಕೆ ಹತ್ಯಾರ ಕುರುಡವ್ವಾ, ...ಅಬಾಬಾಬಾ...! ಎಷ್ಟ ಜನಾ ಕೂಡ್ಯಾರ!

ಪಾತರಗಿತ್ತಿ : ಅಯ್ಯ, ಇರೂವಾಗ ಯಾವಾಗೂ ಯಾರೂ ಇದ್ದಿದ್ದಿಲ್ಲಾ ನೋಡು ಅವರ ಜತೀ, ಯಾವಾಗಲೂ ಒಬ್ಬರs ಓಡಾಡತಿದ್ವರು... ಈಗ ನೋಡು, ಎಷ್ಟು ಮಂದಿ ಇದ್ದಾರ!

ಸ್ಮಶಾನಯಾತ್ರೆಯ ಮೆರವಣಿಗೆ ಬರುವದು. ಅವರ ಹಿಂದೆ ನಡೆವ ಇಬ್ಬರ ನಡುವೆ ಮಾತುಗಳು.

ಆಸಾಮಿ - ೧: ಏನ ಒಮ್ಮಿಂದೊಮ್ಮಿಗಿಲೇ ಅನಾಹುತ ಆಗಿ ಹೋತ ನೋಡ್ರಿ... ಅಲ್ರೀ, ನಿನ್ನೆ ಸಂಜೀನ್ಯಾಗ ಇಬ್ಬರೂ ಕೂಡೇ ಬಂದೀವಿ ಮನೀಗೆ... ಇವತ್ತ ಮುಂಜಾನೆದ್ದು ಮುಂಬಯಿಗೆ ಹೋಗಬೇಕು ಮೀಟಿಂಗಿಗೆ ಅಂತ ಹೇಳ್ಲಿಕ್ಕೆ ಹತ್ತಿದ್ದರು.

ಆಸಾಮಿ - ೨: ಹೌದ್ರೀ, ನನಗೂ ಮುಂಜಾನೆದ್ದ ಕೂಡಲೇ ಸುದ್ದೀ ಕೇಳಿ ಶಾಕ್ ಆಧಂಗಾತ್ರೆಪಾ... ಅಲ್ಲಾ, ಏನ ಒಂದು ಜ್ವರಾ ಇಲ್ಲಾ, ಛಳಿ ಇಲ್ಲಾ... ನಿನ್ನೆ ಇದ್ದ ಮನಶ್ಯಾ ಇವತ್ತ ಇಲ್ಲಾ ಅಂದರs...

ಆಸಾಮಿ - ೧: ಯಾಕs, ಅವರ ಮಗಾ ಬಂದಿಲ್ಲೇನು? ಯಾರೋ ಬ್ಯಾರೇ ಅವರs ಅಗ್ನೀ ಹಿಡದಾರಲ್ಲಾ?

ಆಸಾಮಿ - ೨ : ಅವ್ನಾ ಎಲ್ಲೆ ಬರತಾನ್ರೀ... ಅಮೇರಿಕಾದಿಂದ ಬರಬೇಕು ಅಂದರs ಕನಿಷ್ಠ ಇಪ್ಪತ್ತನಾಲ್ಕು ತಾಸಾದರೂ ಬೇಕು... ಅಷ್ಟೊತ್ತು ಹೆಣಾ ಇಟಗೊಂಡು ಕೂಡಲಿಕ್ಕಾಗತsದೇನ್ರೆಪಾ, ನೀವs ಹೇಳ್ರಿ.

ಆಸಾಮಿ - ೧: ಹೌದು ಬಿಡ್ರಿ, ನೀವನ್ನೂದೂ ಖರೇ ಅದ. ಎಲ್ಲಾ ಮುಗಿಯೂ ತನಕಾ ಓಣ್ಯಾಗಿನ ಮಂದೆಲ್ಲಾ ಕಾಯಕೊಂಡು ಕೂಡಬೇಕಾಗತsದ... ಎಲ್ಲಾ ಭಾಳ ಪ್ರಾಬ್ಲೆಮ್ ಆಗತsದ ಬಿಡ್ರಿ.

ಆಸಾಮಿ - ೨: ಅದಕ್ಕs ನಾನs ಹೇಳಿದ್ನೇನ್ರೆಪಾ ಅವರ ಮನೀ ಅವರಿಗೆ... ಮಗನ ಹಾದೀ ಕಾಯಕೋತ ಕೂಡಬ್ಯಾಡ್ರಿ ಅಂತ...

ಮೆರವಣಿಗೆ ಮುಂದೆ ಹೋಗುವದು.

ಕುರುಡಿ : ಖರೆ ಐತ್ರೆಪಾ... ಎಲ್ಲಾ ಹೊತ್ತಿಗೆ ಮುಗೀಬೇಕು, ಅದು ಮುಖ್ಯ. ಯಾರೂ ಯಾರಿಗೂ ಕಾಯೂ ಹಾಂಗಿಲ್ಲಾ. ಎಲ್ಲಾರೂ ಎಲ್ಲಾದಕ್ಕೂ ಓಡೂದs ಓಡೂದು. ಎಲ್ಲ್ಯೂ ನಿಲ್ಲದs ಓಡೂದs ಓಡೂದು.

ಭ್ರಮರ : ಗಡಿಬಿಡೀಲೇ ದೇಶಪಾಂಡೇರು ಹೋಗೇಬಿಟ್ಟರು, ಹುಟ್ಟಿದಾಗಿನಿಂದ ಸಾಯೂ ತನಕಾ ತಮ್ಮ ಅವಸರದಾಗs ತಾವಿದ್ದರು ನೋಡು ಅವರು.

ಕುರುಡಿ : ಸತ್ತ ಮ್ಯಾಲರs ಎಲ್ಲೆ ವ್ಯಾಳ್ಯಾ ಇತ್ತು ಅವರಿಗೆ, ಹೋಗೇ ಬಿಟ್ರು ನೋಡು... ಹೋಗವರು ಹೋಗವಲ್ಲರ್ಯಾಕ, ಬರವರು ಬರೊಲ್ಲರ್ಯಾಕ... ಭಳೀ ಕಡಿಮ್ಯಾತು, ಬಿಸಲು ಹೊರಗ ಬಂತ ಅಲ್ಲs...? ನೀವು ನಿಮ್ಮ ಹಾಡು ಸುರು ಮಾಡ್ರಿ...

ಭ್ರಮರ-ಪಾತರಗಿತ್ತಿ ಮೊದಲನೆಯ ದೃಶ್ಯದ ಕವಿತೆಯನ್ನು ಹಾಡುತ್ತ ಆಡತೊಡಗುವವು.

ಸಮಾಪ್ತ

✤ ದಮಯಂತಿ ನರೇಗಲ್ಲ :

'ಇಂಪನ', ೪ನೆಯ ಕ್ರಾಸ್, ಸಾಧನಕೇರಿ, ಧಾರವಾಡ-೫೮೦ ೦೦೮ ✤

ಗುರು... ಸದಾ ಹಸಿರು

— ವಿಜಯಕಾಂತ ಪಾಟೀಲ

ಹಾವೇರಿ ಜಿಲ್ಲೆಯ ಹಾನಗಲ್ಲ ತಾಲೂಕಿನ ಕ್ಯಾಸನೂರು ನನ್ನ ಹುಟ್ಟೂರು. ಉತ್ತರ ಕನ್ನಡ. ಶಿವಮೊಗ್ಗ ಜಿಲ್ಲೆಯ ಗಡಿಯಲ್ಲಿರುವ ನನ್ನೂರು ಮಲೆನಾಡೇ ಆಗಿತ್ತಂತೆ. ಈಗ ಅರೆಮಲೆನಾಡೆಂದರೂ ಆದೀತು; ಬಯಲುಸೀಮೆಯೆಂದರೂ ಆದೀತು ಅನ್ನುವಂತಿದೆ.

ನನ್ನೂರಲ್ಲಿ ನಾನು ಒಂದರಿಂದ ಏಳನೇ ಇಯತ್ತೆಯ ವರೆಗೂ ಓದಿದೆ. ಆ ಹೊತ್ತಿನಲ್ಲಿ ನನ್ನೂರ ಕೆರೆ-ಕಟ್ಟೆ, ಕಾಡು-ಗೀಡು, ಗದ್ದೆ ಗಿಡಗಂಟೆಗಳೂ ನನ್ನ ಓದಿನ ಜೊತೆಗಿದ್ದವು. ನನ್ನೂರು ಕುಗ್ರಾಮವೇನೂ ಅಲ್ಲ. ಹೇಳಿಕೊಳ್ಳುವಂತಹ ಪ್ರತಿಭೆಗಳು ಇಲ್ಲಿಂದ ಹೊರಬರದಿದ್ದರೂ ಹೊಟ್ಟೆ-ಬಟ್ಟೆ-ಸೂರು ಮಟ್ಟಿಗೆ ತೊಂದರೆಯಿಲ್ಲವೆನ್ನುವಂತಿತ್ತು. ನಮ್ಮ ಬಾಲ್ಯ ವಿದ್ಯುತ್ತಿನ ಬೆಳಕಿನಿಂದ ದೂರವಾಗಿರಲಿಲ್ಲ. ಚಿಮಣಿ-ಲಾಟೀನಿನ ಅನುಭವ ಇಲ್ಲವೆಂತಲೂ ಅಲ್ಲ. ಒಟ್ಟಿನಲ್ಲಿ ಇಡೀ ನನ್ನ ಪ್ರಾಥಮಿಕ ಶಿಕ್ಷಣದ ಹಂತ ಎಲ್ಲ ರೀತಿಯಿಂದಲೂ ಪ್ರಕಾಶಮಾನವಾಗಿತ್ತು. ಬೆಳಕು ತೋರುವ ದಿಗಿಲು ಹರಿಸುವ ಗುರುಗಳ ಸಾಮೀಪ್ಯದಿಂದಾಗಿ 'ಶಾಲೆ' ಎನ್ನುವುದು ದಿನ ಬೆಳಗಾದರೆ ನನ್ನನ್ನು ಕರೆಯುತ್ತಿತ್ತು.

ನಮ್ಮೂರಿನವರೇ ಆದ ಗುರು ಕಟ್ಟಿಮನಿ ಬಸಪ್ಪನವರ ಹೃದಯಪೂರ್ವಕ ಶಿಕ್ಷಣ ನನ್ನನ್ನು ಇವತ್ತಿಗೂ ಜಾಗ್ರತಗೊಳಿಸುತ್ತಿರುವುದು ನನ್ನ ಪುಣ್ಯವೂ ಹೌದು. ಚಿತ್ತದ ರುಚಿ ತೋರಿಸದೇ ಅತ್ಯಂತ ಪ್ರೀತಿಯಿಂದ ಅವರು ಉಣಬಡಿಸಿದ ಅಚ್ಚ ಕನ್ನಡ, ಲೆಕ್ಕ, ಆಂಗ್ಲ ಭಾಷೆಯೆಂಬ ಅಚ್ಚರಿ, ಬದುಕಿನ ಪರಿ ಎಲ್ಲವನ್ನೂ ತಂಪು ಹೊತ್ತಿನಲ್ಲೇ ನೆನೆಯಬೇಕು. ನನ್ನ ಆರಂಭದ ಗುರುಗಳಾದ ಬಸಪ್ಪ ಮಾಸ್ತರ್‌ರೆಂದರೆ ಹಲವು ಭಾಷೆಗಳ ಒಲವು ಅಚ್ಚರಿಗಳ ಖನಿಯಾಗಿದ್ದರು. ಅವರ ಜ್ಞಾಪಕ ಶಕ್ತಿ ಅಗಾಧ. ಈ ಹೊತ್ತಿಗೂ ಅವರು ಸಿಕ್ಕರೆ ನನಗೆ 'ಪಾಠ' ಹೇಳದೇ ಹೋಗುವುದೇ ಇಲ್ಲ. ಒಂದಾದರೂ ಹೊಸ ಸಂಗತಿಯನ್ನು ತಲೆ ತುಂಬಿಯೇ ತೀರುತ್ತಾರೆ. ಪಾಠ ಹೇಳುವ ಗಂಭೀರತೆಯ ಮಧ್ಯೆಯೂ ನಮ್ಮ ಆಸಕ್ತಿ ಕುಂದದಂತೆ ವ್ಯವಹರಿಸುವ ಈ ಚಾಣಾಕ್ಷಮತಿ ಗುರು ಕಟಾಚಾರದ ಇಂದಿನ ಯಾಂತ್ರಿಕ ಬದುಕಿನ ನಡುವೆ 'ನಿಜದ ಗುರು'ವಾಗಿ ಗೋಚರಿಸುತ್ತಿರುವುದು ಅಸಾಮಾನ್ಯವೇ. ಹೈಸ್ಕೂಲು ದಿನಗಳಲ್ಲಿ ಕವಿತೆ ಬರೆಯಲಾರಂಭಿಸಿದ ನನ್ನ ಹಿಂದೆ ಈ ಗುರುಗಳ ಕಾಣದ ಕೈ ಇತ್ತೆನ್ನುವುದೂ ಸತ್ಯವೇ. ಶುದ್ಧ ಕನ್ನಡದ ಬಗೆಗಿನ ಅವರ ಕಳಕಳಿ ಎಲ್ಲ ಭಾಷಾ ಕಲಿಕೆಯ ಹಂತದಲ್ಲೂ ವ್ಯಕ್ತವಾಗುತ್ತಿತ್ತು. ಅವರು ನಮಗೆಲ್ಲ ಕಠಿಣ ಶಬ್ದಗಳನ್ನು ಹೇಳಿ (ಶುದ್ಧ ಬರಹ ರೂಢಿ) ಬರೆಯಿಸುವಾಗಿನ ನೆನಪು ನನಗೀಗ ಬರುತ್ತಿದೆ. ಆಂಗ್ಲ ಶಬ್ದಗಳನ್ನು ಸರಿಯಾಗಿ ಬರೆಯುತ್ತಿದ್ದ ನಾನು ಕನ್ನಡ ಶಬ್ದಗಳನ್ನು ಬರೆಯುವಾಗ ಅನಾವಶ್ಯಕವಾಗಿ ಕಾಗುಣಿತ ದೋಷಗಳನ್ನು ಮಾಡುತ್ತಿದ್ದೆ. ಕೊಡಬಾರದ ಕಡೆ ದೀರ್ಘ, ಒತ್ತು ಕೊಟ್ಟುಬಿಡುತ್ತಿದ್ದೆ. ಅದನ್ನೆಲ್ಲ ತಿದ್ದಿ ತೀಡಿದ ಶ್ರೇಯಸ್ಸು ಅವರಿಗೇ ಸಲ್ಲಬೇಕು.

ನಾನಿನ್ನೂ ಸಾಹಿತ್ಯಕ್ಷೇತ್ರದಲ್ಲಿ ಅಂಬೆಗಾಲಿಡುತ್ತಿದ್ದರೂ ಅದು ಬಸಪ್ಪ ಮಾಸ್ತರರಿಗೆ ಮಾತ್ರ ಜ್ಞಾನಪೀಠ ಸಮಾನ ಸಾಧನೆಯೆಂಬ ಹೆಮ್ಮೆ. ಅದನ್ನು ಕಂಡಕಂಡವರಿಗೆ ಹೇಳಿ ಖುಷಿಪಡುವುದು ಅವರ ಜಾಯಮಾನ. ನನ್ನ ವಿದ್ಯಾರ್ಥಿ ಜೀವನದಲ್ಲಿ ಬಂದು ಹೋಗುವ ಈ ಗುರುಗಳಲ್ಲಿ ಹಲವರು ಬರೀ ಪಠ್ಯದ ಗುರುಗಳಾಗಿ ಉಳಿಯದೇ ಅವರ ವ್ಯಕ್ತಿತ್ವ, ನಡವಳಿಕೆ, ಮಾತುಗಳಿಂದಾಗಿ ನನ್ನ

ವ್ಯಕ್ತಿತ್ವ ರೂಪಿಸಿದವರು; ಹೆಜ್ಜೆ ಹೆಜ್ಜೆಗೂ ಗುರುವಾಗೇ ಉಳಿದವರು. ಈ ನಿಟ್ಟಿನಲ್ಲಿ ಬಸಪ್ಪ ಮಾಸ್ತರರೇ ಮೊದಲಿಗರು ಕೂಡ. ಪಠ್ಯವನ್ನು ಹೊರತುಪಡಿಸಿ ಅವರು 'ಮಾಸ್ತರ್' ಆದ ಘಟನೆಯೊಂದು ನನ್ನಲ್ಲಿನ್ನೂ ಹಸಿರಾಗೇ ಇದೆ.

ಆಗ ನಾನಿನ್ನೂ ಐದೋ ಆರನೆಯದೋ ಇಯತ್ತೆಯ ವಿದ್ಯಾರ್ಥಿಯಾಗಿದ್ದಿರಬಹುದು. ನಮ್ಮೂರಿನ ಕನ್ನಡ ಶಾಲೆಯಲ್ಲಿಯೂ ಗಣೇಶನ ಹಬ್ಬ ಆಚರಿಸಲಾಗುತ್ತಿತ್ತು. ಊರಿನ ಹೆಂಗಳೆಯರ ಚೆಂದನೆಯ ಸೀರೆ, ಬೆಲೆಬಾಳುವ ಒಡವೆಗಳಿಂದ ಗಣೇಶ ಮಂಟಪವನ್ನು ಶೃಂಗಾರಗೊಳಿಸಿದ್ದರಿಂದ ಅದೆಲ್ಲವನ್ನು ರಾತ್ರಿ ಕಾಯುವ ಕೆಲಸಕ್ಕೆ ನಮ್ಮ ಐದಾರು ಹುಡುಗರ ತಂಡವನ್ನು ಗುರುಗಳು ನಿಯೋಜಿಸಿದ್ದರು. ಬಾಲ್ಯದ ಹುಡುಗಾಟದ ಹುಚ್ಚಿನ ನಾವೆಲ್ಲರೂ ರಾತ್ರಿ ಧೈರ್ಯ ಸಾಲದ್ದರಿಂದ ಯಾರೋ ಹೇಳಿದ ಮಾತಿನ ಸ್ಫೂರ್ತಿಯಿಂದ 'ಬೀಡಿ' ಸೇದಿ ಧೈರ್ಯ ತಂದುಕೊಳ್ಳಲು ತೀರ್ಮಾನಿಸಿದೆವು. ಗಣೇಶ ಮಾರ್ಕಿನ ಬೀಡಿಗಳನ್ನೇ ತಂದು ಒಬ್ಬೊಬ್ಬರು ಒಂದೊಂದಾಗಿ ಬೀಡಿ ಸೇದುತ್ತ ಕೆಮ್ಮುತ್ತ ಇಡೀ ಗಣೇಶ ಮಂಟಪವಿದ್ದ ರೂಮಿನ ತುಂಬ ಹೊಗೆ ತುಂಬಿ ಯಾವುದೋ ಅವ್ಯಕ್ತ ಶಕ್ತಿ ಆವರಿಸಿಕೊಂಡಂತೆ ತೋರುತ್ತಿದ್ದೆವು. ಅದೇ ಹೊತ್ತಿನಲ್ಲಿ ಬಾಗಿಲು ಬಡಿದ ಸದ್ದಾದದ್ದೇ ತಡ ಒಬ್ಬೊಬ್ಬನ ಬಾಯಲ್ಲೂ ಬೈಗುಳಗಳ ಭಯಂಕರ ಮಳೆ; ದೈವವೇ ಖುದ್ದು ಒಳಸೇರಿದಂತೆ ಮಾತಾಡತೊಡಗಿದೆವು. ಬಾಗಿಲು ಬಡಿದ ವ್ಯಕ್ತಿ 'ಬಸಪ್ಪ ಮಾಸ್ತರ್' ಎಂದು ಯಾರಿಗೂ ನಿರೀಕ್ಷೆಯೇ ಇರಲಿಲ್ಲ. ಮತ್ತೆ ಏಕವಚನದ ಸಂಬೋಧನೆಯಲ್ಲಿ ತೊಡಗಿದ ನಮಗೆ 'ನಾನ್‌ಸೆನ್ಸ್... ಬಾಗಿಲು ತೆಗಿರೋ... ನಾನು!' ಎಂದು ಮಾಸ್ತರ್ ಗದರಿದಾಗ ನಾವೆಲ್ಲ ಉಚ್ಚೆ ಹೊಯ್ದುಕೊಳ್ಳುವುದೊಂದೇ ಬಾಕಿ. ಎಲ್ಲರೂ ಹೊಗೆ ಓಡಿಸುವ ಕೆಲಸದಲ್ಲಿ ನಿರತರಾಗಿ, ಕೆಮ್ಮಿ ಸೀನಿ ಏನೂ ಆಗಿಲ್ಲವೆಂಬಂತೆ ತೋರಲು ಪಟ್ಟ ಪಡಿಪಾಟಲು ಹೇಳತೀರದು. ಆದರೂ ಧೈರ್ಯ ಮಾಡಿ ಬಾಗಿಲು ತೆಗೆದ ತಕ್ಷಣ ಮಾಸ್ತರ್‌ರು ನಾವು ಮಲಗಲು ಹಾಸಿಕೊಂಡ ಚಾಪೆಗಳ ಕೆಳಗಿಟ್ಟ ಬೀಡಿಗಳನ್ನು ವಶಪಡಿಸಿಕೊಂಡು ವಿಶೇಷ ಪ್ರೀತಿಯಿದ್ದ ನನ್ನನ್ನು ಹಿಡಿದುಕೊಂಡು 'ಈ ಹುಡುಗನನ್ನೂ ಹಾಳು ಮಾಡಿ ಬಿಟ್ರೆಲ್ಲೋ...!' ಎಂದು ಒಂದಿಬ್ಬರು ಹಿರಿಯ ವಿದ್ಯಾರ್ಥಿಗಳ ಕಿವಿ ಹಿಂಡಿದರು. ಗಣೇಶನ ಎದುರು ನಮ್ಮನ್ನೆಲ್ಲ ಸಾಲಾಗಿ ನಿಲ್ಲಿಸಿ ಪ್ರಮಾಣ ಮಾಡಿಸಿದರು: 'ನಾವು ಇನ್ನು ಮೇಲೆ ಎಂದೂ ದುಶ್ಚಟಗಳನ್ನು ಮಾಡುವುದಿಲ್ಲ; ಸುಳ್ಳು ಹೇಳುವುದಿಲ್ಲ!' ಮರುದಿನವೇ ಹುಡುಗಾಟದ ಹುಡುಗರಾದ ನಾವು ಊರಿನ ಕಾಡಿನಲ್ಲಿ ಹುದುಗಿಕೊಂಡು ಮತ್ತದೇ 'ತಪ್ಪು' ಮಾಡಿ ವಚನಭ್ರಷ್ಟರಾಗಿದ್ದು, ಗಣೇಶನೆಲ್ಲಿ ಕಾಡುವನೋ ಎಂಬ ಆತಂಕವನ್ನು ಕೆಲ ದಿನಗಳ ಮಟ್ಟಿಗೆ ಅನುಭವಿಸಿದ್ದು, ಆನಂತರ ಇದರ ಗುಂಗಿನಲ್ಲಿಯೇ ನಾವೆಲ್ಲ ಪರಿವರ್ತಿತರಾದದ್ದಕ್ಕೆ 'ಗುರು'ಗಳೇ ಕಾರಣ!

ಸ್ವಭಾವತಃ ಹಠಮಾರಿಯಾದ ನಾನು ಒಂದರಿಂದ ನಾಲ್ಕನೇ ಇಯತ್ತೆಯ ವರೆಗೆ ಮೂರನೇ ದರ್ಜೆಯಲ್ಲಿಯೇ ಇದ್ದೆ. ಐದರಿಂದ ಏಳನೇ ತರಗತಿಗಳಲ್ಲಿ ನಾನೇ ಪ್ರಥಮ ಸ್ಥಾನದಲ್ಲಿರುತ್ತಿದ್ದೆ. ಆ ಹೊತ್ತಿನಲ್ಲಿ 'ಫರ್ಸ್ಟ್ ಕ್ಲಾಸ್' ಎನ್ನುವುದು ಬೇರೆ ಯಾರ ಪಾಲಾಗುವುದನ್ನೂ ನನ್ನಿಂದ ಸಹಿಸಲಾಗುತ್ತಿರಲಿಲ್ಲ. ಒಮ್ಮೆ ಕಿರುಪರೀಕ್ಷೆಯೊಂದರಲ್ಲಿ ನನ್ನ ಪ್ರತಿಸ್ಪರ್ಧಿ ಸಹಪಾಠಿ ಆಂಗ್ಲ ವಿಷಯದಲ್ಲಿ ನನಗಿಂತ ಎರಡು ಅಂಕ ಹೆಚ್ಚು ಪಡೆದುಕೊಂಡಿದ್ದ. ನಿಖರವಾಗಿದ್ದ ನನಗೆ ಇದನ್ನು ಒಪ್ಪಲಾಗಲೇ ಇಲ್ಲ.

ಒಸಪ್ಪ ಮಾಸ್ತರರಿಗೆ ಅತ್ತೂ ಕರೆದು ನಮ್ಮಿಬ್ಬರ ಉತ್ತರ ಪತ್ರಿಕೆಗಳನ್ನು ಮರು ಮೌಲ್ಯಮಾಪನ ಮಾಡಲು ಒತ್ತಾಯಿಸಿದೆ. ನನ್ನ ಕಾಟ ತಾಳಲಾರದ ಗುರುಗಳು ನಮ್ಮಿಬ್ಬರ ಎದುರುಗಡೆಯೇ ಮತ್ತೊಮ್ಮೆ ಉತ್ತರ ಪತ್ರಿಕೆಗಳನ್ನು ಗಮನಿಸಿದಾಗ ನನ್ನ ಸಹಪಾಠಿಗಿಂತ ಒಂದು ಅಂಕ ಹೆಚ್ಚು ನನ್ನ ಪಾಲಿಗೆ ಬಂದಿದ್ದು ಇನ್ನೂ ಹಚ್ಚಹಸಿರಾಗಿದೆ.

ನನ್ನ ಪ್ರಾಥಮಿಕ ಅರ್ಥಾತ್ 'ಕನ್ನಡ ಶಾಲೆ'ಯಲ್ಲಿ ನನ್ನನ್ನು ತಿದ್ದಿ- ತೀಡಿದ ಇನ್ನೊಬ್ಬ ಗುರುಗಳನ್ನೂ ಮರೆಯುವ ಹಾಗಿಲ್ಲ. ಬರವಣಿಗೆಯಲ್ಲಿ ಅಚ್ಚುಕಟ್ಟುತನವನ್ನು ಅರ್ಪಿಸಿದ ಗುರು ಬಿ. ಟಿ. ಭದ್ರಣ್ಣನವರ್ ಅವರು ಕನ್ನಡ ಅಕ್ಷರಗಳನ್ನು ದುಂಡಾಗಿ ಬರೆಯಲು 'ಗಲಗು'(ಪೆನ್ನಲ್ಲ; ಹಗುರವಾದ ಪೊಳ್ಳಾದ ಕಟ್ಟಿಗೆಯಿಂದ ಕೆತ್ತಿಕೊಂಡ, ಇಂಕಿನಲ್ಲಿ ಅದ್ದಿ ಬರೆಯುವ ಸಾಧನ)ದಿಂದ ಕಾಪಿ ಪುಸ್ತಕ ಬರೆಯುತ್ತಿದ್ದುದೇ ನನ್ನ ಅಕ್ಷರಗಳ ಆಕರ್ಷಕ ರೂಪಿಗೆ ಕಾರಣವಾಗಿದ್ದೂ ಹೌದು. ಅಷ್ಟಿಷ್ಟು ಡ್ರಾಯಿಂಗ್ ಕೂಡ ಈ ಗುರುಗಳ ಕಾಣಿಕೆಯೇ. ಈ ಗುರುಗಳ ಶಿಕ್ಷೆಯು ಪರಿಯಂತೂ ನನಗೆ ಆಪ್ತ. ಶಿಷ್ಯಂದಿರ ತಲೆ ಹಿಡಿದು ತಮ್ಮ ಬೋಳು ಹಣೆಯಿಂದ ಒಮ್ಮೆ ಕುಟ್ಟಿದರೆ ಸಾಕು; ತಲೆಯೊಳಗಿರುವ ಮಡ್ಡೆಲ್ಲ ಹಾರಿ ಹೋದಂತಾಗುತ್ತಿತ್ತು; ತಲೆಯೆಲ್ಲ ನಿಚ್ಚಳವಾಗಿ ನಿರಾಳವೆನಿಸುತ್ತಿತ್ತು. ಒಂದರಿಂದ ಏಳನೇ ಇಯತ್ತೆ ವರೆಗೆ ಈ ಇಬ್ಬರು ಶಿಕ್ಷಕರು ನನ್ನ 'ಖನ್ನಡ'ವನ್ನು 'ಕನ್ನಡ'ವನ್ನಾಗಿಸಿದ್ದು, ನನ್ನೆಲ್ಲ ಓರೆಕೋರೆಗಳನ್ನು 'ಲೆಕ್ಕ'ವನ್ನಾಗಿಸಿದ್ದು ನನಗೀಗಲೂ ದಾರಿಯಾಗಿದೆ.

ಇಡೀ ನನ್ನ ವಿದ್ಯಾರ್ಥಿ ಜೀವನದ ಅಮೂಲ್ಯ ಗಳಿಗೆಯಾಗಿದ್ದ ಈ ಹಂತವನ್ನು ನೆನಪಿಸಿಕೊಂಡರೆ ಇದೀಗ ನಿವೃತ್ತಿಯಾದ ಈ ಗುರುಗಳ ಅಡಿಯಲ್ಲೇ ಇನ್ನೊಮ್ಮೆ ಒಂದರಿಂದ ಏಳನೇ ಇಯತ್ತೆ ಓದಬೇಕು, ಅದೂ ನನ್ನೂರಿನ ಆ ಶಾಲೆಯಲ್ಲಿಯೇ, ಅನ್ನಿಸುತ್ತಿದೆ. ಇಂಥದೇ ಅನುಭವವನ್ನು ಕೊಂಚ ಮಟ್ಟಿಗಾದರೂ ಉಳಿಸಿದ ನನ್ನ ಪ್ರೌಢಶಾಲಾ ಶಿಕ್ಷಣ ಹಲವು ಗುರುಗಳ ಅಸಡ್ಡೆ, ಕರ್ತವ್ಯಹೀನ ನಡೆಯ ನಡುವೆಯೂ ಒಂದಿಷ್ಟು ಖುಶಿ ನೀಡುತ್ತದೆ.

ಪ್ರೌಢಶಾಲಾ ಹಂತದ ಮೂರು ವರ್ಷಗಳಲ್ಲಿ ಎಂಟನೇ ಇಯತ್ತೆಯನ್ನು ಧಾರವಾಡದ ಬಾಸೆಲ್ ಮಿಶನ್ ಹೈಸ್ಕೂಲ್‌ನಲ್ಲಿ ಕಲಿತೆನಾದರೂ ಒಂಬತ್ತು, ಹತ್ತನೇ ತರಗತಿಯನ್ನು ನಮ್ಮೂರಿಗೆ ಸಮೀಪದ ಸೊರಬ ತಾಲೂಕಿನ ಶಕುನವಳ್ಳಿಯ ಖಾಸಗಿ ಪ್ರೌಢಶಾಲೆಯಲ್ಲಿ ಮುಗಿಸಿದೆ. ಇಲ್ಲಿ ನನಗೆ ಪಾಠ ಹೇಳಿದ ಒಬ್ಬೊಬ್ಬ ಗುರುಗಳದ್ದೂ ಒಂದೊಂದು ವೈಶಿಷ್ಟ್ಯ. ಗಣಿತ ಹೇಳುವ ಶಿವರಾಯ ಶ್ರೀನಂದಿ, ಕನ್ನಡ ಕಲಿಸುವ ಸುಶೀಲಾ ಮೇಡಂ, ಸಮಾಜ ಪರಿಚಯಿಸುವ ಗಂಗಪ್ಪ ಬಂಗೇರ್, ವಿಜ್ಞಾನ ಹೇಳುವ ದೇವೇಂದ್ರಪ್ಪ, ಹಿಂದೀ ಹೇಳುವ ಪರಪ್ಪಗೌಡ, ಆಂಗ್ಲ ಭಾಷೆ ಅರಹುವ ಸದಾಶಿವಪ್ಪ ಹೀಗೆ ಸಾಗುವ ಈ ವಿಭಿನ್ನ ವ್ಯಕ್ತಿತ್ವದ ಗುರುಗಳಲ್ಲಿ ವಿಕ್ಷಿಪ್ತ ಮನೋಭಾವದವರೂ ಇದ್ದರು. ವರ್ಷವಾದರೂ ಎರಡು ಆಂಗ್ಲ ಭಾಷಾ ಪಾಠಗಳನ್ನೂ ಹೇಳದ ಗುರುಗಳ ನಡುವೆಯೂ ಬಂಗೇರ್, ದೇವೇಂದ್ರಪ್ಪ, ಸುಶೀಲಾ ಮೇಡಂ, ಶ್ರೀನಂದಿ ಗುರುಗಳು ನೀಡಿದ್ದು ಬಹಳಷ್ಟಿದೆ.

ಗಂಭೀರ ನಿಲುವಿನ ಭಯ ಹುಟ್ಟಿಸುವ ಧಡೂತಿ ಮೈಕಟ್ಟಿನ ಶ್ರೀನಂದಿ ಗುರುಗಳು ಆ ಪ್ರೌಢಶಾಲೆಯ ಪ್ರಧಾನ ಗುರುಗಳಾಗಿದ್ದರು. ಖಾಸಗಿ ಶಾಲೆಯಾದ್ದರಿಂದ ಬೇರೆ ಬೇರೆ ಕೆಲಸಗಳಿರುವುದರಿಂದ ಅವರು ನಿಯಮಿತವಾಗಿ ಕ್ಲಾಸುಗಳನ್ನು ತೆಗೆದುಕೊಳ್ಳಲಾಗುತ್ತಿರಲಿಲ್ಲ. ಗಣಿತವೆಂದರೆ ನನಗೂ ಅಲರ್ಜಿಯಾದ್ದರಿಂದ ಅವರ ಗೈರು ನನಗಂತೂ ಸಿಕ್ಕಾಪಟ್ಟೆ ಖುಶಿ

ನೀಡುತ್ತಿತ್ತು. ಆದರೆ ಅವರು ಗೈರಾಗಿದ್ದ ಎಲ್ಲ ಪಿರೀಡ್‌ಗಳನ್ನೂ ಒಮ್ಮೆಲೆ ಅಂದರೆ ಎರಡು ಮೂರು ತಾಸು ಕ್ಲಾಸು ತೆಗೆದುಕೊಳ್ಳುತ್ತಿದ್ದರು. ಅವರು ನನ್ನ ತಲೆಗೆ ಗಣಿತವನ್ನು ತುಂಬಿದ್ದೆಷ್ಟೋ ಏನೋ ಸಕಲ ವಿದ್ಯಾಪಾರಂಗತರಾದ ಅವರಿಂದ ನಾನು ಇವತ್ತಿಗೂ ಕಲಿಯುತ್ತಿದ್ದುದು ಮಾತ್ರ ಸತ್ಯ. ಅವರು ನನ್ನ ಅಪ್ಪಯ್ಯನ ಅತ್ಯಂತ ಖಾಸಾ ಮಿತ್ರರಾದ್ದರಿಂದ ಅವರ ಬಗೆಗೆ ನನಗೆ ಸುಪ್ತವಾದ ಪ್ರೀತಿ ಇತ್ತು. ನನ್ನ ಪದ್ಯ ಬರೆಯುವ ಗೀಳು ಅದು ಹೇಗೋ ನನ್ನ ತಂದೆಯಿಂದ ಅವರಿಗೆ ತಿಳಿದಿತ್ತು. ಒಮ್ಮೆ ಎಲ್ಲ ವಿದ್ಯಾರ್ಥಿಗಳ ಎದುರೇ ನನಗೆ ಕವಿತೆ ವಾಚಿಸಲು ಹೇಳಿದರು. ಆಗಾಗ ಶಾಲೆಯಲ್ಲಿ ರಾಷ್ಟ್ರೀಯ ಹಬ್ಬ ಆಚರಣೆಯ ಸಂದರ್ಭದಲ್ಲಿ ಅಷ್ಟಿಷ್ಟು ಭಾಷಣ ಮಾಡಿ ಅನುಭವವಿದ್ದರೂ 'ಪ್ರಥಮ ಕಾವ್ಯ ವಾಚನ' ಮಾಡಲು ಅಳುಕಾಯಿತು. ಆದರೂ ಸಾವರಿಸಿಕೊಂಡು ಓದಿಬಿಟ್ಟಿದ್ದೆ :

ಪಂಚಿಮೆ :

ಕಿಚಿಪಿಚಿ ಕೆಸರಿನ ಆನಂದಧಾರಾ / ಪಂಚಿಮೆ ನಾಗಗೆ ಹೂವಿನ ಹಾರಾ /
ಮಕ್ಕಳ ಆಟವು ಗಗನಕೆ ತೋರಾ / ಶಿವನ ಕೊರಳಲಿ ನಾಗನ ಘೋರಾ /
ಪಸಿರು ಸೃಷ್ಟಿಯ ಹಿತ ದೃಷ್ಟಿಯ ಬೀರಾ / ಚಿಲಿಪಿಲಿ ಹಕ್ಕಿಯ ರಾಗವಾಲಿಸಿ ಸಾರಾ ।

....

ನನ್ನ ಮೊದಲ ಕಾವ್ಯ ವಾಚನಕ್ಕೆ ಬೆನ್ನು ತಟ್ಟಿದ ಶ್ರೀನಂದಿ ಗುರುಗಳು ಒಂದು ಕಡೆಯಾದರೆ, ಅದೇ ಒಂಬತ್ತನೆಯ ಇಯತ್ತೆಯಿಂದ ಶುರುವಾದ ನನ್ನ ಈ ಗೀಳಿಗೆ ಮೂಲ ಪ್ರೇರಕರು ನನಗೆ ಶಾಲೆಯಲ್ಲಿ ಪಾಠ ಹೇಳಿದ ಪ್ರೈಮರಿ ಸ್ಕೂಲ್ ಮೇಷ್ಟ್ರು ಎಚ್. ಎಸ್. ಮಂಜಪ್ಪನವರು ಮತ್ತೊಂದು ಕಡೆ. ನಾನು ಹೈಸ್ಕೂಲಿಗೆ ಹೋಗುವಾಗ ನಮ್ಮೂರ ಶಾಲೆಗೆ ಮಾಸ್ತರಾಗಿ ಬಂದ ಇವರು ನಮ್ಮ ಮನೆಯಲ್ಲಿಯೇ ಇದ್ದು ನಮಗೆಲ್ಲ ಸಾಯಂಕಾಲ ಪಾಠ ಹೇಳುತ್ತಿದ್ದರು. ಒಮ್ಮೊಮ್ಮೆ ನನ್ನಷ್ಟಕ್ಕೆ ನಾನು ಚಿತ್ರ ಬರೆಯುತ್ತಲೋ ಇನ್ನೇನೊ ಬರೆಯುತ್ತಲೋ ಕೂತಿರುತ್ತಿದ್ದೆ. ಅದನ್ನು ಗಮನಿಸಿದ ಅವರು ನನ್ನ ಈ ತರಲೆಗಳಿಗೆ ಅಡ್ಡಿಯಾಗದೇ ವಿಶೇಷವಾಗಿ ನನ್ನನ್ನು ನೋಡುತ್ತಿದ್ದರು. ಅದೊಂದು ದಿನ ಪದ್ಯದ ತರಹ ಏನನ್ನೋ ಬರೆದು ಅವರಿಗೆ ತೋರಿಸಿದೆ. 'ಪರವಾಗಿಲ್ಲ... ಇದನ್ನು ಸುಧಾ ಪತ್ರಿಕೆಯ 'ಬಾಲವಿಹಾರ'ಕ್ಕೆ ಕಳಿಸು...!' ಎಂದರು. ತಾವೂ ವಿದ್ಯಾರ್ಥಿಯಾಗಿದ್ದಾಗಲೇ ಒಂದು ಮಕ್ಕಳ ಕಥೆಯನ್ನು ಪತ್ರಿಕೆಯಲ್ಲಿ ಪ್ರಕಟಿಸಲು ಕಳಿಸಿದ್ದನ್ನು, ಅದು ಪ್ರಕಟವಾಗಿದ್ದನ್ನು ಹೇಳಿ ನನ್ನಲ್ಲಿ ಕುತೂಹಲ ಹುಟ್ಟಿಸಿದರು. ನಾನು ಬರೆಯುತ್ತಲೇ ಹೋದೆ... ಪತ್ರಿಕೆಗೆ ಕಳಿಸುತ್ತಲೂ ಇದ್ದೆ. ಸ್ಥಳೀಯ ಪತ್ರಿಕೆ ಅಕ್ಕಿಆಲೂರಿನ 'ನಿರೀಕ್ಷೆ'ಯಲ್ಲಿ ನನ್ನ ಮೊದಲ ಕವಿತೆ 'ಪಂಚಿಮೆ' ಪ್ರಕಟವಾದಾಗ ನಾನು ಕುಣಿದಾಡಿದ್ದೆ. ನನ್ನ ಬಂಧುಬಾಂಧವರೆಲ್ಲ ನನ್ನನ್ನು 'ಕವಿ' ಎಂದು ಕರೆದು ಹೆಮ್ಮೆಪಟ್ಟಿದ್ದು ಮರೆಯಲಾದೀತೆ? ಪಠ್ಯದ ಹೊರತಾಗಿ ಸಾಹಿತ್ಯಲೋಕದ ಎಲ್ಲ ವಿಸ್ಮಯಗಳನ್ನು, ಧೀಮಂತರನ್ನು, ಪತ್ರಿಕೆಗಳನ್ನು, ಸಾಹಿತ್ಯಕ ಚಳವಳಿಗಳನ್ನು ಮೊದಲಿಗೆ ನನಗೆ ಪರಿಚಯಿಸಿದ ಮಂಜಪ್ಪನವರು ಇದೇ ಹಂತದಲ್ಲಿ ನನ್ನ ಸಾಹಿತ್ಯಕ ಗುರುಗಳಾಗಿದ್ದನ್ನು ನೆನೆಯಲೇ ಬೇಕು. ಇವತ್ತಿಗೂ ಅವರು ದೂರವಿದ್ದರೂ ಪತ್ರ ಮುಖೇನ ನನ್ನ ಬರವಣಿಗೆಯ ಮೇಲೆ ಕಣ್ಣಿಟ್ಟು ಎಚ್ಚರಿಸುತ್ತಿರುತ್ತಾರೆ.

✤ **ವಿಜಯಕಾಂತ ಪಾಟೀಲ : ನ್ಯಾಯವಾದಿಗಳು**

ಕ್ಯಾಸನೂರು, ಚಿಕ್ಕಾಂಶಿ-ಹೊಸೂರು(ಅಂಚೆ), ತಾ. ಹಾನಗಲ್ಲ-೫೮೧ ೧೦೪ (ಹಾವೇರಿ) ✤

ಸುಖಾಸುಮ್ಮನೆ ಮರುಗಬೇಡ

ಶ್ರೀಧರ ಪಿಸ್ಸೆ

ನಾಯಿ ಕಂಡರೆ ಪ್ರಾಣ
ನನಗಲ್ಲ, ನನ್ನ ಮಗನಿಗೆ.

ನನ್ನ ನಖರಾ ಮೆಟ್ಟಿ
ನೆರೆಯಲ್ಲೆಲ್ಲೊ ಹುಟ್ಟಿ
ಬೆಳೆದ ಕುನ್ನಿ ತಂದಿತ್ತ
ಮನೆಯಂಗಳಕ್ಕೆ.

ಮುದ್ದು ಮಗನ ಹಟಕ್ಕೆ
ಮುದ್ದು ಮರಿಯ ಮುಖಕ್ಕೆ
ಸೋತು ಸುಮ್ಮನಾದೆ
ದೊಡ್ಡತನದ ಕೋಟೆ ಕಟ್ಟಿ.

ಮೂರು ಹೊತ್ತು ಹಾಲು ಅನ್ನ
ಉಣ್ಣುತ್ತಿತ್ತು ನಲಿಯುತ್ತಿತ್ತು
ದಿನಾ ದಿನಾ ಬೆಳೆಯುತ್ತಿತ್ತು
ನಾಯಿ– ದುಂಡುದುಂಡಗೆ.

ನಾಯಿ ಆಟ ನಾಯಿ ಪಾಟ
ಜೊತೆಗೆ ಕೂಡಿ ನಿದ್ದೆ ಸ್ನಾನ,
ಅಂಗಡಿ ವಾಕಿಂಗ್ ಪಾರ್ಕಿಗೆ
ಎಲ್ಲೆಲ್ಲಿಗು ಸಂಗಾತಿ ಮಗನಿಗೆ.

ನೋಡನೋಡುತ್ತ ಕುನ್ನಿ ಮರಿ
ದೊಡ್ಡ ನಾಯಿಯಾಯಿತು
ಅದರ ಹಿಂದೆ ಗಂಡು ನಾಯಿ
ಹಿಂಡು ಹಿಂಡು ಬೆಳೆಯಿತು.

ಮನೆಯ ನಾಯಿ ಮನೆಯಲಿರಲಿ
ಬೀದಿ ಬೀದಿ ಸುತ್ತದಿರಲಿ
ನೆರೆಯ ಮನೆಗೆ ನುಗ್ಗದಿರಲಿ
ಎಂದು ಬಿಗಿದೆ ಸರಪಳಿ.

ಊರು ಸುತ್ತಿ ಅಲೆದ ನಾಯಿ
ಕೊರಳು ಕೊಟ್ಟು ಸುಮ್ಮನಿತ್ತೆ?
ಒಂದು ಸಲವೆ? ಎರಡು ಸಲವೆ?
ಜೇಬು ಖಾಲಿ ಚೈನು ಬೆಲ್ಟುಗಳಿಗೆ?

ಮನೆಗೆ ಗೇಟು ಕಾಂಪೌಂಡಿಲ್ಲ
ಹಿಡಿತವಿಲ್ಲ,
ನಾಯಿ ನಿಷ್ಠೆ
ಬಿಡಲಿಲ್ಲ.

ಈಗೀಗ ಮನೆಗೆ ನಾಯಿದಂಡು
ರಾತ್ರಿಯಿಡೀ ಕುಯ್ಯೊ ಮರ‍್ರೊ ಬವ್ ವವ್ ಬೌ
ನಿದ್ದೆಯಿಲ್ಲ ನಮಗೆ, ಅಕ್ಕಪಕ್ಕದವರಿಗೆ
ಕಲ್ಲು ಅರ್ಜಿ ಹೊಡೆದರೆ ಜನ, ಏನು ಪ್ರಯೋಜನ?

ಹಿಂದೆ ಹಿಂದೆ ಬರುತ್ತಿತ್ತು
ನಮ್ಮ ಕಾಲು ನೆಕ್ಕುತ್ತಿತ್ತು
ನಮ್ಮ ಪಾಡಿಗಿದ್ದು ನಾವು
ಕರೆಯಲಿಲ್ಲ ಬಳಿಗೆ– ಹೀಗೆ ಕೆಲವು ದಿನ

ಏಳೆಂಟು ಮರಿ ಈಯ್ದಿದ್ದ ನಾಯಿ
ಮಲಗಿತ್ತು ಮೂಲೆಯಲ್ಲಿ.
ಮುದ್ದು ಮರಿ ಕಂಡ ಮಗ
ಬೆಚ್ಚಗಿರಿಸಿದ್ದ ಗೋಣಿತಾಟಿನಲ್ಲಿ.

ಬೀದಿನಾಯಿ
ಹಂದಿಬಾಯಿ
ಗಳಿಗೆ ಕಾವಲು
ಕಟ್ಟಿದ್ದ ಕಲ್ಲುಕೋಟೆ.

ನಾಯಿಗೂ ದಾರಿ ಇರದೆ
ದಾಟುವಾಗ ಹೀಗೆ ಒಮ್ಮೆ
ಕಲ್ಲು ಬಿದ್ದು ಮರಿ ಸತ್ತುಹೋಯಿತು
ಅಯ್ಯೊ ಎನ್ನುವರು ಇಲ್ಲದಾಯಿತು

ಒಳಗೊಳಗೆ ಮಗನ ಜೀವ ಕರಗಿತೆಷ್ಟೊ
ನನಗೆ ಕಾಣದಂತೆ–
ಮುದ್ದು ಅಗಲಿದ ಮರಿಗೆ ಮಣ್ಣು ಕಾಣಿಸಿ
ಮರೆತು ಸುಮ್ಮನಾಯಿತೆ?

ನಮಗೆ ಬೇಕೆ ನಾಯಿ ಉಸಾಬರಿ?
ಮಗನ ಕಾವಲು ಕೋಟೆ ಕಿತ್ತು ಹೇಳಿದೆ:
'ಸುಖಾ ಸುಮ್ಮನೆ ಮರುಗಬೇಡ
ಹಿತ ನಿನಗು ಇಲ್ಲ ಬೇರೆ ಯಾರಿಗು ಇಲ್ಲ.'

ಆದರೂ ನನಗೆ ಹೆಚ್ಚು ಬಡಿಸಿದನ್ನ,
ದಿನದ ಉಳಿಕೆ ಹೆಂಡತಿ,
ತಿಳಿಯದಂತೆ ಮಗನು ಹೀಗೆ–
ತಪ್ಪದೆ ನಾಯಿ ಹಸಿವು ಹಿಂಗುತಿದೆ.

✤

ಡಾ. ಶ್ರೀಧರ ಹಿಸ್ಸೆ :
ದೇಸಾಯಿ ಓಣಿ, ಕಮಲಾಪುರ-೫೮೩ ೨೨೧

✤

ಪುಸ್ತಕ ಪರಿಶೀಲನೆ

೧. ಕೊಳ್ಳಿ : ಡಾ. ಜಿ. ಎಸ್. ಭಟ್ಟ

ನಿಧಿ ಪ್ರಕಾಶನ, 'ಅಪರ', ವಿನೋಬಾ ನಗರ, ಸಾಗರ-೫೭೭ ೪೦೧, ಪ್ರಮು. ೨೦೦೬, ಪು. ೬೦, ರೂ. ೩೦/-

ಯಕ್ಷಗಾನ ರಂಗಕೃತಿ ರಚನೆ ಮತ್ತು ಪ್ರಯೋಗ ವೃತ್ತಿಯಲ್ಲಿ ಪರಿಣತರಾದ ನಾಟಕಕಾರ ಡಾ. ಜಿ. ಎಸ್. ಭಟ್ಟರು, ಇಂದಿನ ಜನಸತ್ತಾತ್ಮಕ ವ್ಯವಸ್ಥೆಯ ಅಧಿಕಾರ (ಶಕ್ತಿ) ರಾಜಕೀಯವನ್ನು ವಿಡಂಬಿಸುವ ಏಳು ದೃಶ್ಯಗಳ ಈ ನಾಟಕ ಬರೆದಿದ್ದಾರೆ. ದ್ರೌಪದಿ ಮತ್ತು ಪಾಂಡವರ ಜೀವನದಲ್ಲಿ 'ಕೊಳ್ಳಿ'(ಬೆಂಕಿ) ವಹಿಸಿದ ಪಾತ್ರ ವಾಸ್ತವಿಕವಾಗಿ ಅರ್ಥಪೂರ್ಣ. ಬೆಂಕಿಯ ಮಗಳು ದ್ರೌಪದಿ ದಾಂಪತ್ಯ ಜೀವನದುದ್ದಕ್ಕೂ ಕಷ್ಟ, ಅವಮಾನ, ಸೋಲು, ನಿರಾಶೆಗಳನ್ನೇ ಅನುಭವಿಸಿದವಳು. ಕೌರವರ ಸಂಹಾರದ ನಂತರ, ವಿಜಯೀ ಪಾಂಡವರ ಪಟ್ಟಮಹಿಷಿಯಾಗಿ ಅಭಿಷಿಕ್ತಳಾಗುವ ಅವಳ ಸಹಜ ಆಸೆ 'ಕೊಳ್ಳಿ'ಯ ಹಗರಣದಿಂದ ವಿಫಲವಾಗುತ್ತದೆ. 'ಮಹಾಭಾರತ'ದಲ್ಲಿ 'ಕೊಳ್ಳಿ'ಯ ಪ್ರಸ್ತಾಪ ಬಂದಾಗಲೆಲ್ಲ ಪಾಂಡವರ ಚಾರಿತ್ರ್ಯದ, ಅಸ್ತಿತ್ವದ ಅಗ್ನಿಪರೀಕ್ಷೆ ನಡೆದೇ ನಡೆಯುತ್ತದೆ. ಅಲ್ಲೆಲ್ಲ ಗೆಲುವು ಕಂಡ ಅವರಿಗೆ, ಪಟ್ಟಾಭಿಷೇಕದ ನಿರ್ಣಾಯಕ ಗಳಿಗೆಯಲ್ಲಿ ಸೋಲು ಎದುರಾಗುತ್ತದೆ. ಜಿ. ಎಸ್. ಭಟ್ಟರು ಮಹಾಭಾರತದ 'ಕೊಳ್ಳಿ'ಯ ಪ್ರಸಂಗಗಳನ್ನು ವ್ಯಾಖ್ಯಾನಿಸುವ ಕಲ್ಪನೆ ದಾರುಣವಾಗಿದೆ; ಆಖ್ಯಾನಿಸುವ ರಂಗಕ್ರಿಯೆ ವ್ಯಂಗ್ಯಾತ್ಮಕವಾಗಿದೆ.

'ಕೊಳ್ಳಿ'ಯಲ್ಲಿಯ ಕ್ರಿಯೆ ಎರಡು ದಿನಗಳ ಕಾಲದ್ದು. ಪಾಂಡವರ ಅದ್ದೂರಿ ಪಟ್ಟಬಂಧ ಮಹೋತ್ಸವದ ಹಿಂದಿನ ದಿನದಿಂದ ಆರಂಭವಾಗಿ, ದ್ರೌಪದಿಯ ಅಂತರಂಗ, ಬಹಿರಂಗಗಳ ಪರೀಕ್ಷೆಯ ಪ್ರಸಂಗ ಜರುಗುತ್ತವೆ. ಪಾಂಡವರಿಗಾಗಿ ಅರಗಿನರಮನೆಯ ಉರಿ ಪ್ರಸಂಗದಲ್ಲಿ ಜೀವ ತೆತ್ತ ಭೀಮನಂತಿದ್ದ ಒಬ್ಬ ಪುರುಷನ ಭಾವೀ ಹೆಂಡತಿ ಉಜ್ವಲಾ ಅರಣ್ಯದ ಹಟ್ಟಿಯವಳು. ಅವಳೀಗ ದ್ರೌಪದಿಗೆ ಕೇಳುತ್ತಿರುವುದು, ಸತ್ತ ಗಂಡನ ತ್ಯಾಗಕ್ಕೆ ಪ್ರತಿಯಾಗಿ ಪರಿಹಾರವನ್ನು. ಈ ಪರಿಹಾರವೆಂದರೆ, ಉಜ್ಜಿಗೆ ಮಹಿಷಿಯ ಪಟ್ಟ. ದ್ರೌಪದಿಯ ಪೇಚು, ನೈತಿಕ ದ್ವಂದ್ವ; ಪಾಂಡವರ ಪಾಪಪ್ರಜ್ಞೆ-ನಾಗರಿಕರ ರಾಜಕೀಯ ವಿವೇಚನೆ, ಕೊನೆಗೆ ವಾರಣಾವತ ಮತ್ತು ಹಸ್ತಿನಾವತಿಯ ನಡುವಿರುವ ಅರಣ್ಯವಾಸಿಗಳ ಹಟ್ಟಿಯ ಅಗ್ನಿದುರಂತ. 'ಅಂತೂ ಇಂತೂ ಕುಂತೀ ಮಕ್ಕಳಿಗೆ ರಾಜ್ಯವಿಲ್ಲ' ಎನ್ನುವ ನಾಣ್ಣುಡಿಯ ನಾಟಕೀಯ ಚಿತ್ರಣ– ಈ 'ಉರಿ'.

ಭಟ್ಟರ ದುರಂತ ಕಲ್ಪನೆ ೭ ದೃಶ್ಯಗಳ ಕಥನವಿನ್ಯಾಸದಲ್ಲಿ ಪರಿಣಾಮಕಾರಿಯಾಗಿ ಆಖ್ಯಾನಗೊಂಡಿವೆ. ಕೊಳ್ಳಿ ರೂಪಕ ನಾಟಕವನ್ನು ಆವರಿಸಿದ ಬಗೆ ಮನೋಜ್ಞ. ಇಂದಿನ ಸಮ್ಮಿಶ್ರ ಸರಕಾರ ರಚನೆ, ಒಳಜಗಳ, ಹಗರಣ ಕೆಸರೆರಚಾಟ ವಿದ್ಯಮಾನಗಳು 'ಉರಿ'ಯ ಅಂದಿನ ಮಹಾಭಾರತದ ಜತೆಗೇ ಇಂದಿನ 'ಭಾರತ'ದ ರಾಜಕೀಯ ದುರಂತದ ಸೂಚಕ. ಈ ನಾಟಕ ಅಭಿನಯಗೊಳ್ಳಲು ಸ್ವಯಂಸಿದ್ಧ ಕೃತಿ.

– ಸರ್ವಜಿತ C/o ಸಂಕಲನ, ಧಾರವಾಡ-೪

೨. ಹೃದಯ ಸಮುದ್ರ : ಗುರುಮೂರ್ತಿ ಪೆಂಡಕೂರು

ಪ್ರಕಾಶಕರು : ಯುವಕರ ಸಂಘ (ರಿ.), ರಾಮನಗರ, ಹಗರಿಬೊಮ್ಮನಹಳ್ಳಿ-೨, ಪ್ರಮು.೨೦೦೪, ಪು.೯೪, ರೂ.೫೦/-

``ಯಾವುದೋ ಒಂದು ಭಾವ ಬಿಡುಗಡೆಗೊಂಡು ಅಕ್ಷರದ ಬಂಧನಕ್ಕೊಳಗಾಗಿ ಕವಿತೆಯಾಗುತ್ತದೆ'' ಎನ್ನುತ್ತಾರೆ, ಈ ಕೃತಿಗೆ ಮುನ್ನುಡಿ ಬರೆದ ಚಂದ್ರಶೇಖರ ವಸ್ತ್ರದರು. ಈ ಮಾತಿಗೆ ಒಂದಷ್ಟು ಜೋಡಣೆ.

ಯಾವುದೋ ಒಂದು ಉತ್ತಮ ಕವಿತೆಗೆ, `ಯಾವುದೋ ಒಂದು ಭಾವ' ನೆಪಮಾತ್ರ. ಅದೊಂದು ಆರಂಭದ ಬಿಂದು ಅಷ್ಟೆ. ಆರಂಭದ ಈ ಭಾವ ಕವಿತೆಯಾಗುವಷ್ಟರಲ್ಲಿ ಕವಿಗೇ ಅಚ್ಚರಿಯಾಗುವಂತಹ ಎಷ್ಟೋ ಹೆಚ್ಚಿನ ಎತ್ತರಗಳನ್ನು, ಆ ಕವಿತೆ, (ಕವಿತೆಯ ಕೆಲ ಸಾಲುಗಳು) ಒಳಗೊಂಡು ಬಿಟ್ಟಿರುವ ಸಾಧ್ಯತೆ ಇರುತ್ತದೆ. ಎಂತಲೇ, ಆ ಬರಹ, ತಾನು ಹಾಕಿಕೊಂಡಿರುವ `ಅಕ್ಷರಗಳ ಚೌಕಟ್ಟನ್ನು' ಎಷ್ಟೋ ಪಟ್ಟು ಮೀರಿ ನಿಂತು, ಅಕ್ಷರ ರೂಪಗಳು ಈಯುವ ಅರ್ಥಗಳ ಎನಿತೋ ಎತ್ತರದಲ್ಲಿಯೇ ತಮ್ಮ ಹೊಳಹುಗಳನ್ನು ಮಿಂಚಿಸತೊಡಗುತ್ತವೆ. ಹಾಗೆ ಆದಾಗಲೇ, ಎಂದರೆ ಅಕ್ಷರಗಳ ಮಿತಿಯನ್ನು ಮೀರಿದಾಗಲೇ ಅದೊಂದು (ಉತ್ತಮ) ಕವಿತೆಯಾಗುತ್ತದೆ.

'ಎಲ್ಲರ ಮಟ್ಟವನು ನೆಲಮಟ್ಟ ಮಾಡಲಿಕೆ / ನೀರೊಂದೇ ಸಾಕು / ನೀರಿಲ್ಲದಿರ ನೀವಾರು?' ಎನ್ನುತ್ತಾನೆ ಇಲ್ಲಿಯ ಕವಿ. ಇಲ್ಲಿಯ ನೀರಿನ ಶ್ಲೇಷೆಯನ್ನು ಗಮನಿಸಿದರೆ, 'ಎಲ್ಲರ ಮಟ್ಟವನು ನೆಲಮಟ್ಟ ಮಾಡುವ' (ಎಲ್ಲರಲ್ಲಿಯ) 'ನೀರು' ಹೆಚ್ಚು ಅರ್ಥಪೂರ್ಣವೆನಿಸೀತು. ಕವಿತೆಯಲ್ಲಿಯ 'ನೀರಿ' ನಿಂದಾಗಿಯೇ ಅಲ್ಲವೇ 'ನೀರಿಲ್ಲದಿರೆ ನೀವಾರು' ಎನ್ನುವ ನೈತಿಕ ಧೈರ್ಯ ಬರಹಕ್ಕೆ ಒದಗಿದ್ದು. ಈ ವಿವರಣೆಯನ್ನು ಗಮನಿಸಿದಾಗ, ಮೇಲಿನ ಪ್ಯಾರಾದ ನನ್ನ ಜೋಡಣೆ, ಗುರುಮೂರ್ತಿಯವರ ಕಾವ್ಯ ಸಂದರ್ಭದಲ್ಲಿ ಕೊಂಚವಾದರೂ ಅರ್ಥಪೂರ್ಣವೆನಿಸೀತು.

``ಕಾಲಿಗೆ ಗಾಲಿ ಕಟ್ಟಿಕೊಂಡವರಂತೆ... ಸಂಚರಿಸುತ್ತಲೇ...(ಬದುಕಿನ, ಬದುಕು ಸುತ್ತಲಿಸ ಮುಖ ಅನೇಕಗಳನ್ನಿಲ್ಲಿ) ಕಂಡ''ದ್ದನ್ನು ಚಿತ್ರಿಸಿದ ಮಾತ್ರಕ್ಕೆ ಯಾವುದೂ ಕವಿತೆಯಾಗುವದಿಲ್ಲ. ಹಾಗೆ ಕಂಡದ್ದರೆಡೆಗೆ (ಓದುಗರನ್ನು) ಎಷ್ಟು ಮಟ್ಟಿಗೆ, ಆ ಕವಿತೆ 'ಕೊಂಡೊಯ್ಯಿತು' ಎಂಬುದು ಮುಖ್ಯ. 'ಕಂಡ'ದ್ದು ಎಷ್ಟು ಮಟ್ಟಿಗೆ, ಕವಿಯಲ್ಲೂ ಓದುಗನಲ್ಲೂ ಕೂಡಿಯೇ 'ಕಾಣ್ಕೆ'ಯ ಕುಡಿಯೊಡೆಸಿತು ಎನ್ನುವದು ಮುಖ್ಯ. ಹಾಗೆ, ನಾಳೆಗಳಲ್ಲಿ ಕುಡಿಯೊಡೆಸಬಲ್ಲ 'ಹರಗು' ಮತ್ತು 'ಬಿತ್ತು' ಎರಡೂ ಗುರುಮೂರ್ತಿಯವರ ರಚನೆಗಳಲ್ಲಿವೆ.

ಎಂದು ದುಡ್ಡಿನ ಗಂಟಲು ಸೇರಿ ನಿಶ್ಶಬ್ದವಾಗುವದೋ
ಎಂದು ಚರ್ಮದ ಬಣ್ಣ ಕಣ್ಣಿಗೆ ಬೀಳದಿರುವದೋ
ಎಂದು ನೆಲ ಬಾನುಗಳು ಮತ್ತೆ ಸ್ವಚ್ಛವಾಗುವವೋ

ಅಂದು ಇಲ್ಲಿಯ 'ಬಿತ್ತು'ಗಳು ಕುಡಿಯೊಡೆದು ನಳನಳಿಸುತ್ತವೆ. 'ಚೂಕೊಂದು ತಾಪ' ಕೊಡುವ ಕಾಡಾಟಗಳು ಕಡಿಮೆಯಾಗಿ, ನಿಜವಾದ ಅರ್ಥದಲ್ಲಿಯ 'ಕೂಡಾಟ ಕುಣಿದಾಟ ಒಡನಾಟ'ಗಳ 'ಹೊಸ ಹಾಡು' ಮೂಡುತ್ತವೆ; 'ದಿನಕೊಂದು ಹಾಡು'ತ್ತವೆ. 'ಬದುಕಿನುಸಿರಾಟ' ನಿರಂಬಳ ಮುಂದುವರಿಯುತ್ತದೆ.

– ದೇಶಪಾಂಡೆ ಸುಬ್ಬರಾಯ, 'ಸೆಲೆ', # ೧೩, ಕುಸುಮನಗರ, ಶ್ರೀರಂಗಮಾರ್ಗ, ಧಾರವಾಡ-೮

೩. 'ರಿಡಿಂಗ್' ಇಂಗ್ಲಂಡ್ ಪ್ರವಾಸ ಕಥನ : ಡಾ. ಬಿ. ಆರ್. ನಾಡಗೌಡ

ಭುವನೇಶ್ವರಿ ಪ್ರಕಾಶನ, ಆಶ್ರಮ ರಸ್ತೆ, ವಿಜಾಪುರ-೫೮೬ ೧೦೩, ಪ್ರಮು. ೨೦೦೬, ಪು. ೮೦, ರೂ. ೪೦/-

'ಕೋಶ ಓದು ದೇಶ ನೋಡು' ಎಂಬ ಮಾತಿದೆ. ಪ್ರವಾಸಗೈಯುವುದರಿಂದ ಮನಕ್ಕೆ ಮುದ ಸಿಗುತ್ತದೆ, ಒಳನೋಟ ವಿಸ್ತರಿಸುತ್ತದೆ. ವಿಭಿನ್ನ ದೃಷ್ಟಿಕೋನಗಳಿಂದ ಪ್ರವಾಸದ ವಿಷಯಗಳನ್ನು ವಿಶ್ಲೇಷಿಸಿದಾಗ ವೈವಿಧ್ಯಮಯ ಸಂಸ್ಕೃತಿಗಳ ಹೊಸ ಆಯಾಮ ಪರಿಚಯವಾಗುತ್ತದೆ. ವಿಶ್ವದ ವೈಶಾಲ್ಯದ ಅರಿವು ಉಂಟಾಗುತ್ತದೆ. ಅದರಲ್ಲೂ ಈ ವೈವಿಧ್ಯತೆಯ ಶಬ್ದಚಿತ್ರಣ ಒಂದು ವಿಶಿಷ್ಟ ಪ್ರವಾಸ ಸಾಹಿತ್ಯ[illegible]ವೆ.

ಕನ್ನಡ ಸಾಹಿತ್ಯದಲ್ಲಿ ಇಂಥ ಪ್ರವಾಸಸಾಹಿತ್ಯ ತನ್ನದೇ ಆದ ಸ್ಥಾನ ಪಡೆದುಕೊಂಡಿದೆ. ಅದಕ್ಕೆ ಅದ್ಭುತ ಚರಿತ್ರೆ ಉಂಟು. ಸಿಂದಗಿಯ ಡಾ. ಬಿ. ಆರ್. ನಾಡಗೌಡರ 'ರಿಡಿಂಗ್ ಇಂಗ್ಲಂಡ್ ಪ್ರವಾಸ ಕಥನ' ಇನ್ನೂ ಹೆಚ್ಚಿನ ವೈಶಿಷ್ಟ್ಯ ಪಡೆದುಕೊಂಡಿದೆ. ಇಂಗ್ಲಂಡಾ ಪ್ರವಾಸದಲ್ಲಿಯ ತಮ್ಮ ಅಪೂರ್ವ ಅನುಭವಗಳನ್ನು ಚಿತ್ರಿಸುವುದರೊಂದಿಗೆ ಸ್ಥಳೀಯ ರೋಚಕ ಐತಿಹಾಸಿಕ ಸಂಗತಿಗಳನ್ನು ವಿವರಿಸಿದ್ದಾರೆ. ಇಂಗ್ಲಂಡ್‌ದ ಗತವೈಭವದ ಹಾಗೂ ಇತಿಹಾಸದ ವಿಶೇಷತೆಗಳು ಓದುಗನನ್ನು ಸೆರೆಹಿಡಿಯುತ್ತವೆ.

ನಾಡಗೌಡರ ಮಗನು ಇಂಗ್ಲಂಡ್‌ದ ಒಂದು ಪಟ್ಟಣವಾದ ರಿಡಿಂಗ್‌ದ ನಿವಾಸಿ. ಅಲ್ಲಿಗೆ ಲೇಖಕರ ಕುಟುಂಬವು ಪ್ರಯಾಣ ಬೆಳೆಸುತ್ತದೆ. ಲಂಡನ್‌ದಿಂದ ೩೭ ಮೈಲು ದೂರ. ಮುಂಬಯಿಯಿಂದ ಲಂಡನ್‌ಗೆ ಪ್ರಯಾಣ, ವಿಮಾನ ಪ್ರವಾಸದ ಅನುಭವ, ನಂತರ ಕಾರ್ಡಿಫ್‌ಗೆ ಪ್ರವಾಸ ಬೆಳೆಸುತ್ತಾರೆ. ಅಲ್ಲಿಯ ಕೋಟೆಗಳ ರಕ್ಷಣೆ ಕ್ರಮದ ಬಗ್ಗೆ ಅತೀವ ಮೆಚ್ಚುಗೆ ವ್ಯಕ್ತಪಡಿಸುತ್ತಾರೆ. ಅಲ್ಲಿ ಕರ್ನಾಟಕದಿಂದ ಆಗಮಿಸಿದ ಗಂಗಯ್ಯನವರ ಪರಿಚಯ, ಕನ್ನಡ ಭಾಷೆ ಆತ್ಮೀಯತೆಯುಂಟುಮಾಡುತ್ತದೆ. ಅಲ್ಲಿಯ ಸ್ಥಳ ಪರಿಚಯ ಪಡೆಯುತ್ತಾರೆ. ಮಧುಮೇಹಿಗಳಿಗೆ ಅನುಕೂಲವಾಗುವ ಎಲ್ಲ ವ್ಯವಸ್ಥೆಯ ಪಾನೀಯ ವ್ಯವಸ್ಥೆ ಬಗ್ಗೆ ಹೇಳುತ್ತಾರೆ. ವಿಶ್ವದ ಅತಿ ಶ್ರೇಷ್ಠ ಹಳೆಯ ವಿಶ್ವವಿದ್ಯಾಲಯ ಆಕ್ಸ್‌ಫರ್ಡ್ ಕುರಿತು ತಮ್ಮ ಅನಿಸಿಕೆಗಳನ್ನು ಚಿತ್ರಿಸುತ್ತಾರೆ. ಸುಮಾರು ೧೨ ಜನ ಬ್ರಿಟನ್ನಿನ ಪ್ರಧಾನಿಗಳು ಆಕ್ಸ್‌ಫರ್ಡ್‌ನ ಮಾಜಿ ವಿದ್ಯಾರ್ಥಿಗಳು. ಅವರಲ್ಲಿ ವಿನಾಯಕ ಕೃಷ್ಣ ಗೋಕಾಕ, ಗಿರೀಶ ಕಾರ್ನಾಡ ಮುಂತಾದ ಸಾಹಿತಿಗಳು ಹಾಗೂ ಪ್ರಸ್ತುತ ಪ್ರಧಾನಿ ಮನಮೋಹನ ಸಿಂಗ್ ಕೂಡ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದ ಹಿಂದಿನ ವಿದ್ಯಾರ್ಥಿಗಳು. ನಂತರ ವಿಂಡ್ಸರ್ ಕೋಟೆ ವರ್ಣನೆ, ಥೇಮ್ಸ್ ನದಿಯ ಬ್ಯಾರಿಯರ್, ಶೇಕ್ಸ್‌ಪಿಯರ್‌ನ ಜನ್ಮಸ್ಥಳಕ್ಕೆ ಭೇಟಿ. ಆ ಮಹಾನ್ ನಾಟಕಕಾರನ ಕುರಿತು ದೇಶ ಇಟ್ಟುಕೊಂಡ ಅಪಾರ ಪ್ರೇಮ ಅದ್ಭುತವಾದುದು. ಇನ್ನೊಂದು ರೋಚಕ ಸಂದರ್ಶನ– ಲಂಡನ್ ಪಕ್ಕದಲ್ಲೊಂದು ಪಂಜಾಬನಗರ. ಅಲ್ಲಿ ಬಹುಸಂಖ್ಯೆಯಲ್ಲಿರುವ ಪಂಜಾಬಿಗಳ ನಿತ್ಯ ಜೀವನದ ಪರಿ ಹೇಳುತ್ತಾರೆ. ಲಂಡನ್ನಿನ ಜಗತ್ಪ್ರಸಿದ್ಧ ಮೇಣದ ಪುತ್ಥಳಿಗಳ ಮೇಡಂ ಟುಸಾಡ್ಸ್ ಮ್ಯೂಜಿಯಂ, ಜೈಪುರ ಚಿತ್ರಕಲಾವಿದೆಯ ನೈಪುಣ್ಯ, ಮುಖ್ಯವಾಗಿ ಮಹದೇವಯ್ಯನವರ ಸೇವಾ ಅಗಾಧತೆ ಹಾಗೂ ವಚನಸಾಹಿತ್ಯ ಪ್ರೇಮ, ಭಾರತೀಯ ವಿದ್ಯಾಭವನ– ಹೀಗೆ ನೂರೆಂಟು ವಿಷಯಗಳ ಚರ್ಚೆಯಿದೆ. ಇದೊಂದು ಯಶಸ್ವಿ ಪ್ರವಾಸ ಕಥನ.

– ಡಾ. ವಸಂತ ಅ. ಕುಲಕರ್ಣಿ, ೧೯೯೨, ೬ನೇ 'ಬಿ' ಕ್ರಾಸ್, ೧ನೇ 'ಬಿ' ಮೇನ್, ಕೆಂಗೇರಿ ಉಪಗ್ರಹನಗರ, ಬೆಂಗಳೂರು-೫೬೦ ೦೬೦

೪. ದರ 'ಬಾರಿ'ನಲ್ಲೊಂದು ಸಂಜೆ : ಪ್ರಾಣೇಶ ಜಮಖಂಡಿ

ಚೇತನಾ ಪ್ರಕಾಶನ, 'ಶ್ಯಾಮಪ್ರಿಯ', ಕಬ್ಬೂರ ರಸ್ತೆ, ಮಾಳಮಡ್ಡಿ, ಧಾರವಾಡ-೭. ಪ್ರಮು. ೨೦೦೬. ಪು. ೧೬೪, ರೂ. ೩೫/-

ಜೀವನವು ಯಾಂತ್ರೀಕೃತವಾಗುತ್ತಿರುವ ಇಂದಿನ ದಿನಮಾನಗಳಲ್ಲಿ ಮನುಷ್ಯ ತನ್ನ ನಗುವನ್ನೇ ಕಳೆದುಕೊಂಡಂತಿದ್ದಾನೆ. ಜಾಗತೀಕರಣ ಹಾಗೂ ವಿದ್ಯುನ್ಮಾನಗಳಿಂದ ಜಗತ್ತೇ ಕುಬ್ಜವಾಗಿದೆ. ಎಲ್ಲರ ಬದುಕಿನ ವೇಗವೂ ಹೆಚ್ಚಿದೆ. ಯಾರಿಗೂ ಯಾವುದಕ್ಕೂ ಪುರುಸೊತ್ತಿಲ್ಲ. ಪುಸ್ತಕ ಓದುವ ಹವ್ಯಾಸ, ಟಿ.ವಿ., ರಂಗಭೂಮಿಯ ಆಸಕ್ತಿಯನ್ನು ಸಿನೆಮಾಗಳು ಕಬಳಿಸುತ್ತಿವೆ. 'ನಗುವುದು ಸಹಜ ಧರ್ಮ' (ಡಿ.ವಿ.ಜಿ.) ಆಗಬೇಕಾದದ್ದು ಇಂದು ದುಬಾರಿಯಾಗುತ್ತಿದೆ. ನಗೆಕೂಟ, ನಗೆಹಬ್ಬ, ಹಾಸ್ಯಗೋಷ್ಠಿ, ಇತ್ಯಾದಿಗಳಲ್ಲಿ 'ನಗದು' ಪಡೆದು ನಗಿಸುವುದಕ್ಕಾಗಿಯೇ ನಮ್ಮಲ್ಲಿ ಕೆಲವರು ತಯಾರಾಗಿದ್ದಾರೆ. ನಗಿಸುವುದಕ್ಕಾಗಿಯೇ ಕನ್ನಡದ ಕೆಲವು ಚಿತ್ರಗಳು, ನಾಟಕಗಳು ಬಂದಿವೆ, ಬರುತ್ತಿವೆ. ಇವೆಲ್ಲ ಕೆಲವೊಮ್ಮೆ ಹಾಸ್ಯದ ಹೆಸರಲ್ಲಿ ಅಪಹಾಸ್ಯವಾಗುವುದಲ್ಲದೆ, ಕೇಳಿದ ಹಳಸಲು ಜೋಕುಗಳನ್ನೇ ಪದೇಪದೇ ಕೇಳಬೇಕಾಗುತ್ತದೆ. ಇಂದಿನ ಅನೇಕ ಪತ್ರಿಕೆ, ನಿಯತಕಾಲಿಕೆಗಳೂ ಸಹಿತ ಹಾಸ್ಯ ಬರಹಗಳಿಗೆ ವಿಶೇಷ

ಗಮನ ಕೊಡುತ್ತಿವೆ. ಹಾಸ್ಯದ ಅನೇಕ ಪುಸ್ತಕಗಳೂ ಬರುತ್ತಿವೆ. ಅಂಥ ಪುಸ್ತಕಗಳಲ್ಲಿ ಪ್ರಾಣೇಶ ಜಮಖಂಡಿ ಅವರ "ದರ'ಬಾರಿ'ನಲ್ಲೊಂದು ಸಂಜೆ" ಇತ್ತೀಚಿನ ಸೇರ್ಪಡೆ.

ವೃತ್ತಿಯಿಂದ ತಲೆಬಿಸಿಯ ವಾಣಿಜ್ಯ ತೆರಿಗೆ ಇಲಾಖೆಯಲ್ಲಿ ಕೆಲಸಗಾರರಾಗಿದ್ದರೂ ಪ್ರವೃತ್ತಿಯಿಂದ ಬರಹಗಾರರಾದ ಪ್ರಾಣೇಶ ಅವರಲ್ಲಿ ಒಬ್ಬ ಅಪ್ಪಟ ಹಾಸ್ಯಗಾರನಿರುವುದನ್ನು ಅವರ ಈ ಮೊದಲ ಕೃತಿಯಲ್ಲಿಯೇ ಗುರುತಿಸಬಹುದಾಗಿದೆ. ಸಕ್ಕುಬಾಯಿ(ಬಜಜೇಡಿ), ಮ್ಯಾನುಫ್ಯಾಕ್ಚರಿಂಗ್ ಡಿಫೆಕ್ಟ್, ನಾಮದ ಬಲವೊಂದಿದ್ದರೆ, ದರಬಾರಿನಲ್ಲೊಂದು ಸಂಜೆ, ಕನ್ಯಾ(ಫ಼ಿ) ಪರೀಕ್ಷೆ! ಶಿ(ಕ್ಲಿ)ಷ್ಟಾಚಾರಗಳು, ಉದಾಸೀನತೆ, ಅಪ್ಪ(ಬೊಂ)ಬಾಯಿಗಳು, ಲಾಭದಾಯಕ ಹುದ್ದೆ ಇತ್ಯಾದಿ ಹದಿನಾರು ಲೇಖನಗಳು ಇಲ್ಲಿವೆ. ನಗರ, ಪಟ್ಟಣದ ಮಧ್ಯಮ ವರ್ಗದ ಘಟನೆಗಳೇ ಇಲ್ಲಿಯ ವಸ್ತುವಾಗಿರುವುದು, ಪಾತ್ರಗಳು ನಮ್ಮ ನೆರಳುಗಳಾಗಿಯೇ ಇರುವುದು ಲೇಖನಗಳು ವಾಸ್ತವತೆಗೆ ಹತ್ತಿರವಾಗಿರುವುದನ್ನು ಸೂಚಿಸುತ್ತವೆ. ಇಲ್ಲಿನ ಲೇಖನಗಳಲ್ಲಿ ಕೌಟುಂಬಿಕ, ನೆರೆಹೊರೆ ಹಾಗೂ ಸಾಮಾಜಿಕ ವಿಷಯುಗಳಿದ್ದು ಓದಿಸಿಕೊಂಡು ಹೋಗುತ್ತಾ ಕಚಗುಳಿಯಿಟ್ಟು ನಗಿಸುವ ಗುಣ ಹೊಂದಿವೆ.

ಲೇಖಕರು ತಮ್ಮ 'ಬೋಳು ತಲೆ'ಯನ್ನೇ ವಸ್ತುವಾಗಿರಿಸಿಕೊಂಡು ಬರೆದ 'ಮ್ಯಾನುಫ್ಯಾಕ್ಚರಿಂಗ್ ಡಿಫೆಕ್ಟ್', ಮನೆ ಕಟ್ಟಿದ ಬವಣೆಯನ್ನೇ ವಸ್ತುವಾಗಿಸಿದ 'ಓಹೋ ನನ್ನ ಮನೆಯಂತೆ', ಬೆಂಗಳೂರೆಂಬ ಗುಲಾಬಿ ನಗರದಲ್ಲಿ ಸಾಮಾನ್ಯರ ಕಛೇರಿ ಕೆಲಸಗಳನ್ನು ದೂರದವರು ಮಾಡಿಸಿಕೊಳ್ಳುವ ಪಡಿಪಾಟಲು ಹೇಳುವ 'ದರ'ಬಾರಿ'ನಲ್ಲೊಂದು ಸಂಜೆ', ಕೃತಕವಾಗಿ ನಾವು ದಿನನಿತ್ಯ ರೂಢಿಸಿಕೊಂಡಿರುವ ಶಿಷ್ಟಾಚಾರಗಳು 'ಕ್ಲಿಷ್ಟಾಚಾರ'ಗಳಾಗುವುದು, ಪೊಲೀಸ್ ಕೆಲಸ ಸಿಕ್ಕರೆ ಆಗುವ ಅವಘಡಗಳನ್ನು ಚಿತ್ರಿಸುವ 'ಲಾಭದಾಯಕ ಹುದ್ದೆ' ಇತ್ಯಾದಿ ಲೇಖನಗಳು ಚೆನ್ನಾಗಿ ಮೂಡಿಬಂದಿವೆ, ಸದಾ ನೆನಪಿನಲ್ಲಿ ಉಳಿಯುವಂತಿವೆ. ಪ್ರಾಣೇಶರ ಎಲ್ಲ ಲೇಖನಗಳಲ್ಲಿ ಓದಿಸಿಕೊಳ್ಳುವ ಗುಣವಿದೆ. ಸಾಹಿತ್ಯದ ಗುಣಗಳಿಂದಲೂ ಕೂಡಿರುವ ಈ ಪುಸ್ತಕ ಅವರನ್ನು ಭರವಸೆಯ ಹಾಸ್ಯ ಲೇಖಕರನ್ನಾಗಿ ಮಾಡುವಲ್ಲಿ ಯಶಸ್ವಿಯಾಗಿದೆ.

– ಡಾ. ಬಿ. ಜಿ. ಚನ್ನೇಶ್ ಹೊನ್ನಾಳಿ, ಕನ್ನಡ ವಿಭಾಗ, ಸ.ಪ್ರ.ದ. ಕಾಲೇಜು, ಹಿರೇಕೆರೂರ (ಹಾವೇರಿ)

೫. ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಯುದ್ಧ ಕಲೆ : ಡಾ. ಶ್ರೀಧರ ಎಚ್. ಜಿ.

ಶಿ. ಕಾರಂತ ಅಧ್ಯಯನ ಕೇಂದ್ರ, ವಿವೇಕಾನಂದ ಕಾಲೇಜು, ಪುತ್ತೂರು. ಪ್ರ.ಮು. ೨೦೦೨. ಪು. ೬೮೨. ರೂ. ೧೬೦/-

ಕನ್ನಡ ನಾಡಿನಲ್ಲಿ ನಡೆದ ಅನೇಕ ಯುದ್ಧಗಳ ಸತ್ಯಾಸತ್ಯತೆಗಳನ್ನು ನಿಕಷಕ್ಕೊಡ್ಡುವ ಪ್ರಯತ್ನವಾಗಿ ಅಥವಾ ಆ ಮೂಲಕ ಕರ್ನಾಟಕದ ಸಾಂಸ್ಕೃತಿಕ ಬದುಕಿನ ಪ್ರಮುಖ ಅಂಶವೊಂದನ್ನು ಪುನಾರಚಿಸುವ ಸಲುವಾಗಿ ಡಾ. ಶ್ರೀಧರ್ ಎಚ್. ಜಿ. ಅವರು ಈ ಸಂಶೋಧನ ಗ್ರಂಥವನ್ನು ಸಿದ್ಧಪಡಿಸಿದ್ದಾರೆ.

ಇಂಡೋ-ಆರ್ಯನರ ಭಾರತ ಪ್ರವೇಶದಿಂದ ಮೊದಲ್ಗೊಂಡು ಇಲ್ಲಿ ಆದ ಮಹತ್ವದ ಚಾರಿತ್ರಿಕ ಯುದ್ಧಗಳ ಬಗ್ಗೆ ಇರುವ ಮಾಹಿತಿ ಒಂದು ಕಡೆ, ವೇದಕಾಲದಿಂದ ಮೊದಲ್ಗೊಂಡು ನಡೆದ ಆರ್ಯ-ಅನಾರ್ಯರ ಸಂಘರ್ಷಗಳು ಇನ್ನೊಂದು ಕಡೆ– ಇವೆಲ್ಲವನ್ನು ಶ್ರೀಧರರು ಪೀಠಿಕೆ ರೂಪದಲ್ಲಿ ವಿಶದಪಡಿಸುತ್ತಾರೆ. ಪ್ರಾಚೀನ ಭಾರತದಲ್ಲಿ ಯುದ್ಧಕಲೆ ಹೇಗಿತ್ತು? ಅದಕ್ಕೆ ಬಳಸುತ್ತಿದ್ದ ಆಯುಧಗಳೇನು? ರಾಜನೀತಿ ಗ್ರಂಥಗಳು ಏನು ಹೇಳುತ್ತವೆ? ಇತ್ಯಾದಿ ವಿವರಗಳನ್ನೂ ಅವರು ನೀಡುತ್ತಾರೆ.

ಮೌರ್ಯರು, ಕದಂಬರು, ರಾಷ್ಟ್ರಕೂಟರು, ಚಾಲುಕ್ಯರು, ಚೋಳರು ಮುಂತಾದ ರಾಜರುಗಳ ಕಾಲದಲ್ಲಿದ್ದ ಕವಿಗಳು ಚಾರಿತ್ರಿಕ ಕಾಲದ ಯುದ್ಧಾನುಭವವಿಟ್ಟುಕೊಂಡು ಪುರಾಣ ಕಾಲದ ಯುದ್ಧವನ್ನು ವರ್ಣಿಸುತ್ತಿದ್ದರು. ಆ ಕಾಲದ ಪಂಪ, ರನ್ನಾದಿಗಳು ಇದಕ್ಕೆ ಉತ್ತಮ ನಿದರ್ಶನ. ಕವಿರಾಜಮಾರ್ಗದಿಂದ ಮೊದಲ್ಗೊಂಡು ಅದೆಷ್ಟೋ ಹಳಗನ್ನಡ ಕೃತಿಗಳಲ್ಲಿ ಯುದ್ಧದ ಹತ್ತು ಹಲವು ಆಯಾಮಗಳನ್ನು ಕುರಿತು ಹೇಳಲಾಗಿದೆ. ಶಾಸನಗಳು– ಅದರಲ್ಲೂ ವೀರಗಲ್ಲು, ಮಾಸ್ತಿಕಲ್ಲು ಮೊದಲಾದವುಗಳಲ್ಲಿ ಯುದ್ಧದ

ಕುರಿತಾದ ಮಾಹಿತಿಗಳಿವೆ. ಲೋಹಯುಗದ ಆಯುಧಗಳ ವರ್ಣನೆ ಚಾರಿತ್ರಿಕ ಸತ್ಯಗಳಾದರೆ ಪುರಾಣ ಕಾಲದ ಆಯುಧಗಳಲ್ಲಿ ಕಂಡುಬರುವ ವಿವಿಧ ಬಗೆಯ ಬಾಣಗಳು, ದೈವಿಕ ಅಸ್ತ್ರಗಳು ಸಾಮಾಜಿಕ ಬದುಕಿನಿಂದ ದೂರವಾದವುಗಳು.

ಡಾ. ಶ್ರೀಧರ್ ಅವರು ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಯುದ್ಧ ಕಲೆಯ ಬಗ್ಗೆ ವಿವರಿಸಹೊರಟಾಗ ಚಾರಿತ್ರಿಕ ಸತ್ಯಗಳನ್ನು ಕುರಿತ ಮಾಹಿತಿಗಳಿಗೆ ಅಂಥ ಮಹತ್ವ ಬರುವುದಿಲ್ಲ. ಸಾಹಿತ್ಯದಲ್ಲಿ ಯುದ್ಧ ಕಲೆ ಎಂದಾಗ ಅದು ಚರಿತ್ರೆಯ ಕಾಲಘಟ್ಟದಲ್ಲಾದ ಯುದ್ಧಗಳ ವರ್ಣನೆ ಆಗಬೇಕೆಂದೇನೂ ಇಲ್ಲ. ಕವಿಗಳು ಚರಿತ್ರೆಯ ಕಾಲದವರಾಗಿದ್ದು ಅವರ ಕಾವ್ಯಗಳು ಪುರಾಣಕಾಲಕ್ಕೆ ಅನ್ವಯವಾಗುವಂತಿದ್ದು, ಕೃತಿರಚನೆಯಾದಾಗ ಪುರಾಣ ಕಾಲದ ಯುದ್ಧಗಳಿಗೆ ಚಾರಿತ್ರಿಕ ರೂಪ ಬರುತ್ತದೆ. ಅದು ಕಾವ್ಯವೈಭವವನ್ನು ತೋರುತ್ತದೆಯೇ ಹೊರತು ಸಹಜ ಪ್ರಕ್ರಿಯೆಯೆನಿಸುವುದಿಲ್ಲ. ಹೆಚ್ಚಿನ ಶಾಸನಗಳಲ್ಲಿ ಯುದ್ಧದ ಚಾರಿತ್ರಿಕ ದಾಖಲಾತಿಯಷ್ಟೇ ಇರುವುದರಿಂದ ಅವನ್ನು 'ಸಾಹಿತ್ಯ' ಎಂದು ಕರೆಯುವಂತಿಲ್ಲ. ಶ್ರೀಧರ್ ಅವರ ಗ್ರಂಥದ ಮುಖಪುಟದಲ್ಲಿ ಕ್ರಿ.ಶ. ೪೫೦ ರಿಂದ ೧೩೫೦ ರ ವರೆಗಿನ ಕಾಲಘಟ್ಟವನ್ನು ಗುರುತಿಸಿರುವುದರಿಂದ ಅವರ ಸಂಶೋಧನೆಗೆ ಚಾರಿತ್ರಿಕ ಮಹತ್ವವೇ ಹೆಚ್ಚು. ಆದರೆ ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಯುದ್ಧಕಲೆ ಎಂಬ ಶಿರೋನಾಮೆಗೆ ಹೊಂದಿಕೊಂಡು ನೋಡಿದಾಗ ಕೃತಿರಚನೆಯಾದ ಕಾಲಘಟ್ಟದ ಸಾಹಿತ್ಯಕ ಮಹತ್ವ ಮುಖ್ಯವೇ ಹೊರತು ಚಾರಿತ್ರಿಕ ಮಹತ್ವವಲ್ಲ ಎಂದಂತಾಗುತ್ತದೆ. ಇಷ್ಟಾಗಿಯೂ ಶ್ರೀಧರ್ ಅವರು ಕಲೆಹಾಕಿದ ಮಾಹಿತಿ, ಚಾರಿತ್ರಿಕ, ಪೌರಾಣಿಕ ಅಂಶಗಳನ್ನು ಸಮನ್ವಯಗೊಳಿಸುತ್ತ ಸಾಗಿದ ರೀತಿ, ಸಂಶೋಧನೆಯ ಸೂಕ್ಷ್ಮತೆ ಮೆಚ್ಚತಕ್ಕದ್ದೇ ಆಗಿದೆ.

– ಡಾ. ನಾ. ದಾಮೋದರ ಶೆಟ್ಟಿ, ಪ್ರಸಾಧನ, ಭಾರತಿನಗರ, ಬಿಜೈ, ಮಂಗಳೂರು-೫೭೫ ೦೦೪

೬. *ಕುಮಾರವ್ಯಾಸ : ಪುನರ್‌ಪರಿಶೀಲನೆ : ಚನ್ನಬಸವಪ್ಪ ಬೆಟ್ಟದೂರು*

ಶ್ರೀ ಸಿದ್ಧಲಿಂಗೇಶ್ವರ ಪ್ರಕಾಶನ, ಸರಸ್ವತಿ ಗೋದಾಮ, ಗುಲಬರ್ಗಾ, ಪ್ರಮು. ೨೦೦೬, ಪು. ೧೨೦, ರೂ. ೬೦/-

ಕನ್ನಡ ಸಾಹಿತ್ಯದ ಚರಿತ್ರೆಯನ್ನು ವಿಮರ್ಶಾತ್ಮಕ ನಿಲುವಿನಿಂದ ಮೊದಲು ಬರೆದವರು ರಂ. ಶ್ರೀ. ಮುಗಳಿ. ಕಾಲಾನುಕ್ರಮದಲ್ಲಿ ಚರಿತ್ರೆಯನ್ನು ವಿವರಿಸುವ ಅವರು, ಸಾಹಿತ್ಯದ ವಿಶಿಷ್ಟ ಪ್ರವೃತ್ತಿಯನ್ನು ಒಂದೊಂದು ಯುಗದಲ್ಲಿ ಆರಂಭಿಸಿ, ಮುಂದಿನ ಕಾಲದ ಕವಿಗಳ ಮೇಲೆ ಪ್ರಭಾವ ಬೀರಿದವರೆಂಬ ಕಾರಣಕ್ಕಾಗಿ, ನಾಲ್ಕು ಕವಿಗಳ ಹೆಸರಿನಿಂದ ಯುಗ ವಿಭಾಗಗಳನ್ನು ಮಾಡಿದರು. ಅವುಗಳಲ್ಲಿ ೩ನೆಯದು ಕುಮಾರವ್ಯಾಸಯುಗ, ಪಂಪ, ಬಸವಯುಗಗಳೆಂಬ ಆ ಮೊದಲಿನ ವಿಭಾಗೀಕರಣದ ಬಗ್ಗೆ ಯಾರ ತಕರಾರೂ ವ್ಯಕ್ತವಾಗಲಿಲ್ಲ. ಮುಗಳಿಯವರ ಕನ್ನಡ ಸಾಹಿತ್ಯ ಚರಿತ್ರೆ ಪ್ರಕಟವಾದ ತತ್‌ಕ್ಷಣವೇ 'ಕುಮಾರವ್ಯಾಸಯುಗ' ಎಂಬ ವಿಭಾಗೀಕರಣವೇ ತಪ್ಪು ಮತ್ತು ಅವಾಸ್ತವ ಎಂದು, ಡಾ. ಆರ್. ಸಿ. ಹಿರೇಮಠ, ಬಿ. ಮಹಾದೇವಪ್ಪ, ಸುಗವೀರ ಶರ್ಮಾ ಮೊದಲಾದವರು ಆಕ್ಷೇಪವನ್ನೆತ್ತಿ ಲೇಖನಗಳನ್ನು ಪ್ರಕಟಿಸಿದರು. ಅದೇ ಹೊತ್ತಿಗೆ, ರಾಯಚೂರಿನ ಕನ್ನಡ ಪಂಡಿತ ಸುಗವೀರ ಶರ್ಮರು ಗದಗಿನ ಮಹಾಭಾರತವನ್ನು ಒರೆಗೆ ಹಚ್ಚಿ ತಿಕ್ಕಿ ನೋಡಿ "ಕೃತಿಯ ಕರ್ತೃ ಕುಮಾರವ್ಯಾಸ ಬ್ರಾಹ್ಮಣನೇ ಅಲ್ಲ; ಆತ ಶಿವಭಕ್ತ ಲಿಂಗಾಯತ" ಎಂದು ಅತ್ಯಂತ ಯುಕ್ತಿಯುಕ್ತ ಆಧಾರಗಳಿಂದ ಪ್ರತಿಪಾದಿಸಿದರು. ಇದನ್ನು ಪುಷ್ಟೀಕರಿಸಿದ ಯಾದಗಿರಿಯ ಟಿ. ಮಹಾದೇವಪ್ಪನವರು, ಪ್ರಭುಲಿಂಗಲೀಲೆಯ ಕರ್ತೃ ನೂರೆಂಟು ವಿರಕ್ತರಲ್ಲಿ ಒಬ್ಬನಾದ ಚಾಮರಸನೇ 'ಕುಮಾರವ್ಯಾಸ' ಕಾವ್ಯನಾಮದಿಂದ 'ಕರ್ನಾಟ ಭಾರತ ಕಥಾಮಂಜರಿ' ರಚಿಸಿದನೆಂದೂ ಸಾಮ್ಯಗಳ ಮೂಲಕ ಪ್ರತಿಪಾದಿಸಿದರು. ಹೀಗೆ ಮುಗಳಿ ಮೊದಲಾದ ಸಾಹಿತ್ಯ ವಿದ್ವಾಂಸರು ಕುಮಾರವ್ಯಾಸನ ಕುಲ, ಧರ್ಮ ಮತ್ತು ಕರ್ತೃತ್ವದ ಬಗ್ಗೆ ಆ ವರೆಗೆ ಪ್ರತಿಪಾದಿಸಿದ್ದ ಅಂಶಗಳನ್ನು ಕಲೆಕೆಳಗೆ ಮಾಡುವ ಸಂಶೋಧನ ಅಂಶಗಳು ೧೯೫೩ ರಲ್ಲೇ ಪ್ರಕಟವಾದವು. ಆಶ್ಚರ್ಯವೆಂದರೆ, ಈ

ಅಂಶಗಳು ಚರ್ಚೆಗೆ, ವಿಮರ್ಶೆಗೆ ಒಳಗಾಗಲೇ ಇಲ್ಲ ಮತ್ತು ಮುಗಳಿಯವರ ಸಾಹಿತ್ಯಚರಿತ್ರೆ ಗ್ರಂಥ ಹತ್ತಾರು ಪುನರ್ಮುದ್ರಣಗಳನ್ನು ಕಂಡಾಗಲೂ 'ಕುಮಾರವ್ಯಾಸ ಯುಗ' ವಿಭಾಗ ಬದಲಾಗಲಿಲ್ಲ. ಸಂಶೋಧನೆಯ ಹೊಸ ವಿಚಾರಗಳು ಹೀಗೆ, ಪುಸ್ತಕೀಯವಾಗಿ ಉಳಿಯುವುದು ಕನ್ನಡಕ್ಕೆ ಹೊಸದೇನಲ್ಲ.

ವಿದ್ವತ್ ವಲಯದಲ್ಲಿ ನಿರ್ಲಕ್ಷ್ಯಕ್ಕೆ ಒಳಗಾಗಿದ್ದ ಈ ಅಂಶವನ್ನು ಮತ್ತೆ ಬೆಳಕಿಗೆ ತರುವುದಕ್ಕಾಗಿ ಚನ್ನಬಸವಪ್ಪ ಬೆಟ್ಟದೂರರು ಪ್ರಸ್ತುತ ಗ್ರಂಥ ಪ್ರಕಟಿಸಿದ್ದಾರೆ. ಇಲ್ಲಿ "ಕುಮಾರವ್ಯಾಸ ಯುಗಪುರುಷ ಹೇಗೆ?" ಎಂಬ ಪ್ರಶ್ನೆಯನ್ನವರು ತರ್ಕಬದ್ಧವಾಗಿ ಕೇಳಿ, ಉತ್ತರಿಸುವ ಪ್ರಾಮಾಣಿಕ ಪ್ರಯತ್ನವನ್ನು ಮಾಡಿದ್ದಾರೆ. "ಕುಮಾರವ್ಯಾಸನು ಲೋಕಪ್ರಿಯವಾದ ಭಾರತದ ಕತೆಯ ಮೂಲಕ, ಲಿಂಗವಂತರ ಲಿಂಗತತ್ತ್ವ ಸಕಲ ಜೀವಾತ್ಮರಿಗೆ ಲೇಸಬಯಸುವ ತತ್ತ್ವಗಳನ್ನು ಜನಮನೋಭೂಮಿಯಲ್ಲಿ ಬಿತ್ತಬೇಕೆಂದಾಶಿಸಿ, ಭಾರತದ ಬೃಹತ್ ಕತೆಗೆ ಮಾರುಹೋಗಿ, ಸಂಸ್ಕೃತದಲ್ಲಿದ್ದ ವ್ಯಾಸಭಾರತವನ್ನು ಕನ್ನಡದಲ್ಲಿ ರಚಿಸಿದ" (ಪು. ೪೭) ಎನ್ನುವ ಬೆಟ್ಟದೂರರ ಅನುಮಾನ (hypothesis) ಗ್ರಂಥದುದ್ದಕ್ಕೂ ಹಲವು ನಿಟ್ಟಿನ ಆಂತರಿಕ ಆಧಾರಗಳಿಂದ ಸಮರ್ಥನೆಗೊಂಡಿದೆ. ಪ್ರಭುಲಿಂಗಲೀಲೆ ಮತ್ತು ಕರ್ಣಾಟ ಭಾರತ ಕಥಾಮಂಜರಿ– ಕಾವ್ಯಗಳ ಸಾಮೀಪ್ಯವನ್ನು ಅನೇಕ ಹೋಲಿಕೆಗಳಿಂದ ಸಮರ್ಥಿಸುವ ಬಿ. ಮಹಾದೇವಪ್ಪನವರ ಪ್ರತಿಪಾದನೆ ಬೆಟ್ಟದೂರರಿಗೆ ಬೆಂಬಲವಾಗಿದೆ. ಪಂ. ಸುಗವೀರ ಶರ್ಮರ ವಾದದಲ್ಲಿಯೂ ಹುರುಳಿದೆ ಎಂದೆನಿಸುತ್ತದೆ. ೧೨ ನೆಯ ಶತಮಾನದಲ್ಲಿ ಸ್ಥಾಪಿತವಾದ ವಚನಕಾರರ, ಶಿವಶರಣರ ಸಾಹಿತ್ಯ ಚಳವಳಿ–ಧಾರ್ಮಿಕ ಚಳವಳಿಯು ದೇಸೀ ನಿಷ್ಠೆಯ ನೆಲೆಯದ್ದು; ಅದು ಬಸವಣ್ಣನ ಭಕ್ತಿತತ್ತ್ವದ ನಿಲುವಿನದು ಕೂಡ. ಆದ್ದರಿಂದ ೧೨ ರಿಂದ ೧೯ ರ ವರೆಗಿನ ಸಾಹಿತ್ಯಯುಗ 'ಬಸವಯುಗ' ಎಂದೆನಿಸಬೇಕಲ್ಲದೆ, 'ಕುಮಾರವ್ಯಾಸ ಯುಗ' ಆಗಲಾರದು. ಸುಗವೀರ ಶರ್ಮರ– ಮಂಡನೆ ಎಷ್ಟು ಬಿಗಿಯಾಗಿದೆಯೆಂದರೆ– ಎದುರುತ್ತರ ಕೊಡುವುದೇ ಪೇಚಿನದು. ಚನ್ನಬಸವಪ್ಪನವರು ಮರೆತುಹೋದ ಸತ್ಯಾಂಶವನ್ನು ಪುನರ್‌ಪರಿಶೀಲನೆಗೆ ಒಡ್ಡುವ ಮೂಲಕ, ಸಾಹಿತ್ಯ ಚರಿತ್ರೆಯನ್ನು ಕಟ್ಟಿಕೊಡುವವರಿಗೆ ಎಚ್ಚರಿಕೆಯನ್ನೂ ಕೊಟ್ಟಿದ್ದಾರೆ. ಕುಮಾರವ್ಯಾಸನಾಗಲಿ ಚಾಮರಸನಾಗಲಿ ತಮ್ಮ ಕೃತಿಗಳಲ್ಲಿ ಎಲ್ಲಿಯೂ ತಮ್ಮ ಊರು, ಕುಲ, ವಂಶ, ಪಂಥಗಳ ಬಗ್ಗೆ ಹೇಳಿಕೊಂಡಿಲ್ಲವಾದ್ದರಿಂದ, ಅವರ ಕಾವ್ಯೋದ್ದೇಶ ಮತಾತೀತವೂ ಕಾಲಾತೀತವೂ ಆಗಿದೆ ಎಂಬುದು– ಗಮನಾರ್ಹ. ಚರಿತ್ರೆಯ ಚೌಕಟ್ಟಿಗೆ ಒಳಪಡದ– ಅನಿರ್ಬಂಧ ಪ್ರತಿಭೆ– ಅಭಿವ್ಯಕ್ತಿಯ ಶಕ್ತಿಗಳವರು. ಅವರ ಬಗ್ಗೆ ಕೃತಿನಿಷ್ಠ ಅಧ್ಯಯನವೊಂದೇ ನಮಗಿರುವ ಅವಕಾಶ. ಈ ಪುಸ್ತಕ, ಅಂತಿಮವಾಗಿ ಸೂಚಿಸುವುದು ಇದನ್ನೇ.

– ಡಾ. ಶ್ಯಾಮಸುಂದರ ಬಿದರಕುಂದಿ, ೧೫೫, ೫ನೇ ಮುಖ್ಯರಸ್ತೆ, ನವನಗರ, ಹುಬ್ಬಳ್ಳಿ-೫೮೦ ೦೨೫

೭. *ಮೃತ್ಯುಂಜಯನ ಮೃತ್ಯುಪತ್ರ : ವೆಂಕಟೇಶ ಕುಲಕರಣಿ*

ಜಾಗೃತ ಭಾರತ, ೧ನೇ ತಿರುವು, ಸಾಧನಕೇರಿ, ಧಾರವಾಡ-೫೮೦ ೦೦೮, ಪ್ರಮು. ೨೦೦೫, ಪು. ೫೨, ರೂ. ೨೦/-

ವೆಂಕುರವರ ಆತ್ಮಕಥೆಯ ೨ನೆಯ ಭಾಗವಿದು. ಹೆಸರಿಗೆ ಅನ್ವರ್ಥಕವಾಗಿ ಒಂದು ರೀತಿಯ ಸ್ವಗತ ಸಂಭಾಷಣೆಯ ಗತಿ ಇದಕ್ಕೆ ಒದಗಿದೆ. ತನ್ನ ಕುತೂಹಲಕಾರಕ ಹಾಗೂ ಪ್ರಾಮಾಣಿಕ ಗುಣಲಕ್ಷಣ ಗಳಿಂದಾಗಿ ಮನ ಸೆಳೆಯುತ್ತದೆ; ಅವರ ವಿಶಿಷ್ಟ ವ್ಯಕ್ತಿತ್ವದ ಸ್ಪಷ್ಟ ಚಿತ್ರಣ ಅನಾವರಣಗೊಳ್ಳುತ್ತದೆ. ಕುವೆಂಪು ಅನುವಾದಿತ ಸ್ವಾಮಿ ವಿವೇಕಾನಂದರ 'ಸಂನ್ಯಾಸಿಗೀತೆ' ವೆಂಕು ಅವರ ಬದುಕಿನಲ್ಲಿ ಬೀರಿದ ಪ್ರಭಾವ ಅಪರಿಮಿತ.

ವೆಂಕು ಅವರು ಬಿ.ಎ. ಪದವೀಧರನಾದ ನಂತರ ಸಾಧಿಸಬೇಕೆಂದಿದ್ದ ಶಿಕ್ಷಕತ್ವ, ಪತ್ರಿಕಾ ಸಂಪಾದಕತ್ವ ಮತ್ತು ವಕೀಲಿಗಿರಿಯ ಸ್ಥಾನಮಾನವನ್ನು ಕಷ್ಟಪಟ್ಟು, ಪಣತೊಟ್ಟು, ಗಳಿಸಿದ್ದಾರೆ. ಅವರು ಮಹಾ ಸ್ವಾಭಿಮಾನಿ, ಮಾನವತಾವಾದಿ, ವಿಶ್ವಕುಟುಂಬಪ್ರೇಮಿ, ಖಡಾಖಂಡಿತವಾದಿ. ಅವರದು ನಿರಂತರ ಅಧ್ಯಯನನಿರತ ಪ್ರವೃತ್ತಿ ಹಾಗೂ ಕೆಚ್ಚೆದೆಯ ಮನೋದಾರ್ಢ್ಯವನ್ನು ಮೈಗೂಡಿಸಿಕೊಂಡ ದಣಿವರಿಯದ

ಹೋರಾಟದ ಚರ್ಯೆ. ತಮ್ಮನ್ನು ಹೆತ್ತು ಹೊತ್ತು ಸಾಕಿ ಸಲಹಿದ ನೆಲ ಬಿಜಾಪುರದ ಬಗೆಗೆ ಅತೀವ ಅಕ್ಕರೆ; ಎತ್ತಿಹಿಡಿದು ಬೆನ್ನು ತಟ್ಟಿದ ವೃತ್ತಿಬಾಂಧವರು, ಕಾಪಾಡಿದ ವೈದ್ಯರು ಮತ್ತು ಧಾರವಾಡದ ನಾಗರಿಕರನ್ನು ತುಂಬು ಮನದಿಂದ ಕೃತಜ್ಞತೆಯಿಂದ ಸ್ಮರಿಸಿಕೊಳ್ಳುವರು. ನೆಲದ ಕಾನೂನಿಗಿಂತ ಯಾರೂ ದೊಡ್ಡವರಲ್ಲ. ಕಾನೂನುಗಳ ಅಡಿಯಲ್ಲಿ ಮರೆಮಾಡಲ್ಪಟ್ಟ ಲೋಪದೋಷಗಳಿಂದ ಉಂಟಾಗುವ ದುಷ್ಪರಿಣಾಮಗಳ ಕುರಿತಂತೆ ವಿಶೇಷ ಗಮನ ಸೆಳೆಯುವರು.

ದೀನದಲಿತರ ಬಾಳ ಬೆಳಕಾಗಿ ಬಾಳಿದ ಅವರ ವೈಯಕ್ತಿಕ ಹಾಗೂ ಸಾರ್ವಜನಿಕ ಜೀವನದಲ್ಲಿ ಜರುಗಿದ ಕೆಲವು ಮೂಕವಿಸ್ಮಿತ, ಹೃದಯಸ್ಪರ್ಶಿ ಹಾಗೂ ಆಶ್ಚರ್ಯಕರ, ಹೃದಯ ಹಿಂಡುವ ವಿಭಿನ್ನ ಘಟನೆಗಳ ಸರಮಾಲೆಯ ಪ್ರಸಂಗಗಳು ಮೈನವಿರೇಳಿಸುತ್ತವೆ. ಅಸ್ಪೃಶ್ಯತೆಯ ವಿರುದ್ಧ ಅವರ ಕಾದಾಟ, ಜಾತ್ಯತೀತ ಮನೋಭಾವ ಉಲ್ಲೇಖನಾರ್ಹ. ಹರಿಜನ ಲಮಾಣಿ ಮಂದಿಯೊಡನೆ ಸಲಿಗೆ, ನ್ಯಾಯಕ್ಕಾಗಿ ಬಡಿದಾಟ ಮತ್ತು ಅಂತಃಕರಣಭರಿತವಾಗಿ ಬಡವರ ಕಣ್ಣೀರನ್ನು ಒರೆಸುವ ಸಂಕಲ್ಪ ಮತ್ತು ತವಕ ಹೊತ್ತಿಗೆಯಲ್ಲಿ ಅಚ್ಚೊತ್ತಿವೆ.

ಸೆಪ್ಟೆಂಬರ್ ೧೯೬೯ ರಂದು ತಮ್ಮ ವಕೀಲಿ ವೃತ್ತಿಯನ್ನು ಪ್ರಾರಂಭಿಸಿದಂದಿನಿಂದ ವೆಂಕುರವರು ಅದನ್ನು ಬಹುವಾಗಿ ಪ್ರೀತಿಸಿ, ಆರಾಧಿಸಿ ತನ್ಮೂಲಕ ಸಮಾಜಸೇವೆಯನ್ನು ಒಂದು ದೀಕ್ಷೆಯನ್ನಾಗಿ ಸ್ವೀಕರಿಸಿದವರು. ಹೊಗಳಿಕೆಗೆ ಹಿಗ್ಗದ, ತೆಗಳಿಕೆಗೆ ತಗ್ಗದ, ಕುಯುಕ್ತಿಗೆ ಕುಗ್ಗದ, ಬೈಗುಳಗಳಿಗೆ ಬಗ್ಗದ ಹಾಗೂ ಅನೀತಿಗೆ ಒಪ್ಪದ ಮನಸ್ಸು ಅವರದು. ಎಂತಹ ಕಠಿಣ ಪರಿಸ್ಥಿತಿಯಲ್ಲಿಯೂ ಕೋರ್ಟು ಬಹಿಷ್ಕಾರಕ್ಕೆ ಒಪ್ಪದ ಮನಸ್ಸು.

ಹುಟ್ಟಿದ ಜೀವಿಗೆ ಅನಿವಾರ್ಯವಾಗಿ ಬಂದೆರಗುವ ಸಾವಿಗೆ ಎಂದೂ ಹೆದರದ ವೆಂಕು ಸತ್ತ ನಂತರ ಉಳಿದವರ ಹಿತಕ್ಕಾಗಿ, ವೈದ್ಯಕೀಯ ಅಧ್ಯಯನದ ಉಪಯೋಗಕ್ಕಾಗಿ ಈಗಾಗಲೇ ತಮ್ಮ ಶವ ಹಾಗೂ ಉಪಯುಕ್ತ ಅಂಗಗಳಾದ ಮೂತ್ರಪಿಂಡ ಮತ್ತು ಕಣ್ಣುಗಳನ್ನು ದಾನ ನೀಡಲು ನಿರ್ಧರಿಸಿರುವುದು ಸಾರ್ಥಕ ಮತ್ತು ಅನುಕರಣೀಯ.

– ಡಾ. ಹೆಚ್. ಎ. ಪಾರ್ಶ್ವನಾಥ್ : ಎಸ್‌ಡಿಎಂ ಮೆಡಿಕಲ್ ಕಾಲೇಜು, ಸತ್ತೂರು, ಧಾರವಾಡ-೯

ಸಂಕಲನ : ಅನಿಸಿಕೆ

೧. ಮಾರ್ಚ್ ೨೩ ಮತ್ತು ೨೪ ರಂದು ಮೈಸೂರಿನ ಕೇಂದ್ರೀಯ ಭಾಷಾ ವಿಜ್ಞಾನ ಸಂಸ್ಥೆಯಲ್ಲಿ ಕನ್ನಡಕ್ಕೆ ಶಾಸ್ತ್ರೀಯ ಸ್ಥಾನ ಸಿಗುವುದರ ಹಿನ್ನೆಲೆಯಿಂದ ಕನ್ನಡ ವಿದ್ವಾಂಸರ ಸಭೆಯನ್ನು ಕರೆಯಲಾಗಿತ್ತು. ಅದಕ್ಕಾಗಿ ಕನ್ನಡದ ಪ್ರಾಚೀನತೆಯನ್ನು ಶ್ರುತಪಡಿಸುವುದು ಅವಶ್ಯವಿತ್ತಲ್ಲವೆ, ಆ ಸಂದರ್ಭದಲ್ಲಿ ಹಲವು ಜನ ಭಾಗವಹಿಸಿದವರು **ಸಂಕಲನ** ಪತ್ರಿಕೆಯಲ್ಲಿ ಬಂದ ಡಾ. ಎಸ್. ಶೆಟ್ಟರ ಅವರ ಲೇಖನಗಳನ್ನು ಆಧಾರವಾಗಿ ಉಲ್ಲೇಖಿಸಿದ್ದುದು ನನಗೆ ಅಭಿಮಾನವೆನಿಸಿತು. ಇದನ್ನು ಪ್ರಾಸಂಗಿಕವಾಗಿ ನಿಮ್ಮ ಗಮನಕ್ಕೆ ತರ್‍ತಾ ಇದ್ದೇನೆ. **– ಡಾ. ಶ್ರೀನಿವಾಸ ಹಾವನೂರ**, ಬೆಂಗಳೂರು

೨. ಎಲ್. ವಿ. ಶಾಂತಕುಮಾರಿಯವರ ಅಕ್ಕಮಹಾದೇವಿ ಕುರಿತ ಲೇಖನ ಅಕ್ಕನನ್ನು ಮತ್ತೆ ಹೊಸ ನಿಟ್ಟಿನಿಂದ ಅರಿಯುವ ದಾರಿ ತೋರಿದೆ. / ಕವಿರಾಜಮಾರ್ಗ ಕುರಿತ ಡಾ. ಎಸ್. ಶೆಟ್ಟರ್ ಅವರ ಲೇಖನಗಳಂತೂ ಇತಿಹಾಸ, ಸಂಸ್ಕೃತಿ, ಸಾಹಿತ್ಯ, ಸಮಾಜಶಾಸ್ತ್ರದ ಸಂಶೋಧಕರಿಗೆ ಶ್ರೇಷ್ಠ ಮಾದರಿಯೆನಿಸುವಂತಿವೆ. **– ಡಾ. ಕರುಣಾ ವಿಜಯೇಂದ್ರ**, ಬೆಂಗಳೂರು

೩. ಕಾನೂನು, ಸಾಹಿತ್ಯ, ಸಮಾಜ, ಸಂಸ್ಕೃತಿ ಮುಂತಾದ ವಿಚಾರ ಒಳಗೊಂಡಂತೆ ಸಾಕಷ್ಟು ರೀಡಿಂಗ್ ಮಟೀರಿಯಲ್ ಇರುವ **ಸಂಕಲನ** ಸಂಚಿಕೆಗಳನ್ನು ಓದುತ್ತಿದ್ದಂತೆ ಖುಶಿಯಾಗುತ್ತದೆ. ಮುಂಬರುವ ಸಂಚಿಕೆಗಳಿಗಾಗಿ ಕುತೂಹಲ ಹುಟ್ಟುತ್ತದೆ. **– ಎಂ. ಎಸ್. ನರಸಿಂಹಮೂರ್ತಿ**, ಬೆಂಗಳೂರು

೪. **ಸಂಕಲನ** ವಿಶಿಷ್ಟ ಪತ್ರಿಕೆ. ಇನ್ನೂ ಹೆಚ್ಚು ಜನರ ಕೈ ಸೇರುವಂತಾಗಲಿ. — **ಕು. ಗೋ.**, ಉಡುಪಿ

೫. **ಸಂಕಲನ** ಯಾವ ಸಂಚಿಕೆಯ ಬಗ್ಗೆ ಯಾರೇ ಬರೆದರೂ ಭಿನ್ನಾಭಿಪ್ರಾಯವಿಲ್ಲ. ಸಂಕಲನ ಓದುತ್ತಿದ್ದಂತೆ ರಸಿಕರ ಹೃದಯಸಮುದ್ರ ಉಕ್ಕೇರುವುದು ಸಹಜ. / ಅರವಿಂದ ಚೊಕ್ಕಾಡಿಯವರ 'ಶಾಲಾ ಶಿಕ್ಷಣದಲ್ಲಿ ಸೃಜನಶೀಲತೆ' ಸಂಕಲನದ ವೈಶಿಷ್ಟ್ಯ ಹೆಚ್ಚಿಸಿದ ಲೇಖನ.

— **ಡಾ. ವಾಮನ ಬೇಂದ್ರೆ**, ಧಾರವಾಡ

೬. **ಸಂಕಲನ-೩೨** ರಲ್ಲಿನ ಸ. ರಘುನಾಥ ಅವರ 'ಅವ್ವ ಅಪ್ಪ' ವಿಭಿನ್ನವಾಗಿದೆ. 'ಹೀಗೂ ಉಂಟೆ?' ಎಂದೆನಿಸದಿರದು. ಅದನ್ನು ಓದುತ್ತ ಎಸ್. ಎಲ್. ಭೈರಪ್ಪನವರ 'ಭಿತ್ತಿ'ಯಲ್ಲಿನ ಅಪ್ಪ ನೆನಪಾಗುತ್ತಾರೆ. / ಅಕ್ಕನ ಅಥವಾ ಮೀರಾಬಾಯಿಯ ಆಧ್ಯಾತ್ಮಿಕ, ಮಾನಸಿಕ ವಿರಹದನುಭವವನ್ನು ದೇಹದಲ್ಲಿಯೂ ಅನುಭವಿಸುವ, ಆನಂದಿಸುವ ಪರಿ ಮನೋವೈಜ್ಞಾನಿಕ ವಿಶ್ಲೇಷಣೆಗೂ ಮೀರಿದ್ದು ಎನಿಸುತ್ತದೆ. ಶಾಂತಕುಮಾರಿಯವರ ಲೇಖನ ಅನನ್ಯವಾಗಿದೆ. / 'ರಾಧಾನಾಟ'ದ ಬಗ್ಗೆ ನಾವು ಓದಿದ್ದು, ಕೇಳಿದ್ದು ಈಗಲೇ. ಡಾ. ಬಾಳಣ್ಣ ಸೀಗಿಹಳ್ಳಿಯವರ ಲೇಖನ ಅಭ್ಯಾಸಾರ್ಹವಾಗಿದೆ.

— **ವೆಂಕಟೇಶ ಮಾಚಕನೂರ, ಬೆಂಗಳೂರು**

೭. 'ಮಿತಿ' ಮೀರಿದ ಅರ್ಥಗಳನ್ನು ಅರುಹಿದ 'ಜುಗಲ್‌ಬಂದಿ'ಯ ಕಡೇಪುಟ ಖುಶಿ ಕೊಟ್ಟಿತು. / ನಿತ್ಯ ಜೀವನದಲ್ಲಿ ಆಗಾಗ ಮಕ್ಕಳ ಬಗ್ಗೆ ಮಮತೆ ಕಾಳಜಿಗಳಿಲ್ಲದ ಹಲ ಅಪ್ಪಂದಿರನ್ನು, ಕೆಲ ಅಮ್ಮಂದಿರನ್ನು ಕಾಣುತ್ತಿರುತ್ತೇವೆ. ಆಗೆಲ್ಲ ಆದಿಶಂಕರಾರ್ಯರಿಂದ ಆದಿಯಾಗಿ ಇಂದಿನ ಮಾಧ್ಯಮಗಳಿಂದಲೂ ವೈಭವೀಕರಿಸಲ್ಪಟ್ಟ ಕೆಲ ವಸ್ತು, ವಿಷಯಗಳಲ್ಲಿ 'ತಾಯಿ'ಯೂ ಒಂದು ಎಂದು ಅಂದುಕೊಳ್ಳುತ್ತೇನೆ. ಸ. ರಘುನಾಥ ಅವರ 'ಪ್ರೀತಿಯ ಕೈಗಳೇ ಇಲ್ಲದ ಅಮ್ಮ' ಇದಕ್ಕೊಂದು ನಿದರ್ಶನ. ಬಿಚ್ಚುಬರಹಕ್ಕೆ ಅಭಿನಂದನೆ. / 'ನಾಯಿ'ಯ ಸದ್ದು ಗದ್ದಲ ಜೋರಾಗಿರುವ ಈ ಸಂದರ್ಭದಲ್ಲಿ ಡಾ. ಮಿರ್ಜಾ ಬಷೀರ್ ಅವರ ಡೈಮಂಡ್ ನಾಯಿಯ 'ಒಂದು ಸಾವಿನ ಸುತ್ತ' ಹೃದಯ ತಟ್ಟಿತು. — **ವಸುಂಧರಾ ದೇಸಾಯಿ**, ಶಿವಮೊಗ್ಗ

೮. **ಸಂಕಲನ-೩೨** ರಲ್ಲಿನ ಅಜ್ಞೇಯ್ ಕಾವ್ಯನಾಮದ ಸ. ಹೀ. ವಾತ್ಸ್ಯಾಯನರ ಹಿಂದಿಯ 'ಪ್ರತೀಕ್'ನ ಎಲ್ಲಾ ಸಂಚಿಕೆಗಳು ತಮ್ಮ ಭಂಡಾರದಲ್ಲಿ ಇವೆ ಎಂದು ತಿಳಿದು ಸಂತೋಷವಾಯಿತು. ಅವುಗಳಲ್ಲಿನ ಆಯ್ದ ಅಮೂಲ್ಯ ಲೇಖನಗಳನ್ನು ಕನ್ನಡೀಕರಿಸಿ **ಸಂಕಲನ**ದಲ್ಲಿ ಕಂತಿನಲ್ಲಿ ಪ್ರಕಟಿಸಿದರೆ ನಮ್ಮ ಜನರಿಗೂ ಆ ಸಾಹಿತ್ಯಸೌರಭ ಸವಿಯುವ ಅವಕಾಶವಾದೀತು. / ಅರವಿಂದ ಚೊಕ್ಕಾಡಿಯವರು 'ಶಾಲಾ ಶಿಕ್ಷಣದಲ್ಲಿ ಸೃಜನಶೀಲತೆ' ಲೇಖನದಲ್ಲಿ ಈಗ ಜಾರಿಯಲ್ಲಿರುವ ಇಂಗ್ಲಿಶ್ ಶಿಕ್ಷಣ ಪದ್ಧತಿಯಲ್ಲಿನ ಲೋಪದೋಷಗಳು, ಅದರಿಂದಾಗುತ್ತಿರುವ ದುಷ್ಪರಿಣಾಮಗಳು, ಅದರ ಜಾಗಕ್ಕೆ ನಿಧಾನವಾಗಿ ಜನಪದೀಯ ಶಿಕ್ಷಣ ಪದ್ಧತಿಯನ್ನು ಮತ್ತು ಈಗಿರುವ ಯಾಂತ್ರಿಕ ಪರೀಕ್ಷಾ ಪದ್ಧತಿಯ ಬದಲಿಗೆ ಕ್ರಿಯೇಟಿವಿಟಿ ಓರಿಯಂಟೆಡ್ ಇವ್ಯಾಲ್ಯುಯೇಶನ್ ಮತ್ತು ಲರ್ನಿಂಗ್ ಓರಿಯಂಟೆಡ್ ಇವ್ಯಾಲ್ಯುಯೇಶನ್ ಪದ್ಧತಿಯನ್ನು ಜಾರಿಗೆ ತರುವ ಆವಶ್ಯಕತೆಯ ಅನಿವಾರ್ಯತೆಯ ಬಗ್ಗೆ ವಿಶದವಾಗಿ ಬಿಡಿಸಿ ಹೇಳಿ ಉಪಕಾರ ಮಾಡಿದ್ದಾರೆ. ಈ ಅಮೂಲ್ಯ ಲೇಖನ ಸಂಬಂಧಿಸಿದವರ ಕಣ್ಣು ತೆರೆಯಿಸಿ ಈ ದಿಸೆಯಲ್ಲಿ ಅವರು ಮುಂದುವರಿದರೆ ಅದರ ಒಟ್ಟು ಪರಿಣಾಮ ಸಮಾಜದ ಸ್ವಾಸ್ಥ್ಯದಲ್ಲಿ ಸಾಕಷ್ಟು ಸುಧಾರಣೆ ಸಾಧ್ಯ. / ಕಡೇಪುಟದಲ್ಲಿ 'ಜುಗಲ್‌ಬಂದಿ' ಪದಗಳ ಅರ್ಥವ್ಯಾಪ್ತಿಯನ್ನು ವಿಸ್ತರಿಸಿ ತುಂಬ ಸ್ವಾರಸ್ಯಕರವಾಗಿ ಹೇಳಿದ್ದೀರಿ. ಒಟ್ಟಿನಲ್ಲಿ **ಸಂಕಲನ** ತುಂಬಾ ಚೆನ್ನಾಗಿ ಬರುತ್ತಿದೆ. — **ಜಿ. ಹೆಚ್. ಪ್ರಸಾದ್**, ಹಾಸನ

೯. ಈ ಸಲದ **ಸಂಕಲನ** ಸಹ ಸಕಾಲದಲ್ಲಿ ಸರಿಯಾಗಿ ಬಂತ್ರಿ. 'ಜುಗಲಬಂದಿ'ಯ ಕಡೇಪುಟ ಭಾಳ ಚೆನ್ನಾಗಿತ್ರಿ. — **ಮುರಲೀಧರ ಉಪಾಧ್ಯಾಯ**, ಉಡುಪಿ

ಕಡೇಪುಟ : ಸಿದ್ಧಲಿಂಗ ಪಟ್ಟಣಶೆಟ್ಟಿ

ಎಷ್ಟೋ ದಿನ, ತಿಂಗಳು, ವರ್ಷಗಳ ನಂತರ ಇವತ್ತು ಮತ್ತ ಕತಿ ಹೇಳಬೇಕು ಅನಸಾಕ್ಹತ್ತೇತಿ. ನಮ್ಮ ನಾಯಿ ಮರಿ ಬೆಳ್ಳಿಯ ಬಾಲಾ ಹಿಡಕೊಂಡು ಅತ್ತಿತ್ತ ಜಗ್ಯಾಡಿ. ಕುಣಸ್ಯಾಡಿ ಆದಕ್ಕ್ಅ ಕತಿ ಹೇಳಾಕ ಸುರು ಮಾಡಿದೆ. ತಟ್ಟನ್ಅ ಮಗಳ ನೆನಪಾತು. ಆಕಿಗೆ ದಿನಾ ಕತಿ ಹೇಳತಿದ್ದೆ. ಮುಂಜಾನೆ, ಮಧ್ಯಾಹ್ನ, ಸಂಜೀಮುಂದ, ರಾತ್ರಿಹೊತ್ತು ಯಾವಾಗಂದರ ಆವಾಗ, ತಿಳತಿಳದ್ಹಂಗ ಕತಿ ಹೇಳತಿದ್ದೆ.

ಕಡಿಕಡೀಕ ಆಕಿ ತನ್ನ ಫರಮಾಯಿಶಿ ಹೇಳಾಕ ಸುರು ಮಾಡಿದ್ದಳು. ಇವತ್ತು ಮಂಗ್ಯಾನ ಬಾಲದ್ದು ಹೇಳು, ಕಡ್ಡೀ ಗಿಡಕ್ಕ ನಿಚ್ಚಣಿಕಿ ಇಟ್ಟು ಮ್ಯಾಲ ಹತ್ತಿತ್ತಲ್ಲಾ ಆ ಒಂಟೀ ಕತಿ ಹೇಳು, ಇವತ್ತು ಆಕಳ ಹುಲಿ ಗವ್ಯಾಗ ಕರಾ ಹಾಕಿದಾಗ ಆ ಕಂದನ ಕೂಡ ಹುಲಿ ಆಡಿತ್ತಲ್ಲಾ ಆ ಕತಿ ಹೇಳು... ಹಿಂಗ ನಾನ್ಅ ಹಿಂದ ಹೇಳಿದ ಅನೇಕ ಕತಿಗಳನ್ನ ಮತ್ತ ಮತ್ತ ನೆನಪಿಸಿ ಕೇಳಾಕ ಸುರು ಮಾಡಿದ್ದಳು. ಆಮ್ಯಾಲ ಕೆಲವು ದಿನ ಕಳದ ಮ್ಯಾಲ ತಟ್ಟನ ಮೊಗಂ ಆಗಿ ಇವತ್ತು ಚಿಕ್ಕೀ ಕತಿ ಹೇಳು, ಮಾವಿನ ಹಣ್ಣಿಂದ ಹೇಳು, ನರೀಮರಿ ಕುರೀಮರಿ ಹೇಳು, ಸಿಂಹ ನಾಯಿ ಹೇಳು ಅಂತ ಹಿಂಗ ವಿಷಯ ಕೊಟ್ಟು, ಕತಿ ಹೇಳು ಅಂತಿದ್ದಳು.

ಆಕಿ ಹಂಗ ಹೇಳಿದ ರೀತಿ, ಕತಿ ಕೇಳುವ ಹುಕಿ, ಹುರುಪು, ಎಷ್ಟ ಇರತಿತ್ತಂದರ ನನಗ ಬ್ಯಾಸರಾಗಿದ್ದರೂ, ನಿದ್ದಿ ಬರತಿದ್ದರೂ ಹೇಳಾಕ ಸುರು ಮಾಡತಿದ್ದೆ. ನನ್ನೊಳಗ ಆ ಕತಿಗಳು ಎಲ್ಲೆಲ್ಲಿ ಎಷ್ಟೆಷ್ಟು, ಹೆಂಗ ಇರತಿದ್ದುವೋ ಏನೋ, ಸಾವಕಾಶ ಎಳಿ ಬಿಚಗೊಂತ ಬಂದಬಿಡತಿದ್ದುವು. ಆ ಕತಿ, ಆ ಶಬ್ದ, ಅಲ್ಲಿಯ ಏರಿಳಿತ ಕೇಳಕೊಂತ ಹೂಮಗಳ ಕಣ್ಣಾಗ ಮೂಡುವ ಕಾಮನಬಿಲ್ಲು, ಕಂಬನಿ ಸೊಲ್ಲು, ನಗೀ ನಾಟಕಾ, ಕನಸಿನ ಕಲ್ಪನಾ, ಕ್ಯಾಕಿ ಒಂದೊಂದ ಈಗ ನನಗೂ ಕತಿ ಆಗ್ಯಾವು.

ಕತಿ ಅನ್ನೂದು ಇರೂದುಲ್ಲ, ಇರಬೇಕಂತನೂ ಇಲ್ಲ. ಕತಿ ಹುಟ್ಟತಾವು ಆಗತಾವು. ಕತೀ ಕೇಳೂ ಮನಸಿದ್ದವರು ಮುಂದ ಕುಂತರ ಹೇಳಬೇಕನ್ನೂ ಮನಸು ತಾನ್ಅ ಬರತಯ್ತಿ, ಹಂಗ್ಅ ಹೇಳಬೇಕು ಅನಿಸಿದಾಗ ಕೇಳಾವರನ್ನ ಹುಡಕಬೇಕು ಅನಸತಯ್ತಿ.

ಕತಿ ಹೇಳಬೇಕು ಕತಿ ಕೇಳಬೇಕು. ಹೇಳಕೊಂತ ಕೇಳಕೊಂತ ಕತಿ ಆಗಿಬಿಡಬೇಕು. ಕತಿ ಅನ್ನೂದು ಕನಸಿನ ಕಣ್ಣಿನ ಪರದಿ ಮ್ಯಾಲ ಪ್ರತಿಕ್ಷಣ ಪ್ರತಿನಿತ್ಯ ಹೊಸ ಹೊಸ ಪದಾ, ದನಿ, ಹಾಡು ಪಾಡು ಹೊತಗೊಂಡು ಬರುವ ಪ್ರತಿನಿತ್ಯದ ಸೂರ್ಯೋದಯ ಇದ್ಹಂಗ, ಚಂದ್ರೋದಯ ಇದ್ಹಂಗ. ಅವೇನು ನಮಗ ಹೇಳಿ ಕೇಳಿ ಬರೂದುಲ್ಲ, ಬರಬೇಕಾಗಿಲ್ಲ. ಕತೀನೂ ಯಾರ ಅನುಮತಿ, ಅಪ್ಪಣೆ ಪಡದು ಬರಬೇಕಾಗಿಲ್ಲ. ಕತಿ ಆಜ್ಞಾತೀತ, ಆಜ್ಞಾವರ್ತಿ ಎರಡೂ ಆಗಿರತಯ್ತಿ. ಹೇಳಿದರ ಕೇಳತಯ್ತಿ, ಹೇಳದಿದ್ದರ ತನ್ನ ಹಾದಿ ಹುಡುಕಿ ಹೊಂಟಬಿಡತಯ್ತಿ. ಸೂರ್ಯ ಚಂದ್ರರ ನಡಿಗಿ ಇದ್ಹಂಗ. ಹಗಲು ರಾತ್ರಿ ಎದರಾ ಬದರಾ ಕುಂತು ಮಾತಾಡಿದ್ಹಂಗ, ಬಿಸಿಲು ನೆರಳು ಬಗಾಟಬಗರಿ ಆಡಿದ್ಹಂಗ.

ಕತಿಗೆ ಕಾಲು, ಕಯ್ಯಿ, ಕಣ್ಣು, ಮನಸು ಅಸಂಖ್ಯಾತ ಅದಾವು. ಹಿಂಗಾಗಿ ಅವುನ್ನ ಎಲ್ಲಾ ಹಿಡದ ಇಡಾಕ ಆಗೂದುಲ್ಲಾ. ಆದರೂ ಅವುನ್ನ ಹಿಡೀಬೇಕು, ಹಿಂಡಬೇಕು; ರಸಾ ತಕ್ಕೊಂಡ ಇಟ್ಟಬಿಡಬೇಕು. ಅವು ಗಾಳ್ಯಾಗಿಂದ ರಸ ರಾಗ, ನೆಲದಾಗಿಂದ ರುಚಿ ಶುಚಿ ಹೀರಿ ಮತ್ತ ಚಿಗಿತಾವು. ಪುಟಿತಾವು, ರೆಕ್ಕಿ ಪುಚ್ಚ ಹಚಗೊಂಡು ಕನಸು ತುಂಬಿ ಫುರ್‍ರಂತ ಹಾರಿ ನಮ್ಮ ಮುಂದ ಬಂದು ನಕ್ಕೊಂತ ನಿಂತಬಿಡತಾವು. ಆ ಕತಿಗೆ ಕತ್ತೀ ಅಂತ ಬೈದರೂ ನಗತಯ್ತಿ, ಕತ್ತಿ ಅಂತ ಹೊಗಳಿದರೂ ನಗತಯ್ತಿ, ಕಥೀ ಅಂತ ವ್ಯಥೀಲೆ ಕರದರ ಕಾಲಾಗ ಬಂದ ಬಾಲಾ ಗುಂಡಾಡಸತಯ್ತಿ. ಏ ಕತಿ.

ಹಿಂಗ್ಯಾಕ ದೊಡ್ಡಾಟದ ತಾಳಾ ಹಾಕತಿ– ಅಂತ ನಾ ಹೆಜ್ಜೀ ಹಾಕಿದರ, ಎಂಥಾ ಮಾತಿನ ಮತಿ ನಿಂದು, ನೀ ಹುಣವೀ ಬೆಳಕಿನ ಇಂದು, ನಾನೇ ದೊಡ್ಡಾಟದ ಸಾರಥಿ, ನನ ಮುಂದ ನೀ ಏನ ಸಾರತಿ ಅಂತ ಹರೇ ತುಂಬಿದ ಕತಿ ಕಣ್ಣ ಮುಂದ ಬಂದು ಥಕಥೈ ಥಕಥೈ ಕುಣೀತಯ್ತಿ. ಹೌದು, ಹುಣಿವಿ ಅಂದರ ಬೆಡಗು, ಹುಣಿವಿ ಅಂದರ ಒಡಪು, ಹುಣಿವಿ ಅಂದರ ತಾಯಿ ಮಾಯಿ. ಹುಣಿವಿ ಅಂದರ ಅಮಾಸಿ ಬೆಳದಿಂಗಳ. ಹುಣಿವಿ ಅಂದರ ಪ್ರತಿಯೊಬ್ಬರ ಹಣೇಬರಹದ ಬಣವಿ.

ಅಂಥಾ ಹುಣಿವೀ ಕತಿ ಹೇಳು ಅಂತ ನನ್ನ ಮಗಳು ಇವತ್ತ ಮತ್ತ ಎದುರಿಗೆ ಬಂದು ಕುಂತಾಳು. ಯಾವ ಕತಿ ಏನು ಹುಣಿವಿ ಅಂತ ಸುಮ್ಮನ್‌ಅ ಕೇಳಿದೆ. ನಾಯಿ ಬಾಲಾ ಅಂದಳು. ನಮ್ಮ ಬೆಳ್ಳೀ ನಾಯಿ ಅಯ್ತಿಲ್ಲಾ ಅದರ ಬಾಲಾ ಅಂದಳು.

ಹೌದ ಮಗಳ, ಮೊನ್ನೆ ಅದು ಕಿತಗೊಂಡು ಕೈಯಾಗ ಬಂದಿತ್ತು ಅಂದೆ. ಆ್ಞ ಅಂತ ಬೆಚ್ಚಿದಳು. ಹೌದು, ಬೆಳ್ಳಿನ್ನ ಆಡಸಾಕ ಹತ್ತಿದ್ದೆ. ದಿನಾ ಕಿವ್ಹೀ ಜಗ್ಗಿ, ಎಳದು ಎತ್ತಿ ಹಿಡದು ಆಡಸತಿದ್ದೆ. ಮೊನ್ನೆ ಅದು ನಿಂತ ನಿಂತಲ್ಲೆ ಸುಳ್ಳೀ ಹೋಳಿಗಿ ಹಂಗ ಸುತ್ತಾಡಾಕ ಹತ್ತು. ತುಪ್ಪದಾಗ ಎದ್ದಿದ ಕರಗಡಬು ಹಿಡದಂಗ ಗಬಕ್ಕನ ಬಾಲಾ ಹಿಡದಬಿಟ್ಟೆ. ಕ್ಞೈ ಕುಯ್ಞ್ ಅನಕೊಂತ ಓಡಾಕ ಹತ್ತು. ಕಡಬು ಗಟ್ಟ್ಯಾಗಿ ಹಿಡದೆ. ಕಿತಗೊಂಡ ಕೈಯಾಗ ಬಂತು– ಅಂದೆ.

ಖರೇನ ಬಂತ!?– ನನ್ನ ಮಗಳ ೨೪ ವರ್ಷಗಳು, ಆ ವರ್ಷಗಳ ಒಂದು ಕೋಟಿ ಇಪ್ಪತ್ತಾರು ಲಕ್ಷ ಹದಿನಾಲ್ಕು ಸಾವಿರದಾ ನಾಲ್ಕುನೂರು ನಿಮಿಷಗಳು ಕುತೂಹಲದಿಂದ ಪ್ರಶ್ನೆ ಕೇಳಿದುವು.

ನಮ್ಮ ಹೆಸರು ಮತ್ತು ವಿಳಾಸ :

ದೂರವಾಣಿ :

ದಿನಾಂಕ : **ಚಂದಾದಾರರ ಸಹಿ**

ಗೆ,

ಸಂಪಾದಕರು

ಸಂಕಲನ

ಹೂಮನೆ, ಶ್ರೀದೇವಿನಗರ

ವಿದ್ಯಾಗಿರಿ, ಧಾರವಾಡ-೫೮೦ ೦೦೪

ಹೂಮಗಳು ಮತ್ತ ಮಗ್ಗೀ ಮುಗುಳು ಆದಳು. ಜಗತ್ತನ್ನ, ನೆಲಾ ಗಾಳಿ ಬೆಳಕು ಎಲ್ಲಾನ್ನೂ ಮತ್ತ ಹೊಸದಾಗಿ ಮೂಸಬೇಕು, ಅಂಥಾ ಕತಿ ಹೇಳು ಅಂದಳು.

ಹೌದು, ಕತಿ ಹೇಳಬೇಕು. ಕತಿ ಹೇಳಿದರ ಕತಿ ಆಗತೇವು, ಕತಿ ಕೇಳಿದರ ಕತಿ ಆಗತೇವು, ಕತಿ ಹೇಳುವ ಮತ್ತು ಕೇಳುವ ಮನಸ್ಸು ಉಳಿಸಿಕೊಂಡರ ಹೊಸ ಹೊಸಾ ಭಾವಜಗತ್ತಿನೊಳಗ ಸುತ್ತಾಡಿ ಬರತೇವು. ನಮ್ಮ ಕಲ್ಪನಾಲೋಕ ಇನ್ನಷ್ಟು ಮತ್ತಷ್ಟು ದೊಡ್ಡದಾಗತಯ್ತಿ. ಹೌದು, ಕತಿ ಹೇಳಬೇಕು, ಕೇಳಬೇಕು. ಯಾಕಂದರ ಬದುಕಬೇಕು, ಬದುಕು ಕಟ್ಟಬೇಕು, ಅದಕ್ಕ ಕತಿ ಬೇಕು.

...ಹೀಂಗ ಒಂದು ಊರಾಗ ಒಂದು ನಾಯಿ ಮರಿ ಇತ್ತು... ಅಂತ ಸುರು ಮಾಡಿದೆ.

ಇದು ಬ್ಯಾಡ, ಬೆಕ್ಕಿನ ಬೆನ್ನ ಮ್ಯಾಲ ಭರತನಾಟ್ಯ ಮಾಡಿತ್ತಲ್ಲಾ, ಇಲಿಮರಿ, ಅದರ ಕತಿ ಹೇಳು– ಅನಕೊಂತ ಪಕ್ಕಕ್ಕ ಬಂದ ಕುಂತ ಮಗ ಸಮುದ್ರ.

ಹೌದು ಮಗನ, ನಿನಗೂ ಈಗ ಬಾಯಿ ಬಂತು, ಭಾವ ಬಂತು, ಕತಿ ಬಂತು. ಕತಿ ಸ್ವಯಂ ಶಕ್ತಿ. ಮಹಾ ಅಭಿವ್ಯಕ್ತಿ. ಈಗ ಹೇಳತೇನಿ, ಮೊದಲು ನನಗ ಬೆಳ್ಳೀ ಬಾಲ ವಾಪಸ್ ಕೊಡು, ಮುಚ್ಚಿ ಇಟಗೊಂಡೀಯಲಾ ಅದನ್ನ ಕೊಡು; ಪಾಪ, ಬೆಳ್ಳಿಗೆ ಕುಣ್ಯಾಕ ಬೇಕಾಗೇತಿ, ವಾಪಸ್ ಕೊಡು ಅಂದೆ.

ಅದನ್ನ ಯಾಕ ಕೊಡಲಿ, ನನಗ ಬಾಲ ಬ್ಯಾಡೇನು...? ಕುಣಕೊಂತ ಬೆಕ್ಕಿನ ಕಿವಿ ಕಡಿದಿತ್ತಲ್ಲಾ ಇಲೀ ಮರಿ... ಆ ಕತಿ ಹೇಳು ಅಂತ ಸಮುದ್ರ ಅಕ್ಕನ ಪಕ್ಕಕ್ಕ ಕುಂತ. ಬೆಳ್ಳಿ ಬಂದು ಅವ್ವನ ಪಕ್ಕಕ್ಕ ಕುಂತ್ಯು.

ಚಂದಾದಾರರಾಗಲು ಕೋರಿಕೆ ಪತ್ರ

ಗೆ,

ಸಂಪಾದಕರು, ಸಂಕಲನ

ಹೂಮನೆ, ಶ್ರೀದೇವಿನಗರ, ವಿದ್ಯಾಗಿರಿ, ಧಾರವಾಡ-೫೮೦ ೦೦೪

✆ : ೦೮೩೬-೨೪೬ ೨೭೧೮

ಮಾನ್ಯರೆ,

೨೦೦೨ ಜನವರಿಯಿಂದ ಆರಂಭವಾಗಿರುವ ತಮ್ಮ ದ್ವೈಮಾಸಿಕ ಸಾಹಿತ್ಯ ಪತ್ರಿಕೆ **ಸಂಕಲನಕ್ಕೆ** ನಾವು / ನಮ್ಮ ಸಂಸ್ಥೆ ಚಂದಾದಾರರಾಗಲು ಬಯಸುತ್ತೇವೆ.

ಸಂಕಲನಕ್ಕೆ ೨೦೦೭ ರ ಒಂದು ವರ್ಷದ ಚಂದಾ ಹಣ ರೂ. ೨೦೦/- (ಚೆಕ್ ಇದ್ದರೆ ರೂ. ೨೨೦/-) ಅಥವಾ ೨೦೦೫, ೨೦೦೬, ೨೦೦೭ ಈ ಮೂರು ವರ್ಷಗಳ ಚಂದಾ ಹಣ ರೂ. ೫೦೦/- (ಚೆಕ್ ಇದ್ದರೆ ರೂ. ೫೫೦/-) ಎಂ.ಓ. / ಡಿ.ಡಿ. ಮೂಲಕ ಕಳಿಸುತ್ತಿದ್ದೇವೆ.

ಸಂಕಲನವನ್ನು ಹಿಂಬದಿಗೆ ತಿಳಿಸಿದ ನಮ್ಮ ವಿಳಾಸಕ್ಕೆ ಕಳಿಸಿರಿ.

FORM-IV

(Sec. Rule-8)

Statement about ownership and other particulars about Sankalana Bimonthly

1. Name of publication	:	SANKALANA
2. Place of publication	:	Dharwad
3. Periodicity of publication	:	Bimonthly
4. Language	:	Kannada
5. Name of the editor &	:	Dr. Siddhaling Pattanshetti
Address	:	Hoomane, Shridevinagar Vidyagiri, Dharwad-580 004
Nationality	:	Indian
6 Name of the publisher &	:	Dr. Hema Pattanshetti
Address	:	Hoomane, Shridevinagar Vidyagiri, Dharwad-580 004
Nationality	:	Indian
7. Name of the printer &	:	Saraswati Offset Printers
Address	:	Shivaji Road, Dharwad - 580 001
Nationality	:	Indian
8. Registration No.	:	RNI No. KARKAN 14160 / 10 / 1 / 2002 - TC
9. Proprietor	:	Sankalana Prakashana Hoomane, Shridevinagar Vidyagiri, Dharwad-580 004

I, Dr, Hema Pattanshetti, hereby declare that the particulars given above are true to the best of my knowledge and belief.

Sd/-
(Hema Pattanshetti)
Publisher

Date : 01-03-2007

ಅನನ್ಯ ಪ್ರಕಾಶನದ ವಿಮರ್ಶೆ, ವೈಚಾರಿಕ ಕೃತಿಗಳು

ಹೂಮನೆ, ಶ್ರೀದೇವಿನಗರ, ವಿದ್ಯಾಗಿರಿ, ಧಾರವಾಡ - ೫೮೦ ೦೦೪

೧. ಡಾ. ಸಿದ್ಧಲಿಂಗ ಪಟ್ಟಣಶೆಟ್ಟಿ : ಚಹಾದ ಜೋಡಿ ಚೂಡಾದ್ಹಾಂಗ :
ಭಾಗ-೧: ರೂ. ೧೧೦/-, ಭಾಗ-೨: ರೂ. ೭೫/-, ಭಾಗ-೩: ರೂ. ೯೦/-,
ಭಾಗ-೪: ರೂ. ೯೫/-, ಭಾಗ-೫: ರೂ. ೬೦/-

೨. ಡಾ. ಸಿದ್ಧಲಿಂಗ ಪಟ್ಟಣಶೆಟ್ಟಿ : ರಂಗಾಯಣ : ೫೦-೦೦; ೩. ಋಣಾನುಬಂಧ : ೫೫-೦೦
ಪರಿಭಾವನ : ೧೦೦-೦೦; ಅನುಸ್ವಾದನ : ೬೦-೦೦;
ಒಂದ್ ಗೆಸ್ಟ್ ಬೇಕಾಗೇತಿ : ೮೦-೦೦

೩. ಡಾ. ಹೇಮಾ ಪಟ್ಟಣಶೆಟ್ಟಿ : ಆಕಲನ : ೭೫-೦೦; ಹೊನ್ನಪುರ : ೧೫೦-೦೦
ಕನ್ನಡ ನಾಟಕಗಳಲ್ಲಿ ಸ್ತ್ರೀಲೋಕ : ೧೫೦-೦೦

೪. ಎನ್ಕೆ : ವಾಮನರಾವ್ ಮಾಸ್ತರ್ : ೪೦-೦೦

೫. ಅರವಿಂದ ಚೊಕ್ಕಾಡಿ : ಮಧ್ಯಮಪಥ : ೮೦-೦೦

೬. ಸಹೃದಯ : ಸಿದ್ಧಲಿಂಗ ಪಟ್ಟಣಶೆಟ್ಟಿ ಅಭಿನಂದನ ಗ್ರಂಥ : ೪೦೦-೦೦

SANKALANA: RNI No. KARKAN 14160/10/1/2002-TC

ಸಂಕಲನ : ಮೇ + ಜೂನ್ ೨೦೦೭

ಸಂಪುಟ ೬, ಸಂಚಿಕೆ ३

ಸಂಪಾದಕರು : ಸಿದ್ಧಲಿಂಗ ಪಟ್ಟಣಶೆಟ್ಟಿ + ಹೇಮಾ ಪಟ್ಟಣಶೆಟ್ಟಿ

●

ಪ್ರಸನ್ನ
ಬಸವರಾಜ ವಕ್ಕುಂದ
ರವಿ ಉಪಾಧ್ಯ
ವೈ. ಬಿ. ಹಾಲಬಾವಿ
ಚನ್ನಪ್ಪ ಅಂಗಡಿ ಬಮ್ಮನಹಳ್ಳಿ
ಚಂದ್ರಕಾಂತ ಕುಸನೂರ
ವಿಜಯಕಾಂತ ಪಾಟೀಲ
ಬಿ. ಎಸ್. ನಾಗರತ್ನಕುಮಾರಿ
ಎಸ್. ವಿ. ಪ್ರಭಾವತಿ
ಜಿ. ಡಿ. ಜೋಶಿ
ಆರ್. ತಾರಿಣಿ ಶುಭದಾಯಿನಿ
ಹೊರೆಯಾಲ ದೊರೆಸ್ವಾಮಿ
ದಮಯಂತಿ ನರೇಗಲ್ಲ
ಶ್ರೀಧರ ಪಿಸ್ಸೆ

●

ಸರ್ವಜಿತ
ದೇಶಪಾಂಡೆ ಸುಬ್ಬರಾಯ
ವಸಂತ ಆ. ಕುಲಕರ್ಣಿ
ಬಿ. ಜಿ. ಚನ್ನೇಶ್
ನಾ. ದಾಮೋದರ ಶೆಟ್ಟಿ
ಶ್ಯಾಮಸುಂದರ ಬಿದರಕುಂದಿ
ಹೆಚ್. ಎ. ಪಾರ್ಶ್ವನಾಥ್

●

ಶ್ರೀನಿವಾಸ ಹಾವನೂರ
ಎಂ. ಎಸ್. ನರಸಿಂಹಮೂರ್ತಿ
ವಾಮನ ಬೇಂದ್ರೆ
ವಸುಂಧರಾ ದೇಸಾಯಿ
ಕರುಣಾ ವಿಜಯೇಂದ್ರ
ಕು. ಗೋ.
ವೆಂಕಟೇಶ ಮಾಚಕನೂರ
ಜಿ. ಹೆಚ್. ಪ್ರಸಾದ್
ಮುರಲೀಧರ ಉಪಾಧ್ಯಾಯ

●

ಸಿದ್ಧಲಿಂಗ ಪಟ್ಟಣಶೆಟ್ಟಿ

●

ಸಂಕಲನ ಪ್ರಕಾಶನ

ಹೂಮನೆ, ಶ್ರೀದೇವಿನಗರ, ವಿದ್ಯಾಗಿರಿ, ಧಾರವಾಡ - ೫೮೦ ೦೦೪